ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

'ಅಮೃತಮತಿ' ಚಿತ್ರದ ನಟನೆಗೆ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ಹರಿಪ್ರಿಯಾ ಈ ವರ್ಷ ಚಂದನವನದಲ್ಲೇ ಹಲವು ವಿಭಿನ್ನ ಪಾತ್ರಗಳಿಗೆ ಬಣ್ಣಹಚ್ಚುತ್ತಿದ್ದಾರೆ.

ಆಳ-ಅಗಲ 2011ರ ವಿಶ್ವಕಪ್ ವಿಜಯಕ್ಕೆ ದಶಕದ ಸಂಭ್ರಮ

ಮಾರ್ಚ್: ದಾಖಲೆಯ ಜಿಎಸ್‌ಟಿ ಸಂಗ್ರಹ 13

ಅರಣ್ಯ ನಾಶವೇ ಭೂಕುಸಿತಕ್ಕೆ ಪ್ರಮುಖ ಕಾರಣ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
50,030 ▲	14,867 ▲	₹46,450 (ಬೆಂಗಳೂರು) ▲	₹66,100 (ಬೆಂಗಳೂರು) ▲

ಮೂಲ ಬಿಜೆಪಿಯ ಬಹುತೇಕರು ಮೌನ – ಈಶ್ವರಪ್ಪ ದೂರಿಗೆ ಸಚಿವರ ಅಸಮಾಧಾನ

ಬಿಎಸ್‌ವೈ ಬೆನ್ನಿಗೆ 'ಆಪ್ತ'ರ ದಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ವಿರುದ್ಧ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ 'ಬಂಡಾಯದ ಬಾವುಟ' ಹಾರಿಸಿ, ರಾಜ್ಯಪಾಲರಿಗೆ ದೂರಿತ್ತ ಬೆನ್ನಲ್ಲೇ ಹಲವು ಸಚಿವರು ಮತ್ತು ಶಾಸಕರು ಬಿ.ಎಸ್. ಯಡಿಯೂರಪ್ಪ ಬೆಂಬಲಕ್ಕೆ ಧಾವಿಸಿದ್ದಾರೆ.

ಯಡಿಯೂರಪ್ಪ

ಈಶ್ವರಪ್ಪ

ಮೂವರು ಉಪ ಮುಖ್ಯಮಂತ್ರಿಗಳ ಪೈಕಿ ಗೋವಿಂದ ಕಾರಜೋಳ, ಯಡಿಯೂರಪ್ಪ ಪರ ವಾದಿಸಿದರೆ, ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ, ಸಿ.ಎನ್.ಅಶ್ವತ್ಥನಾರಾಯಣ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಯಡಿಯೂರಪ್ಪ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿರುವ, ಮೂಲ ಬಿಜೆಪಿಯವರು ಎಂದು ಪ್ರತಿಪಾದಿಸುವ ಸಚಿವರು ಅಥವಾ ಶಾಸಕರು ತುಟಿ ಬಿಚ್ಚಿಲ್ಲ. ಅವರೆಲ್ಲ ಯಾರೊಬ್ಬರ ಪರ–ವಿರೋಧದ ನಿಲುವು ತಾಳದೇ ಮೌನಕ್ಕೆ ಶರಣಾಗಿದ್ದಾರೆ.

'ಎಲ್ಲರ ಖಾತೆಗಳಲ್ಲಿ ಹಸ್ತಕ್ಷೇಪ ಮಾಡುವ ಯಡಿಯೂರಪ್ಪ ಮತ್ತು ಅವರ ಮಗ ಬಿ.ವೈ. ವಿಜಯೇಂದ್ರ ನಡೆಗೆ ಬಹಿರಂಗವಾಗಿ ಆಕ್ಷೇಪಿಸುವ ಧೈರ್ಯ ಮಾಡಿದ್ದೀರಿ. ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎಂದು ಮೂಲ ಬಿಜೆಪಿಯ ಹಲವರು ಈಶ್ವರಪ್ಪ ಅವರಿಗೆ ತಿಳಿಸಿದ್ದಾರೆ' ಎಂದು ಆ ಪಕ್ಷದ ಮೂಲಗಳು ಹೇಳಿವೆ.

ಬಿಜೆಪಿ ತಲ್ಲಣ: ಈಶ್ವರಪ್ಪ ಪತ್ರ ಬಿಜೆಪಿಯಲ್ಲಿ ಕೋಲಾಹಲಕ್ಕೆ ಕಾರಣವಾಗಿದ್ದು, ಆಡಳಿತ ಪಕ್ಷವನ್ನು ತಲ್ಲಣಕ್ಕೆ ದೂಡಿದೆ. ಪತ್ರ ಬಹಿರಂಗವಾದ ಬೆನ್ನಲ್ಲೇ, ಯಡಿಯೂರಪ್ಪ ಅವರನ್ನು ಗುರುವಾರ ಬೆಳಿಗ್ಗೆ ಭೇಟಿ ಮಾಡಿದ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಆರ್. ಅಶೋಕ ಅವರು ಸುದ್ದಿಗೋಷ್ಠಿ ನಡೆಸಿದರು. ಅದರ ಬೆನ್ನಲ್ಲೇ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ನೇತೃತ್ವದ ಗುಂಪಿನ ಶಾಸಕರು ಸುದ್ದಿಗಾರರ ಎದುರು ಸರದಿಯಲ್ಲಿ ನಿಂತುಕೊಂಡು ಈಶ್ವರಪ್ಪ ಹೇಳಿಕೆಯನ್ನು ಟೀಕಿಸಿದರು.

ಈ ಬೆಳವಣಿಗೆ ಮಧ್ಯೆಯೇ, ಮುಖ್ಯಮಂತ್ರಿಯವರು 125 ವಿಧಾನಸಭಾ ಕ್ಷೇತ್ರಗಳಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಾಗಿ ₹1,313 ಕೋಟಿ ಅನುಮೋದನೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆ ಕಾಮಗಾರಿ ಕೈಗೆತ್ತಿಕೊಳ್ಳದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ 48 ಶಾಸಕರು ಸಹಿ ಮಾಡಿ ಮುಖ್ಯಮಂತ್ರಿಯವರಿಗೆ ಮಾರ್ಚ್ 18ರಂದು ದೂರು ನೀಡಿದ್ದ ಪತ್ರವನ್ನೂ ಮುಖ್ಯಮಂತ್ರಿ ಸಚಿವಾಲಯ ಈ ಎಲ್ಲ ಬೆಳವಣಿಗೆಗಳಾದ ಮೇಲೆ ಬಿಡುಗಡೆ ಮಾಡಿದೆ.

6ನೇ ಪುಟ ನೋಡಿ

ಸರ್ಕಾರ ವಜಾಕ್ಕೆ ಸಿದ್ದರಾಮಯ್ಯ ಆಗ್ರಹ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭ್ರಷ್ಟಾಚಾರದಲ್ಲಿ ನಿರತರಾಗಿದ್ದಾರೆ ಎಂದು ಸಚಿವ ಕೆ.ಎಸ್. ಈಶ್ವರಪ್ಪ ನೇರ ಆರೋಪ ಮಾಡಿರುವುದರಿಂದ ರಾಜ್ಯಪಾಲರು

ತಕ್ಷಣ ಮಧ್ಯ ಪ್ರವೇಶಿಸಿ ಮುಖ್ಯಮಂತ್ರಿಯನ್ನು ವಜಾಗೊಳಿಸಬೇಕು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಶಿಫಾರಸು ಮಾಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಗುರುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ರಾಜ್ಯದ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ. ಬಿಜೆಪಿ ಸರ್ಕಾರದಲ್ಲಿರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅಕ್ರಮಗಳ ಕುರಿತು ವಿರೋಧ ಪಕ್ಷದ ನಾಯಕನಾಗಿ ನಾನು ಮಾಡುತ್ತಾ ಬಂದಿರುವ ಆರೋಪಗಳಿಗೆ ಈಶ್ವರಪ್ಪ ಸಾಕ್ಷ್ಯ ಒದಗಿಸಿದ್ದಾರೆ' ಎಂದು ಹೇಳಿದ್ದಾರೆ.

'ಈಶ್ವರಪ್ಪ ಅವರು ಜೀವನದಲ್ಲಿ ಮೊದಲ ಬಾರಿಗೆ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಜಕೀಯ ಹಿತಾಸಕ್ತಿಗಿಂತ ರಾಜ್ಯದ ಹಿತಾಸಕ್ತಿ ಮುಖ್ಯ ಎಂದು ಸಾರಿದ್ದಾರೆ. ಇದಕ್ಕಾಗಿ ಅವರಿಗೆ ಅಭಿನಂದನೆ. ಅವರೂ ಮಾತಿಗೆ ಬದ್ಧರಾಗಿ ಉಳಿಯಬೇಕು. ಭ್ರಷ್ಟಾಚಾರ ಒಂದು ಇಲಾಖೆಗೆ ಸೀಮಿತವಾಗಿಲ್ಲ. ಇಡೀ ಸರ್ಕಾರವನ್ನೇ ಆವರಿಸಿಕೊಂಡಿದೆ' ಎಂದರು.

6ನೇ ಪುಟ ನೋಡಿ

ಸಿ.ಎಂಗೆ ಶಾಸಕರ ದೂರು: ಪತ್ರದ ಸಾರ

'ತಾವು ಮುಖ್ಯಮಂತ್ರಿ ಆದ ಬಳಿಕ ಹಿಂದೆಂದೂ ಕಂಡರಿಯದ 118 ವರ್ಷಗಳ ದಾಖಲೆಯ ಮಳೆ ಮತ್ತು ಪ್ರವಾಹ ಉಂಟಾಯಿತು. ಈ ಸಂದರ್ಭದಲ್ಲಿ ಮೂಲ ಸೌಕರ್ಯಗಳಿಗೆ ಹಾನಿ ಆಗಿತ್ತು. ಅವುಗಳನ್ನು ಪುನರ್ ಸ್ಥಾಪಿಸಲು ಎಲ್ಲ ಕ್ಷೇತ್ರಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಿದ್ದೀರಿ. 2019–20 ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ ಮತ್ತು ನಗರಾಭಿವೃದ್ಧಿ ಮೂಲಕ ಪ್ರತಿ ಕ್ಷೇತ್ರಗಳಿಗೆ ತಲಾ ₹25 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಕೊರೊನಾ ಸಂದರ್ಭದಲ್ಲೂ ಶಾಸಕ ಬೇಡಿಕೆಗಳಿಗೆ ಸ್ಪಂದಿಸಿ, ₹1,313 ಕೋಟಿ ಅನುದಾನವನ್ನು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುಮೋದನೆ ನೀಡಿದ್ದೀರಿ. ಆದರೆ, ಈ ಅನುದಾನದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕಾಮಗಾರಿಗಳಿಗೆ ಅನುಮೋದನೆ ನೀಡದೇ ಇರುವುದರಿಂದ ರಸ್ತೆ ಕಾಮಗಾರಿ ನಡೆದಿಲ್ಲ. ಈ ಕಾಮಗಾರಿ ಕೈಗೆತ್ತಿಕೊಂಡರೆ ಗ್ರಾಮೀಣ ಜನರಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು' ಎಂದು 48 ಶಾಸಕರು ಪತ್ರದಲ್ಲಿ ತಿಳಿಸಿದ್ದಾರೆ.

ಅರುಣ್‌ಸಿಂಗ್ ಬೇಸರ

ನವದೆಹಲಿ: ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ರಾಜ್ಯಪಾಲರಿಗೆ ಬಹಿರಂಗ ಪತ್ರ ಬರೆಯಬಾರದಿತ್ತು

ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅಭಿಪ್ರಾಯಪಟ್ಟರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ವಿಷಯದ ಬಗ್ಗೆ ಮನಸ್ತಾಪವಿದ್ದರೂ ಸಂಬಂಧಿಸಿದವರ ಜೊತೆ ಚರ್ಚಿಸಿ ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇಂಥ ವಿಷಯವನ್ನು ಪಕ್ಷದ ವೇದಿಕೆಯಲ್ಲೇ ಪ್ರಸ್ತಾಪಿಸಬೇಕು. ರಾಜ್ಯಪಾಲರಿಗೆ ಹೀಗೆ ದಿಢೀರ್ ಪತ್ರ ಬರೆಯುವ ಮೂಲಕ ಪಕ್ಷವನ್ನು ಮುಜುಗರಕ್ಕೆ ಈಡು ಮಾಡಬಾರದಿತ್ತು ಎಂದು ಹರಿಹಾಯ್ದರು.

ಪಕ್ಷದ ಮುಖಂಡರು ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಹಾಗೂ ಕರ್ನಾಟಕದ ಮೂರು ಕ್ಷೇತ್ರಗಳ ಉಪ ಚುನಾವಣೆಯ ಪ್ರಚಾರದಲ್ಲಿದ್ದಾರೆ. ಈಶ್ವರಪ್ಪ ಅವರ ದೂರಿನ ಕುರಿತು ಚುನಾವಣೆಯ ಫಲಿತಾಂಶದ ನಂತರ ಗಮನ ಹರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

6ನೇ ಪುಟ ನೋಡಿ

ಕಾನೂನು ತಜ್ಞರ ಅಭಿಮತ

ಸಚಿವರ ಹಣೆಬರಹ ಮುಖ್ಯಮಂತ್ರಿ ಅಧಿಕಾರ

ಬೆಂಗಳೂರು: ಸರ್ಕಾರದ ಯಾವುದೇ ಇಲಾಖೆಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವ, ಅನುದಾನ ಬಿಡುಗಡೆ ಮಾಡುವ ಅಧಿಕಾರ ಮುಖ್ಯಮಂತ್ರಿಗೆ ಇದೆ. ಸಂಪುಟದಲ್ಲಿ ಯಾರು ಇರಬೇಕು ಎಂಬುದನ್ನು ನಿರ್ಧರಿಸುವುದು ಅವರ ಪರಮಾಧಿಕಾರ ಎನ್ನುವುದು ಕಾನೂನು ತಜ್ಞರ ಅಭಿಮತ.

ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಸಚಿವ ಕೆ.ಎಸ್. ಈಶ್ವರಪ್ಪ ನೀಡಿರುವ ದೂರನ್ನು ಆಧರಿಸಿ ರಾಜ್ಯಪಾಲರು ಕ್ರಮ ಕೈಗೊಳ್ಳಬಹುದೇ, ಅವರಿಗೆ ಅಧಿಕಾರ ಇದೆಯೇ ಎಂಬ ಪ್ರಶ್ನೆಗೆ ಕಾನೂನು ತಜ್ಞರ ಪ್ರತಿಕ್ರಿಯೆ ಇಲ್ಲಿದೆ.

'ಜಗಳ ಆಡಬೇಡಿ ಎಂದಷ್ಟೇ ಹೇಳಬಹುದು'

ಇಂತಹ ವಿಚಾರಗಳಲ್ಲಿ ರಾಜ್ಯಪಾಲರಿಗೆ ಯಾವ ಅಧಿಕಾರವೂ ಇಲ್ಲ. ಅನುದಾನ ಬಿಡುಗಡೆ, ಆಡಳಿತಕ್ಕೆ ಸಂಬಂಧಿಸಿದಂತೆ ತೀರ್ಮಾನಗಳನ್ನು ಕೈಗೊಳ್ಳುವುದು ಮುಖ್ಯಮಂತ್ರಿಯವರ ವಿವೇಚನಾ ಅಧಿಕಾರದ ವ್ಯಾಪ್ತಿಗೆ ಸೇರಿದ ವಿಷಯಗಳು. ಮುಖ್ಯಮಂತ್ರಿಯು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಹೊಂದಿದ್ದಾರೆ. 'ರಾಜ್ಯದ ಹಿತವನ್ನು ನೋಡಿಕೊಂಡು ಆಡಳಿತ ನಡೆಸಿ. ಜಗಳ ಆಡಬೇಡಿ' ಎಂದು ಮುಖ್ಯಮಂತ್ರಿ ಮತ್ತು ಸಚಿವರಿಗೆ ಸಲಹೆ ನೀಡುವ ಅವಕಾಶ ರಾಜ್ಯಪಾಲರಿಗೆ ಇದೆ. ಸಚಿವರು ನೀಡಿದ ದೂರಿನ ಆಧಾರದಲ್ಲಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಇಲ್ಲ.

ಉದಯ್ ಹೊಳ್ಳ, ಹಿರಿಯ ವಕೀಲ

'ಮಧ್ಯಪ್ರವೇಶಕ್ಕೆ ಅಧಿಕಾರ ಇಲ್ಲ'

'ಇಂತಹ ಸನ್ನಿವೇಶಗಳಲ್ಲಿ ನೇರ ಮಧ್ಯಪ್ರವೇಶ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ'

ಬಿ. ವಿ. ಆಚಾರ್ಯ

6ನೇ ಪುಟ ನೋಡಿ

'ಸಿ.ಎಂ ಇಚ್ಛಿಸಿದರಷ್ಟೇ ಸಚಿವ ಸ್ಥಾನ ಉಳಿದೀತು'

'ಸರ್ಕಾರದ ದೈನಂದಿನ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಲು ರಾಜ್ಯಪಾಲರಿಗೆ ಅವಕಾಶವಿಲ್ಲ'



ಪ್ರೊ. ರವಿವರ್ಮ ಕುಮಾರ್

6ನೇ ಪುಟ ನೋಡಿ

ಸಣ್ಣ ಉಳಿತಾಯ ಬಡ್ಡಿ ಕಡಿತ: ಆದೇಶ ಹಿಂಪಡೆದ ಸರ್ಕಾರ

ನವದೆಹಲಿ (ಪಿಟಿಐ): ಸುಕನ್ಯಾ ಸಮೃದ್ಧಿ ಯೋಜನೆ, ಹಿರಿಯ ನಾಗರಿಕರ ಉಳಿತಾಯ ಯೋಜನೆ ಸೇರಿದಂತೆ ಹಲವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರ ಕಡಿತ ಮಾಡಿ ಬುಧವಾರ ಹೊರಡಿಸಿದ್ದ ಆದೇಶವನ್ನು ಕೇಂದ್ರ ಸರ್ಕಾರ ಹಿಂಪಡೆದಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಕುರಿತು ಟ್ವೀಟ್ ಮಾಡಿದ್ದಾರೆ.

'ಬಡ್ಡಿದರ ಕಡಿತದ ಆದೇಶವನ್ನು ಕಣ್ತಪ್ಪಿನಿಂದಾಗಿ ಹೊರಡಿಸಲಾಗಿದ್ದು, ಅದನ್ನು ಕೈಬಿಡಲಾಗಿದೆ. ಸಣ್ಣ ಉಳಿತಾಯ ಯೋಜನೆಗಳಿಗೆ 2021ರ ಮಾರ್ಚ್ ಅಂತ್ಯದಲ್ಲಿ ಇದ್ದ ಬಡ್ಡಿದರವೇ ಮುಂದುವರಿಯಲಿದೆ' ಎಂದು ನಿರ್ಮಲಾ ಅವರು ಗುರುವಾರ ಬೆಳಿಗ್ಗೆ ಮಾಡಿರುವ ಟ್ವೀಟ್‌ನಲ್ಲಿ ಹೇಳಿದ್ದಾರೆ.

13ನೇ ಪುಟ ನೋಡಿ

ಸಂಪಾದಕೀಯ 8

ಒಳ ಪುಟಗಳು

2ನೇ ಹಂತದ ಮತದಾನದಲ್ಲಿ ಮಾರಾಮಾರಿ 12

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಭಾರತೀಯ ಸೇನೆಗೆ ಪ್ರಮೀಳಾ ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸೇನೆಯು ಇನ್ನು ಒಂದೂವರೆ ತಿಂಗಳಲ್ಲಿ ಐತಿಹಾಸಿಕ ಕ್ಷಣವೊಂದಕ್ಕೆ ಸಾಕ್ಷಿಯಾಗಲಿದೆ. ಇದೇ ಮೊದಲ ಬಾರಿಗೆ ಮಹಿಳಾ ಯೋಧರು ಸೇನೆಗೆ ಸೇರ್ಪಡೆಯಾಗಲಿದ್ದಾರೆ.

ಅಧಿಕಾರಿಗಳಿಗಿಂತ ಕೆಳಹಂತದ ಸಿಬ್ಬಂದಿಯಾಗಿ ಈವರೆಗೆ ಮಹಿಳೆಯರು ಸೇನೆಯಲ್ಲಿ ಕಾರ್ಯನಿರ್ವಹಿಸಿರಲಿಲ್ಲ. ಶೀಘ್ರದಲ್ಲೇ ಈ ಕೊರಗು ನೀಗಲಿದೆ. ವಿವಿಧ ರಾಜ್ಯಗಳ 100 ಯುವತಿಯರು 61 ವಾರಗಳ ತರಬೇತಿ ಮುಗಿಸಿ, ಮೇ 8ರಂದು ದೇಶ ಸೇವೆಗೆ ಅಡಿ ಇಡಲಿದ್ದಾರೆ. ಈ ತಂಡದಲ್ಲಿ ಕರ್ನಾಟಕದ ಎಂಟು ಯುವತಿಯರಿದ್ದಾರೆ. ಈ ಪೈಕಿ ಏಳು ಮಂದಿ ಬೆಳಗಾವಿ ಜಿಲ್ಲೆಯವರಾದರೆ, ಒಬ್ಬರು ಧಾರವಾಡ ಜಿಲ್ಲೆಯವರು.

ಬಂದೂಕು ಹಿಡಿದು ಗುರಿಯತ್ತ ಗಮನ ನೆಟ್ಟಿರುವ ಯುವತಿಯರು

ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಸದ್ಯ, ನಗರದ ನೀಲಸಂದ್ರದಲ್ಲಿರುವ ಕಾರ್ಪ್ಸ್ ಮಿಲಿಟರಿ ಪೊಲೀಸ್ ಸೆಂಟರ್‌ನಲ್ಲಿ ಲೆಫ್ಟಿನೆಂಟ್ ಕರ್ನಲ್ ಜೂಲಿ ನೇತೃತ್ವದಲ್ಲಿ ಈ ವನಿತೆಯರು ತರಬೇತಿ ಪಡೆಯುತ್ತಿದ್ದಾರೆ.

ಎಸ್ಸೆಸ್ಸೆಲ್ಸಿ ಅಂಕವೇ ಪ್ರಧಾನ: ಎಸ್ಸೆಸ್ಸೆಲ್ಸಿಯಲ್ಲಿ ಶೇ 86ಕ್ಕಿಂತ ಹೆಚ್ಚು ಅಂಕ ಗಳಿಸಿದ ಯುವತಿಯರು ಮಹಿಳಾ ಯೋಧರ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ಈ ಮೊದಲ ತಂಡದಲ್ಲಿ ಆಯ್ಕೆಯಾದವರಲ್ಲಿ ಎಸ್ಸೆಸ್ಸೆಲ್ಸಿ ಮಾತ್ರವಲ್ಲದೆ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರೂ ಇದ್ದಾರೆ.

ಮಿಲಿಟರಿಯಲ್ಲಿ ವೀರ ವನಿತೆಯರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3cIXJpH

6ನೇ ಪುಟ ನೋಡಿ

ರಜನಿಕಾಂತ್‌ಗೆ ಫಾಲ್ಕೆ ಗರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಭಿಮಾನಿಗಳು 'ತಲೈವಾ' (ನಾಯಕ) ಎಂದು ಮೆಚ್ಚುಗೆಯಿಂದ ಕರೆಯುವ ತಮಿಳು ಸಿನಿಮಾ ತಾರೆ ರಜನಿಕಾಂತ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಗುರುವಾರ ಘೋಷಿಸಲಾಗಿದೆ.

ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಹೆಸರಿನಲ್ಲಿ ಸಿನಿಮಾ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. 2019ನೇ ಸಾಲಿನ ಈ ಪ್ರಶಸ್ತಿಯನ್ನು ರಜನಿಕಾಂತ್ ಅವರಿಗೆ ಮೇ 3ರಂದು ಪ್ರದಾನ ಮಾಡಲಾಗುವುದು ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಪ್ರಕಟಿಸಿದ್ದಾರೆ. 70 ವರ್ಷದ ರಜನಿಕಾಂತ್ ಅವರು ಈ ಪ್ರಶಸ್ತಿ ಪಡೆಯಲಿರುವ 51ನೇ ಸಾಧಕ.

ರಜನಿಕಾಂತ್

ಪ್ರಶಸ್ತಿಯ ಸಂಭ್ರಮವನ್ನು ರಜನಿಕಾಂತ್ ಅವರು ಟ್ವಿಟರ್ ಮೂಲಕ ಹಂಚಿಕೊಂಡಿದ್ದಾರೆ. 'ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದ್ದಕ್ಕೆ ಭಾರತ ಸರ್ಕಾರ, ಗೌರವಾನ್ವಿತ ಮತ್ತು ಆತ್ಮೀಯ ನರೇಂದ್ರ ಮೋದಿ, ಪ್ರಕಾಶ್ ಜಾವಡೇಕರ್, ಆಯ್ಕೆ ಸಮಿತಿಗೆ ಹೃತ್ಪೂರ್ವಕ ಧನ್ಯವಾದ. ನನ್ನ ಪಯಣದ ಭಾಗವಾಗಿರುವ ಎಲ್ಲರಿಗೂ ಈ ಪ್ರಶಸ್ತಿಯನ್ನು ಪ್ರಾಮಾಣಿಕವಾಗಿ ಅರ್ಪಿಸುತ್ತಿದ್ದೇನೆ' ಎಂದು ರಜನಿಕಾಂತ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ರಜನಿಕಾಂತ್ ಅವರನ್ನು ಕೊಂಡಾಡಿದ್ದಾರೆ. 'ತಲೆಮಾರುಗಳಿಂದ ಜನಪ್ರಿಯರಾಗಿರುವ, ನಾವು ಹೆಮ್ಮೆ ಪಡಬಹುದಾದಷ್ಟು ಸಿನಿಮಾಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿರುವ, ಅಕ್ಕರೆಯ ವ್ಯಕ್ತಿತ್ವದವರು ರಜನಿಕಾಂತ್. ತಲೈವಾ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಣೆಯಾಗಿರುವುದು ಅಪಾರ ಸಂಭ್ರಮದ ವಿಚಾರ. ನಿಮಗೆ ಅಭಿನಂದನೆಗಳು' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಶಕ್ತಿಯಾಗಿ ಬೆಳೆದ ಬಂಡಾಯ ನಟ 7

ಸಚಿವರ ಅಣತಿಯಂತೆ ಅವರ ಆಪ್ತ ಕಂಪನಿಗೆ ಗುತ್ತಿಗೆ ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ: ಎಎಪಿ ಆರೋಪ

‘ವೈದ್ಯಕೀಯ ಉಪಕರಣ ಖರೀದಿಯಲ್ಲಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಡ್ರಗ್ ಅಂಡ್ ಲಾಜಿಸ್ಟಿಕ್, ವೇರ್‌ಹೌಸಿಂಗ್ ಸೊಸೈಟಿಯಲ್ಲಿ ವೈದ್ಯಕೀಯ ಉಪಕರಣ ಖರೀದಿಯಲ್ಲಿ ₹39 ಕೋಟಿ ಅಕ್ರಮ ನಡೆದಿದೆ. ಅಧಿಕಾರಿಗಳು ಆರೋಗ್ಯ ಸಚಿವ ಕೆ.ಸುಧಾಕರ್ ಅಣತಿಯಂತೆ ಅವರ ಆಪ್ತ ಕಂಪನಿಗೆ ಗುತ್ತಿಗೆ ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ’ ಎಂದು ಎಎಪಿ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಕೊರೊನಾ ಕಾಲದಲ್ಲಿ ರಕ್ತ ಪರೀಕ್ಷೆಗೆ ಅಗತ್ಯವಿದ್ದ 3 ಪಾರ್ಟ್ ಮತ್ತು 5 ಪಾರ್ಟ್ ಹೆಮಟಾಲಜಿ ಸೆಲ್ ಕೌಂಟರ್ ಉಪಕರಣಗಳ ಖರೀದಿಗೆ ಟೆಂಡರ್ ಕರೆಯಲಾಗಿತ್ತು. ಈ ಪೈಕಿ 3 ಪಾರ್ಟ್ ಹೆಮಟಾಲಜಿ ಸೆಲ್‌ನ ಯೂನಿಟ್‌ವೊಂದಕ್ಕೆ ಸಿಸ್‌ಮೆಕ್ಸ್ ಕಂಪನಿಗೆ ₹2.96 ಲಕ್ಷ ನೀಡಲಾಗಿದೆ. ಹಿಮಾಚಲ ಪ್ರದೇಶ ಮತ್ತು ನವದೆಹಲಿಯಲ್ಲಿ ‘ಇದೇ ಕಂಪನಿಯ ಇದೇ ಉಪಕರಣಕ್ಕೆ ₹1.80 ಲಕ್ಷ ಕೊಡಲಾಗಿದೆ. ನಮ್ಮ ಸರ್ಕಾರವು 1,195 ಯೂನಿಟ್ ಖರೀದಿಸಿದ್ದು, ಹೆಚ್ಚುವರಿ ದರ ನೀಡಿರುವುದು ಏಕೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹19.85 ಕೋಟಿ ನಷ್ಟ ಉಂಟಾಗಿದೆ’ ಎಂದು ಹೇಳಿದರು.

‘5 ಪಾರ್ಟ್ ಹೆಮಟಾಲಜಿ ಸೆಲ್ ಕೌಂಟರ್ ಉಪಕರಣಗಳಿಗೆ ಕೇರಳ ಸರ್ಕಾರ ₹4.60 ಲಕ್ಷ ಕೊಟ್ಟು ಖರೀದಿಸಿದೆ. ಆದರೆ ನಮ್ಮಲ್ಲಿ ಯೂನಿಟ್‌ವೊಂದಕ್ಕೆ ₹8.35 ಲಕ್ಷ ನೀಡಲಾಗಿದೆ. 165 ಯೂನಿಟ್‌ಗೆ ಒಟ್ಟು ₹6.18 ಕೋಟಿ ಹೆಚ್ಚುವರಿ ಮೊತ್ತ ಸಂದಾಯ ಮಾಡಲಾಗಿದೆ. ಆ ಕಂಪನಿಯಿಂದ ಸಚಿವ ಸುಧಾಕರ್ ಹಾಗೂ ಅಧಿಕಾರಿಗಳು ₹25 ಕೋಟಿ ‘ಕಿಕ್ ಬ್ಯಾಕ್’ ಪಡೆದಿದ್ದಾರೆ’ ಎಂದು ದೂರಿದರು.

‘ಈ ಹಗರಣದ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕು. ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗಬೇಕು. ಈ ಕುರಿತು ಮಾಧ್ಯಮದವರು ಪ್ರಶ್ನಿಸಿದರೆ ಸಚಿವರು ಬೇಜವಾಬ್ದಾರಿಯಾಗಿ ಹೇಳಿಕೆ ನೀಡುತ್ತಾರೆ. ಸಿಂಗಲ್ ಬಿಡ್ ಮೂಲಕ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ಇದರಲ್ಲಿ ಸುಧಾಕರ್ ಅವರು ನೇರವಾಗಿ ಭಾಗಿಯಾಗಿದ್ದಾರೆ. ಈ ಹಗರಣದ ಕುರಿತು ಮುಂದಿನ ವಾರ ನಾವು ಲೋಕಾಯುಕ್ತಕ್ಕೆ ದೂರು ನೀಡಲಿದ್ದೇವೆ. ಉಪಕರಣ ಪೂರೈಕೆಯಾದ 21 ದಿನಗಳೊಳಗೆ ಅವುಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಲ್ಲಿ ಅಳವಡಿಸಬೇಕಿತ್ತು. ಆದರೆ ಮೂರು ತಿಂಗಳು ಕಳೆದರೂ ಆ ಕೆಲಸ ಆಗಿಲ್ಲ. ಇದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ’ ಎಂದರು.

ಅಕ್ರಮ ನಡೆದಿಲ್ಲ: ಸುಧಾಕರ್

‘ರಕ್ತ ಪರೀಕ್ಷಾ ಯಂತ್ರಗಳ ಖರೀದಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಯಂತ್ರಗಳ ಜತೆ ತಲಾ 1 ಕೆ.ವಿ. ಸಾಮರ್ಥ್ಯದ ಯುಪಿಎಸ್ ಹಾಗೂ 5,000 ಪರೀಕ್ಷಾ ಕಿಟ್‌ಗಳನ್ನು ಒದಗಿಸುವ ಷರತ್ತಿನ ಆಧಾರದಲ್ಲಿ ದರ ನಿಗದಿ ಮಾಡಲಾಗಿದೆ. ಖಾತರಿ ಅವಧಿಯನ್ನು ಐದು ವರ್ಷಕ್ಕೆ ಹೆಚ್ಚಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

‘ರಾಜ್ಯ ಔಷಧ ಮತ್ತು ವೈದ್ಯಕೀಯ ಸರಬರಾಜು ನಿಗಮವು ಮುಂಬೈನ ಟ್ರಾನ್ಸಾಸಿಯಾ ಬಯೋಮೆಡಿಕಲ್ ಲಿಮಿಟೆಡ್ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಿದೆ. ಈ ಕಾರಣದಿಂದ ಆ ಕಂಪನಿಯನ್ನು ಟೆಂಡರ್‌ನಿಂದ ಹೊರಗಿಡಲಾಗಿದೆ. ಆ ಕಂಪನಿ ಸುಳ್ಳು ಆರೋಪ ಮಾಡಿ ದೂರೊಂದನ್ನು ನೀಡಿದೆ’ ಎಂದು ಅವರು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಬಿಎಸ್‌ವೈ ರಾಜೀನಾಮೆ ಪಡೆಯಲು ಕಾಂಗ್ರೆಸ್ ಆಗ್ರಹ

ನವದೆಹಲಿ: ಆಪರೇಷನ್ ಕಮಲ ಉದ್ದೇಶದಿಂದ ಆಮಿಷ ಒಡ್ಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ತನಿಖೆ ನಡೆಸಲು ಕರ್ನಾಟಕ ಹೈಕೋರ್ಟ್ ಬುಧವಾರ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆ ಪಡೆಯುವಂತೆ ಕಾಂಗ್ರೆಸ್ ಆಗ್ರಹಿಸಿದೆ.

ಗುರುವಾರ ಎಐಸಿಸಿ ಕಚೇರಿಯಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ವಕ್ತಾರ ರಾಜೀವ್ ಶುಕ್ಲಾ, ಜೆಡಿಎಸ್ ಶಾಸಕ ನಾಗನಗೌಡ ಕಂದಕೂರ ಅವರ ಪುತ್ರ ಶರಣಗೌಡ ಅವರಿಗೆ ₹10 ಕೋಟಿಯ ಆಮಿಷ ಒಡ್ಡಿದ್ದಾರೆ ಎನ್ನಲಾದ ಪ್ರಕರಣದ ತನಿಖೆಗೆ ನೀಡಲಾದ ತಡೆಯನ್ನು ಹೈಕೋರ್ಟ್ ತೆರವುಗೊಳಿಸಿದ್ದು, ಬಿಜೆಪಿ ಹೈಕಮಾಂಡ್ ಕೂಡಲೇ ಯಡಿಯೂರಪ್ಪ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು.

ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧವೇ ರಾಜ್ಯಪಾಲರಿಗೆ ಪತ್ರ ಬರೆದಿರುವುದು ಅತ್ಯಂತ ಆಘಾತಕಾರಿ ಬೆಳವಣಿಗೆಯಾಗಿದೆ. ಇಂಥ ಬೆಳವಣಿಗೆ ಹಿಂದೆ ಎಂದೂ ಕಂಡುಬಂದಿರಲಿಲ್ಲ ಎಂದು ಅವರು ಟೀಕಿಸಿದರು.



ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲು ಯಡಿಯೂರಪ್ಪ ಅವರಿಗೆ ನೈತಿಕತೆ ಇಲ್ಲ. ಅವರದೇ ಸಂಪುಟ ಸಹೋದ್ಯೋಗಿಯೊಬ್ಬರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ವಿರೋಧ ಪಕ್ಷದ ನಾಯಕರು ಇಂಥ ಆರೋಪ ಮಾಡಿದ್ದರೆ ನಿರ್ಲಕ್ಷಿಸಬಹುದಿತ್ತು. ಬಿಜೆಪಿ ಹೈಕಮಾಂಡ್, ಸರ್ಕಾರದ ಭಾಗವಾದವರೇ ದೂರು ನೀಡಿದ್ದಕ್ಕೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಮುಖ್ಯ ಎಂದರು.

ಸರ್ಕಾರಿ ನೌಕರರಿಗೆ ಕೋವಿಡ್ ಚಿಕಿತ್ಸೆ ಮರುಪಾವತಿ ದರಪಟ್ಟಿ ಪ್ರಕಟ

ಬೆಂಗಳೂರು: ಕೋವಿಡ್ ಪೀಡಿತರಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವ ಸರ್ಕಾರಿ ನೌಕರರು ಮತ್ತು ಅವರ ಕುಟುಂಬಗಳ ಸದಸ್ಯರ ವೈದ್ಯಕೀಯ ವೆಚ್ಚದ ಬಿಲ್‌ಗಳ ಮರುಪಾವತಿ ಕ್ಲೇಮ್‌ಗಳ ಇತ್ಯರ್ಥಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಗುರುವಾರ ದರಪಟ್ಟಿ ಪ್ರಕಟಿಸಿದೆ.

ದಿನವೊಂದಕ್ಕೆ ಸಾಮಾನ್ಯ ವಾರ್ಡ್‌ಗೆ ₹ 10,000, ಹೈ ಡಿಪೆಂಡೆನ್ಸಿ ಯೂನಿಟ್‌ಗೆ ₹ 12,000, ವೆಂಟಿಲೇಟರ್ ರಹಿತವಾದ ಐಸೋಲೇಷನ್ ತೀವ್ರ ನಿಗಾ ಘಟಕಕ್ಕೆ ₹ 15,000 ಮತ್ತು ವೆಂಟಿಲೇಟರ್ ಸಹಿತವಾದ ಐಸೋಲೇಷನ್ ತೀವ್ರ ನಿಗಾ ಘಟಕಕ್ಕೆ ₹ 25,000 ದರದ ಆಧಾರದಲ್ಲಿ ಕ್ಲೇಮ್ ಬಿಲ್‌ಗಳನ್ನು ಇತ್ಯರ್ಥಗೊಳಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಎಂಎಲ್‌ಸಿ ನಾರಾಯಣಸ್ವಾಮಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ವಿಧಾನಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ಕೇರಳ ಚುನಾವಣಾ ಪ್ರಚಾರದ ವೇಳೆ ಸೋಂಕು ತಗುಲಿದ್ದು, 14 ದಿನ ಮನೆಯಲ್ಲಿಯೇ ಚಿಕಿತ್ಸೆ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಸಂಪರ್ಕಕ್ಕೆ ಬಂದವರು ಪರೀಕ್ಷೆ ಮಾಡಿಸಿಕೊಳ್ಳುವಂತೆ ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ.

ಪರೀಕ್ಷೆ ಕಡ್ಡಾಯ: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್

ನಗರದಲ್ಲಿ 6ರಿಂದ 9 ಭೌತಿಕ ತರಗತಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಬೆಂಗಳೂರು ನಗರ ಜಿಲ್ಲೆಯಲ್ಲಿ 6ರಿಂದ 9ನೇ ತರಗತಿಯವರೆಗೆ ಆಫ್‌ಲೈನ್ ಕ್ಲಾಸ್ (ಭೌತಿಕ ತರಗತಿ) ಸ್ಥಗಿತಗೊಳಿಸಲಾಗಿದೆ.

‘ತಕ್ಷಣದಿಂದ ಈ ಆದೇಶ ಜಾರಿಗೆ ಬರಲಿದೆ. ಮುಂದಿನ ಆದೇಶದವರೆಗೆ ಇದೇ ಪರಿಸ್ಥಿತಿ ಮುಂದುವರಿಯಲಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಗುರುವಾರ ಹೇಳಿದ್ದಾರೆ.

‘ಈ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದ್ದು, ಈ ವಯೋಮಾನದ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 10ನೇ ತರಗತಿ ಎಂದಿನಂತೆ ಮುಂದುವರಿಯಲಿದ್ದು, ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಲ್ಲ’ ಎಂದಿದ್ದಾರೆ.

‘ರಾಜ್ಯದ ಉಳಿದೆಡೆ ಪ್ರಸ್ತುತ ಇರುವ ವ್ಯವಸ್ಥೆ ಮುಂದುವರಿಯಲಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಪರೀಕ್ಷೆ: ಕಡ್ಡಾಯ ಶಿಕ್ಷಣ ಕಾಯ್ದೆಯ ಅವಕಾಶಗಳಡಿಯಲ್ಲಿ 6-9ನೇ ತರಗತಿಗಳಿಗೆ ಸಂಬಂಧಿಸಿದಂತೆ ಶಾಲೆಗಳು ನಡೆಸಬೇಕಾದ ಮೌಲ್ಯಾಂಕನ ಪರೀಕ್ಷೆಗಳ ಕುರಿತಂತೆ ಮುಂದಿನ ದಿನಗಳಲ್ಲಿ ಅಗತ್ಯ ನಿರ್ದೇಶನ ನೀಡಲಾಗುವುದು ಎಂದೂ ಸಚಿವರು ಸ್ಪಷ್ಟಪಡಿಸಿದ್ದಾರೆ.

ಕೋವಿಡ್: ಒಂದೇ ದಿನ 3 ಸಾವಿರ ಪ್ರಕರಣ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. 3040 ಹೊಸ ಪ್ರಕರಣಗಳು ಗುರುವಾರ ಒಂದೇ ದಿನ ಪತ್ತೆಯಾಗಿವೆ.

ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿರುವ ಎರಡು ಕ್ಲಸ್ಟರ್‌ಗಳನ್ನು ಗುರುವಾರ ಗುರುತಿಸಲಾಗಿದ್ದು, ಇದರೊಂದಿಗೆ ಸಕ್ರಿಯ ಕ್ಲಸ್ಟರ್‌ಗಳ ಸಂಖ್ಯೆ 32ಕ್ಕೆ ಹೆಚ್ಚಳವಾಗಿದೆ.

ನಗರದ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಕಾಯ್ದಿರಿಸಿರುವ ಹಾಸಿಗೆಗಳಲ್ಲಿ ಶೇ 74ರಷ್ಟು ಹಾಸಿಗೆಗಳು ಭರ್ತಿಯಾಗಿವೆ. 300 ಹಾಸಿಗೆಗಳು ಲಭ್ಯ ಇವೆ. ಇವುಗಳಲ್ಲಿ 176 ಸಾಮಾನ್ಯ ಹಾಸಿಗೆಗಳು ಹಾಗೂ 75 ಹೈಡೆನ್ಸಿಟಿ ಆಮ್ಲಜನಕ ಪೂರಣ ವ್ಯವಸ್ಥೆ ಹೊಂದಿರುವ ಹಾಸಿಗೆಗಳು ಸೇರಿವೆ. ತುರ್ತು ನಿಗಾ ಘಟಕಗಳಲ್ಲಿ 19 ಹಾಗೂ ವೆಂಟಿಲೇಷನ್ ವ್ಯವಸ್ಥೆ ಹೊಂದಿರುವ ಕೊಠಡಿಗಳಲ್ಲಿ 30 ಹಾಸಿಗೆಗಳು ಲಭ್ಯ ಇವೆ ಎಂದು ಬಿಬಿಎಂಪಿ ತಿಳಿಸಿದೆ.

ಕೋವಿಡ್ ಪರೀಕ್ಷೆಯ ಪ್ರಮಾಣವನ್ನೂ ಬಿಬಿಎಂಪಿ ಹೆಚ್ಚಿಸಿದೆ. 47,465 ಮಂದಿಯನ್ನು ಗುರುವಾರ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ.

45 ವರ್ಷ ಮೀರಿದವರಿಗೂ ಕೋವಿಡ್ ಲಸಿಕೆ ನೀಡುವ ಕಾರ್ಯ ಆರಂಭಿಸಲಾಗಿದೆ. ಮೊದಲ ದಿನ 45ರಿಂದ 60 ವರ್ಷದೊಳಗಿನ 3621 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಒಟ್ಟು 14,752 ಮಂದಿ ಗುರುವಾರ ಲಸಿಕೆ ಹಾಕಿಸಿಕೊಂಡರು. ಇದುವರೆಗೆ ಒಟ್ಟು 7.32 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ.

ಪ್ರಾಯೋಗಿಕ ಪರೀಕ್ಷೆಗೆ ಮತ್ತೊಮ್ಮೆ ಅವಕಾಶ: ಸಿಬಿಎಸ್‌ಇ

ನವದೆಹಲಿ (ಪಿಟಿಐ): ಕೋವಿಡ್–19 ಸೋಂಕಿಗೆ ಒಳಗಾಗಿ ಪ್ರಾಯೋಗಿಕ ಪರೀಕ್ಷೆಗೆ ಗೈರು ಹಾಜರಾಗಿದ್ದ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲಾಗುವುದು ಎಂದು ಸಿಬಿಎಸ್‌ಇ ಗುರುವಾರ ತಿಳಿಸಿದೆ.

ಕೋವಿಡ್–19ಗೆ ಒಳಗಾದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಅಧಿಕಾರಿಗಳ ಜತೆ ಚರ್ಚಿಸಿ ಜೂನ್ 11ರ ಒಳಗೆ ನಡೆಸಲು ಸೂಚಿಸಲಾಗಿದೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಾಮ್ ಭರದ್ವಾಜ್ ತಿಳಿಸಿದ್ದಾರೆ.

IN THE COURT OF THE VI ADDL. PRL JUDGE FAMILY COURT AT BANGALORE
M.C.No. 5984/2019

BETWEEN: Krishna Prasad R ... Petitioner

AND: Smt. Parinitha .P ... Respondent

NOTICE TO RESPONDENT

To, **Smt. Parinitha.P** W/o Krishna Prasad R D/o Sri.C. Parthasarathy, aged about 34 years, R/atNo. 51/1, K.H. Road, Double Road, Bengaluru-560 027.

Whereas, the above named petitioner has instituted the above case against the respondent for decree for divorce of the marriage under section 13 (1) (i) (i-a) (i-b) of Hindu Marriage Act, 1955 and such other reliefs. You are hereby summoned to appear in person or through a pleader duly instructed before the VI Additional Principal Judge Family Court, Bangalore.

Notice/Summons is hereby made that the said respondent is required to appear on the **30th day of June 2021** at 11.A.M. before the said Hon'ble VI Additional Principal Judge Family Court, Bangalore to answer the said petition, failing which the matter will be heard in your absence placing you as exparte.

Giving under my hand and seal of this court on this 31-3-2021.

By order of the Court, Sheristedar, Family Court, Bangalore.

A. RAJESH,
No.16, Ground Floor, 6th Main Road, Near Majestic Mall, Gandhinagar, Bengaluru-09.

ಕೋವಿಡ್ ಎರಡನೇ ಅಲೆ: ಚರ್ಚೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಣಿಪಾಲ ಆಸ್ಪತ್ರೆಗಳ ಸಮೂಹವು ಶನಿವಾರ (ಏ.3) ಮಧ್ಯಾಹ್ನ 3.30ಕ್ಕೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ದಿ ಸ್ಟರ್ಲಿಂಗ್ ಮ್ಯಾಕ್ ಹೋಟೆಲ್‌ನಲ್ಲಿ ಕೋವಿಡ್ ಎರಡನೇ ಅಲೆ, ಲಸಿಕೆ ಕುರಿತು ವಿಚಾರಸಂಕಿರಣ ಆಯೋಜಿಸಿದೆ.

‘ಪ್ರಜಾವಾಣಿ’ ಮತ್ತು ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ನಡೆಯಲಿರುವ ಈ ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಆಸ್ಪತ್ರೆಯ ಶ್ವಾಸಕೋಶಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸತ್ಯನಾರಾಯಣ ಮೈಸೂರು ಅವರು ವಹಿಸಲಿದ್ದಾರೆ. ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ವಿಕ್ರಮ್ ಪೈ, ‘ಐ ಚೇಂಜ್ ಇಂದಿರಾನಗರ’ದ ಕೋವಿಡ್ ಉಸ್ತುವಾರಿ ಸತೀಶ್ ರಾವ್, ಮಣಿಪಾಲ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ.ಲಿ.ನ ಪ್ರಾದೇಶಿಕ ಮುಖ್ಯ ಕಾರ್ಯಾಚರಣೆ ಅಧಿಕಾರಿ ದೀಪಕ್ ವೇಣುಗೋಪಾಲನ್, ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆಯ ನಿರ್ದೇಶಕ ಮನೀಶ್ ರೈ ಹಾಗೂ ವೈಟ್‌ಫೀಲ್ಡ್ ಮಣಿಪಾಲ ಆಸ್ಪತ್ರೆಯ ನಿರ್ದೇಶಕ ಅರ್ನಬ್ ಮೊಂಡಾಲ್ ಅವರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

‘ಒಟ್ಟಾಗಿ ಸಾಮೂಹಿಕ ಯೋಗಕ್ಷೇಮದ ಕಡೆಗೆ’ ಎಂಬ ಪರಿಕಲ್ಪನೆಯಲ್ಲಿ ಈ ವಿಚಾರಸಂಕಿರಣ ನಡೆಯಲಿದೆ. ಕೋವಿಡ್ ಎರಡನೇ ಅಲೆ ತಡೆಯಲು ಮಾಡಿಕೊಂಡಿರುವ ಸಿದ್ಧತೆಗಳು, ಲಸಿಕೆಯ ಮಹತ್ವ ಸೇರಿದಂತೆ ಕೋವಿಡ್ ತಡೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಷಯ ತಜ್ಞರು ಮಾತನಾಡಲಿದ್ದಾರೆ. ಈ ಕಾರ್ಯಕ್ರಮವನ್ನು ಆನ್‌ಲೈನ್ ವೇದಿಕೆ ಮೂಲಕವೂ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೂಮ್ ಐಡಿ: 995 3918 9243, ಪಾಸ್‌ಕೋಡ್: Health@123

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ನಟ ಪ್ರಜ್ವಲ್ ದೇವರಾಜ್ ದಂಪತಿಗೆ ಕೋವಿಡ್

ಬೆಂಗಳೂರು: ನಟ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಹಾಗೂ ಅವರ ಪತ್ನಿ ರಾಗಿಣಿ ಅವರಿಗೆ ಕೋವಿಡ್–19 ದೃಢಪಟ್ಟಿದೆ.

ಈ ಕುರಿತು ಟ್ವಿಟರ್‌ನಲ್ಲಿ ಪ್ರಜ್ವಲ್ ದೇವರಾಜ್ ಮಾಹಿತಿ ನೀಡಿದ್ದು, ‘ರಾಗಿಣಿ ಹಾಗೂ ನನಗೆ ಕೋವಿಡ್ ಪಾಸಿಟಿವ್ ಆಗಿದೆ. ವೈದ್ಯರು ತಿಳಿಸಿದ ಔಷಧಗಳನ್ನು ನಾವು ತೆಗೆದುಕೊಳ್ಳುತ್ತಿದ್ದು, ವಿಶ್ರಾಂತಿ ಪಡೆಯುತ್ತಿದ್ದೇವೆ. ಒಂದಾಗಿಯೇ ಸೋಂಕಿನಿಂದ ಗುಣಮುಖವಾಗಿ ಹೊರಬರುತ್ತೇವೆ. ನೀವೂ ನಿಮ್ಮ ರಕ್ಷಣೆಯಲ್ಲಿರಿ. ಸುರಕ್ಷಿತವಾಗಿರಿ. ನಿಮ್ಮ ಪ್ರೀತಿ ಮತ್ತು ಕಾಳಜಿಗೆ ಧನ್ಯವಾದಗಳು’ ಎಂದು ಉಲ್ಲೇಖಿಸಿದ್ದಾರೆ.

ಇತ್ತೀಚೆಗಷ್ಟೇ ಪ್ರಜ್ವಲ್ ದೇವರಾಜ್ ಅಭಿನಯದ ‘ಇನ್‌ಸ್ಪೆಕ್ಟರ್ ವಿಕ್ರಂ’ ತೆರೆಕಂಡಿತ್ತು. ಇದರ ಪ್ರಚಾರಕ್ಕೂ ಅವರು ಹಲವೆಡೆ ಸುತ್ತಿದ್ದರು.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು–560 064,

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/21–22/01 ದಿನಾಂಕ: 01.04.2021

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ವೆಬ್‌ಸೈಟ್ https://www.ireps.gov.in (WORKS) ಆನ್‌ಲೈನ್ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಟೆಂಡರ್ ಸಂಖ್ಯೆ	ವಿವರ	ಅಂದಾಜು ವೆಚ್ಚ ರೂ.ಗಳಲ್ಲಿ
1	ಡಬ್ಲ್ಯೂ.496/ ಆರ್‌ಡಬ್ಲ್ಯೂಎಫ್/ ವೈಎನ್‌ಕೆ/956	ವಲಯ ಕಾಮಗಾರಿಗಳು: ಒಂದು ವರ್ಷದ ಅವಧಿಗಾಗಿ ಹಾಲಿಯಿರುವ ಕಟ್ಟಡಗಳಿಗೆ ಹೆಚ್ಚುವರಿ, ಮಾರ್ಪಾಡು ಹಾಗೂ ಸುಧಾರಣೆ ಕಾಮಗಾರಿಗಳು, ಕಟ್ಟಡ ಸಾಮಗ್ರಿಗಳ ಸರಬರಾಜು, ಆರ್‌ಡಬ್ಲ್ಯೂಎಫ್ ಕಾಲೋನಿಗಳಲ್ಲಿ ಜಿಎಲ್‌ಆರ್‌ಗಳ ಮತ್ತು ಓಹೆಚ್‌ಟಿಗಳ ಸ್ವಚ್ಛತೆ, ಇತ್ಯಾದಿ.	10783813.14 ಕೊನೆಯ ದಿನಾಂಕ ಹಾಗೂ ಸಮಯ : 26.04.2021 ರ 11.00 ಗಂಟೆಗೆ

ವಿವರವಾದ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು. ಉಪ ಮುಖ್ಯ ಇಂಜಿನಿಯರ್

ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ

ಕಾರ್ಯಯೋಜನೆ ಮತ್ತು ಭೂಮಾಪನ, ಚಿಕ್ಕಮಗಳೂರು

ಸಂಖ್ಯೆ: ಬಜೆಟ್/ಸಿ.ಆರ್–11/2020–21 ದಿನಾಂಕ: 29–01–2021

ಅರಣ್ಯ ಕಾಮಗಾರಿಗಳ ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಚಿಕ್ಕಮಗಳೂರು ಕಾರ್ಯ ಯೋಜನೆ ಮತ್ತು ಭೂಮಾಪನ ವೃತ್ತ ವ್ಯಾಪ್ತಿಯ ರಾಮನಗರ ವಿಭಾಗದ ವಿವಿಧ ವಲಯಗಳಲ್ಲಿ ಇನ್ವೆಂಟರಿ ಕಾಮಗಾರಿ ನಿರ್ವಹಿಸಲು ದಿನಾಂಕ 30–03–2021 ರಂದು ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, **ದಿನಾಂಕ : 12.04.2021ರಂದು** ಕೊನೆಯ ದಿನಾಂಕ ಹಾಗೂ ಆಟೋ ಎಕ್ಸ್‌ಟೆಂಕ್ಷನ್ **ದಿನಾಂಕ: 20.04.2021** ಆಗಿರುತ್ತದೆ. ಮಾಹಿತಿಯನ್ನು **http://eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದುಕೊಂಡು ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ಕಚೇರಿಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ : 08262–238802

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು ಚಿಕ್ಕಮಗಳೂರು

ಹಿಸನಿ/ವಾಸಸಂಇ/ರಾನ/05/ಯಕ್ಷಿ/2021–22

ಉಪ ಅರಣ್ಯ ಸಂರಕ್ಷಣಾಧಿಕಾರಿ

ಸಾಮಾಜಿಕ ಅರಣ್ಯ ವಿಭಾಗ, ರಾಮನಗರ

ಸಂಖ್ಯೆ: ಎ2/ಬಿಯುಡಿ/ಉ.ಅಸಂ/ಇ–ಟೆಂಡರ್/ಸಿ.ಆರ್–34/2020–21 ದಿನಾಂಕ : 30.03.2021

ಟೆಂಡರ್ ಪ್ರಕಟಣೆ

1) **ಕಾಮಗಾರಿ ವಿವರ :** ರಾಮನಗರ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ಸಾಮಾಜಿಕ ಅರಣ್ಯ ವಲಯಗಳಲ್ಲಿ 2021–22ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 14 X 20 ಅಳತೆಯ ಪಾಲೀಥೀನ್ ಚೀಲದಲ್ಲಿ ಬೆಳೆಸಿದ ಸಸಿಗಳನ್ನು ಸರಬರಾಜು ಮಾಡುವುದು 2) **ಕಾಮಗಾರಿ ಅಂದಾಜು ಮೊತ್ತ: ರೂ. 38,67,692/–.** 3) ಗುತ್ತಿಗೆದಾರರ ಅರ್ಹತೆ ವಿವರ : ಉತ್ತಮ ಗುಣಮಟ್ಟದ ಸಸಿಗಳನ್ನು ಬೆಳೆಸಿರುವ ಬಗ್ಗೆ ಕನಿಷ್ಠ 5 ವರ್ಷದ ಅನುಭವ ಇರಬೇಕು. 4) ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ: **08.04.2021** ಮತ್ತು **20.04.2021** 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ರೂ. 96,692/–. 6) ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ: **08.04.2021** ಮತ್ತು **20.04.2021** 7) ಟೆಂಡರ್ ತೆರೆಯುವ ದಿನಾಂಕ: **09.04.2021** ಮತ್ತು **21.04.2021** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ರಾಮನಗರ. 9) ಅಂತರ್ಜಾಲ ತಾಣದ ವಿಳಾಸ : dcfsframanagar@gmai.com

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ರಾಮನಗರ.

ಹಿಸನಿ/ವಾಸಸಂಇ/ರಾನ/04/ಯಕ್ಷಿ/2021–22

SADASHIVANAGAR CLUB

#21, 15th Cross, Sadashivanagar, Bangalore-560080. Ph: 080-23614158, 23618263

TENDER NOTIFICATION FOR RUNNING VEG & NON-VEG MULTICUSINE CANTEEN, COFFEE SHOP, CHATS & ICE CREAM PARLOUR

Sealed quotations are invited from eligible catering contractors with minimum 3 years of experience in catering for running the club canteen as above. Interested contractors may apply within 10 days to the Hon. Secretary with details of Canteen Menu, Rates and quantity.

Date : 02-04-2021 Sd/- Hon. Secretary

AIR FORCE SCHOOL HEBBAL

HQTC(U) AF, JC Nagar Post, Bengaluru-06
(Under the aegis of the IAF Educational & Cultural Society)

Interested candidates may apply for the following vacancies:

Regular – • PGT Physics – 01 • Clerk – 01, • Science Lab Attendant - 01 • Helpers (MTS) – 03

Contractual & Empanelment

- **PGT** History, Political Science, Psychology, Sociology, Geography and Legal Studies **(01 vacancy under each category)**
- **TGT** SST, Computer Science, Special Educator **(01 vacancy under each category)**
- **PRT** - (01 vacancy) • **NTT** - (02 vacancies)

Last date for submission of application along with all copies of testimonials (educational and experience certificates) is **19 Apr 2021.**

For QRs, application & more details please log on to **www.afshebbal.ac.in**

CHAIRMAN

ಜಿಲ್ಲಾ ಪಂಚಾಯತ್ ಕೋಲಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ,
ಇ.ಟಿ.ಸಿ.ಎಂ ಆಸ್ಪತ್ರೆ ಮುಂಭಾಗ, ಬಂಗಾರಪೇಟೆ ರಸ್ತೆ, ಕೋಲಾರಮ್ಮ ಕೆರೆ ಅಂಗಳ, 5ನೇ ವಾರ್ಡ್, ಕುರುಬರಪೇಟೆ, ಕೋಲಾರ–563 101
ಫೋನ್: 08152–222336 Email:dobcmkolar@gmail.com

ಡಿಬಿಸಿಡಿಕೋ/ವನಿಶಾ/ಆಹಾರ/ಸಿ.ಆರ್–02/2020–21

ದಿನಾಂಕ:30.03.2021

ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಆಹಾರ ಪದಾರ್ಥಗಳ ಪೂರೈಕೆಗಾಗಿ ತಾಲ್ಲೂಕುವಾರು ಪ್ರತ್ಯೇಕವಾಗಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆದಿದ್ದು, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ದಿನಾಂಕ:**31.03.2021** ರಿಂದ ದಿನಾಂಕ:**29.04.2021** ಸಂಜೆ **5.00** ಗಂಟೆಯುವರೆಗೆ, ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಹಾಗೂಸ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/–(ಎ.ಸಿ. ರಾಜಣ್ಣ), ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 444/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಿಬಿಎಂಪಿ ನೂತನ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿಕೆ

ಬೆಂಗಳೂರು ಕರಗ: ಚರ್ಚಿಸಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಭೆ, ಸಮಾರಂಭ ಹಾಗೂ ಜಾತ್ರೆಗಳನ್ನು ನಡೆಸದಂತೆ ಸರ್ಕಾರವು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಸಿದ್ಧ ಕರಗ ಉತ್ಸವವನ್ನು ಹೇಗೆ ಆಯೋಜಿಸಬೇಕು ಎಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಿದ್ದೇವೆ’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ನೂತನ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ನಿರ್ಗಮಿತ ಆಯುಕ್ತ ಮಂಜುನಾಥ್ ಪ್ರಸಾದ್ ಅವರಿಂದ ಗುಪ್ತ ‘ಅಧಿಕಾರ ದಂಡ’ ಸ್ವೀಕರಿಸಿದರು.

ಬಳಿಕ ಮಾತನಾಡಿದ ಅವರು ‘ಸರ್ಕಾರವು ನನ್ನ ಮೇಲೆ ನಂಬಿಕೆ ಇಟ್ಟು ಈ ಜವಾಬ್ದಾರಿ ನೀಡಿದೆ. ಆಯುಕ್ತರಾಗಿ ಮಂಜುನಾಥ್ ಪ್ರಸಾದ್ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಆಡಳಿತಾಧಿಕಾರಿಯಾಗಿ ನಾನು ಎಲ್ಲಾ ಸಮಸ್ಯೆಗಳನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅಗತ್ಯ ಸಲಹೆ, ಸೂಚನೆಗಳನ್ನೂ ನೀಡಿದ್ದೆ. ನಗರದಲ್ಲಿ ಕೋವಿಡ್ ಎರಡನೇ ಅಲೆ ಶುರುವಾಗಿದೆ. ಇದನ್ನು ನಿಯಂತ್ರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಹೆಚ್ಚಿನ ಗಮನ ಹರಿಸುತ್ತೇನೆ’ ಎಂದು ಅವರು ಹೇಳಿದರು.

ಬಿಬಿಎಂಪಿ ನೂತನ ಆಡಳಿತಾಧಿಕಾರಿ ರಾಕೇಶ್ ಸಿಂಗ್ (ಬಲ) ಅವರಿಗೆ ಗೌರವ್ ಗುಪ್ತಾ ಹಾಗೂ ಮಂಜುನಾಥ್ ಪ್ರಸಾದ್ ಹೂ ಗುಚ್ಛ ನೀಡಿ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ

ಬಿಬಿಎಂಪಿ ಸುದ್ದಿ

‘ಕೋವಿಡ್‌ಗೆ ಕಡಿವಾಣ ಹಾಕಲು ಈಗಾಗಲೇ ಸಾಕಷ್ಟು ಕಾರ್ಯತಂತ್ರಗಳನ್ನು ರೂಪಿಸಿದ್ದೇವೆ. ಅವುಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶ್ರಮಿಸುತ್ತೇನೆ. ನಮ್ಮ ಈ ಕಾರ್ಯಕ್ಕೆ ನಾಗರಿಕರು ಕೈ ಜೋಡಿಸಬೇಕು’ ಎಂದು ತಿಳಿಸಿದರು.

‘ಕೆಲವು ಕಡೆ ರಸ್ತೆಯೊಂದರಲ್ಲಿ ಹತ್ತಕ್ಕಿಂತಲೂ ಹೆಚ್ಚು ಬಸ್ ನಿಲ್ದಾಣಗಳಿವೆ ಎಂಬುದು ಗಮನಕ್ಕೆ ಬಂದಿದೆ. ಅನಧಿಕೃತವಾಗಿ ನಿರ್ಮಾಣ ಮಾಡಿದ್ದರೆ ಅಂತಹವುಗಳನ್ನು ಯಾವುದೇ ಮುಲಾಜಿಲ್ಲದೆ ತೆರವುಗೊಳಿಸಲಾಗುತ್ತದೆ’ ಎಂದರು.

ಬಿಬಿಎಂಪಿ ನೂತನ ಆಡಳಿತಾಧಿಕಾರಿ ರಾಕೇಶ್ ಸಿಂಗ್ ‘ಮಳೆಗಾಲ ಸಮೀಪಿಸುತ್ತಿದೆ. ಅಷ್ಟರೊಳಗೆ ಕೊರೊನಾ ನಿಯಂತ್ರಿಸಬೇಕಾದ ಸವಾಲು ನಮ್ಮ ಎದುರಿಗಿದೆ. ಆ ನಿಟ್ಟಿನಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ’ ಎಂದು ಹೇಳಿದರು.

ಭಾವುಕರಾದ ಮಂಜುನಾಥ್ ಪ್ರಸಾದ್

‘ಹಿಂದಿನ ಏಳು ತಿಂಗಳಿಂದ ನಾನು ಗೌರವ್ ಗುಪ್ತ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದೇನೆ. ಬಿಬಿಎಂಪಿಯ ಹಲವು ಸಮಸ್ಯೆಗಳಿಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. ಬೆಂಗಳೂರಿನ ಜನ ನನಗಿಂತಲೂ ಉತ್ತಮ ಆಡಳಿತವನ್ನು ಗುಪ್ತ ಅವರಿಂದ ನಿರೀಕ್ಷಿಸಬಹುದು’ ಎಂದು ಹೇಳುವಾಗ ಮಂಜುನಾಥ್ ಪ್ರಸಾದ್ ಭಾವುಕರಾದರು.

‘45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ವಿಚಾರವಾಗಿ ಬುಧವಾರ ಖಾಸಗಿ ಆಸ್ಪತ್ರೆಗಳೊಂದಿಗೆ ಸಭೆ ನಡೆಸಿ ಚರ್ಚಿಸಿದ್ದೇವೆ. ಪ್ರತಿ ದಿನ 85 ಸಾವಿರ ಜನರಿಗೆ ಲಸಿಕೆ ನೀಡಲು ನಿರ್ಧರಿಸಿದ್ದು ಅದಕ್ಕೆ ಬೇಕಿರುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿರುವ ಆರೋಗ್ಯ ಕೇಂದ್ರಗಳನ್ನು ಬಳಸಿಕೊಂಡು ಲಸಿಕೆ ನೀಡುವುದಾಗಿ ಖಾಸಗಿ ಆಸ್ಪತ್ರೆಯವರು ಹೇಳಿದ್ದಾರೆ. ಹೆಚ್ಚಿನ ಲಸಿಕೆ ಪೂರೈಸುವಂತೆ ಮನವಿ ಮಾಡಿದ್ದಾರೆ. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದೇವೆ’ ಎಂದು ತಿಳಿಸಿದರು.

ಹಾಯರ್‌ನಿಂದ ಹೊಸ ರೆಫ್ರಿಜರೇಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹೋಪಯೋಗಿ ವಸ್ತುಗಳ ತಯಾರಿಕಾ ಕಂಪನಿ ಹಾಯರ್ ತನ್ನ ‘ಬಾಟಮ್ ಮೌಂಟಡ್ ರೆಫ್ರಿಜರೇಟರ್’ ಸರಣಿಯಲ್ಲಿ 17 ಹೊಸ ಮಾದರಿಗಳನ್ನು ಬಿಡುಗಡೆ ಮಾಡಿದೆ.

ಈ ರೆಫ್ರಿಜರೇಟರ್‌ಗಳಲ್ಲಿ ತಾಪಮಾನವನ್ನು 9 ಡಿಗ್ರಿ ಸೆಲ್ಸಿಯಸ್‌ನಿಂದ (–) 24 ಡಿಗ್ರಿ ಸೆಲ್ಸಿಯಸ್‌ವರೆಗೆ ಇರಿಸಬಹುದು. ಇದು ಬೇರೆ ಬೇರೆ ಬಗೆಯ ಆಹಾರ ವಸ್ತುಗಳ ತಾಜಾತನ, ಪೌಷ್ಟಿಕಾಂಶಗಳನ್ನು ಹೆಚ್ಚಿನ ಅವಧಿಯವರೆಗೆ ಸಂರಕ್ಷಿಸುತ್ತದೆ ಎಂದು ಕಂಪನಿ ಹೇಳಿದೆ. ಈ ಮಾದರಿಗಳ ಬೆಲೆಯು ₹ 53 ಸಾವಿರದಿಂದ ಆರಂಭವಾಗುತ್ತದೆ.

ಹೊಸ ರೆಫ್ರಿಜರೇಟರ್‌ಗಳ ಬಿಡುಗಡೆ ಬಗ್ಗೆ ಮಾತನಾಡಿದ ಹಾಯರ್ ಅಪ್ಲಯನ್ಸಸ್ ಇಂಡಿಯಾ ಕಂಪನಿಯ ಅಧ್ಯಕ್ಷ ಎರಿಕ್ ಬ್ರಗಾಂಜಾ, ‘ನಾವು ನಮ್ಮ ಗ್ರಾಹಕರಿಗೆ ಹೊಸ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಉತ್ಪನ್ನಗಳನ್ನು ನೀಡುವ ಗುರಿ ಹೊಂದಿರುತ್ತೇವೆ. ಗ್ರಾಹಕರಿಗೆ ಅತ್ಯುತ್ತಮ ಉತ್ಪನ್ನಗಳು ಹಾಗೂ ಅತ್ಯುತ್ತಮ ಸೇವೆ ಒದಗಿಸುವುದು ನಮ್ಮ ಆದ್ಯತೆ’ ಎಂದು ಹೇಳಿದ್ದಾರೆ.

ನಗರದಲ್ಲಿ ಇಂದು

ಪೊಲೀಸ್ ಧ್ವಜ ದಿನಾಚರಣೆ: ಮುಖ್ಯ ಅತಿಥಿ: ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಸ್ಥಳ: ಕೆಎಸ್‌ಆರ್‌ಪಿ ಕವಾಯತು ಮೈದಾನ, ಕೋರಮಂಗಲ, ಬೆಳಿಗ್ಗೆ 8

ಶಿವಸಂಚಾರ ನಾಟಕೋತ್ಸವ 2020–21: ಉದ್ಘಾಟನೆ: ನಾಗತಿಹಳ್ಳಿ ಚಂದ್ರಶೇಖರ, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಮುಖ್ಯ ಅತಿಥಿಗಳು: ಎಂ.ಎಸ್. ಮೂರ್ತಿ, ಶಶಿಧರ ಅಡಪ, ಕೆ.ವಿ. ನಾಗರಾಜ ಮೂರ್ತಿ, ನಾಟಕ ಪ್ರದರ್ಶನ: ಡೋಹರ ಕಕ್ಕಯ್ಯ, ನಿರ್ದೇಶನ: ಮಾಲತೇಶ ಬಡಿಗೇರ, ಆಯೋಜನೆ: ರಂಗಚಂದಿರ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 6

ಕನ್ನಡ ಅನುವಾದ ಕಮ್ಮಟ
ಉದ್ಘಾಟನೆ: ಅಜಕ್ಕಳ ಗಿರೀಶ್ ಭಟ್, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಉಪಸ್ಥಿತಿ: ಪ್ರೊ.ಎಂ. ಅಬ್ದುಲ್ ರೆಹಮಾನ್ ಪಾಷ, ಸಂಪನ್ಮೂಲ ವ್ಯಕ್ತಿಗಳು: ಎಚ್.ಎಸ್.ಎಂ. ಪ್ರಕಾಶ್, ಬಿ.ಸಿ. ರಾಜಕುಮಾರ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾ ಭವನ, 3ನೇ ಮುಖ್ಯ ರಸ್ತೆ, ಎನ್.ಆರ್. ಕಾಲೋನಿ, ಬೆಳಿಗ್ಗೆ 11

ಆರೋಪಿಯಿಂದ ಜಪ್ತಿ ಮಾಡಲಾದ ಆಭರಣ

ಅಂತರರಾಜ್ಯ ಆರೋಪಿ ಬಂಧನ ₹ 16.41 ಲಕ್ಷ ಮೌಲ್ಯದ ಆಭರಣ ಜಪ್ತಿ

ಬೆಂಗಳೂರು: ಕರ್ನಾಟಕ, ತಮಿಳು ನಾಡು, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ಕಳ್ಳತನ ಎಸಗಿದ್ದ ಆರೋಪಿ ಬಸವರಾಜು ಪ್ರಕಾಶ್ (33) ಎಂಬಾತನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತೆಲಂಗಾಣ ಮಲ್ಲಂಪೇಟೆಯ ಬಸವರಾಜು, ಇದುವರೆಗೂ 32 ಕಡೆ ಕಳ್ಳತನ ಎಸಗಿದ್ದ. ಆತನಿಂದ ₹ 16.41 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಂಗೇರಿ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು, 2020ರ ಏಪ್ರಿಲ್ 8ರಂದು ರಾತ್ರಿ ಕತ್ತಿನಲ್ಲಿದ್ದ ಚಿನ್ನದ ಸರವನ್ನು ತೆಗೆದು ಕಿಟಕಿ ಬಳಿಯ ಕುರ್ಚಿ ಮೇಲಿಟ್ಟು ಮಲಗಿದ್ದರು. ಮರುದಿನ ಎದ್ದು ನೋಡಿದಾಗ ಚಿನ್ನದ ಸರವೇ ಇರಲಿಲ್ಲ. ಸರ ಕಳುವಾದ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗಲೇ ಆರೋಪಿ ಸಿಕ್ಕಿಬಿದ್ದ. ಆತನೇ ರಾತ್ರಿ ಕಿಟಕಿ ಬಳಿ ಬಂದು ಸರ ಕದ್ದಿರುವುದಾಗಿ ತಪ್ಪೊಪ್ಪಿಕೊಂಡ' ಎಂದೂ ತಿಳಿಸಿದರು.

'ಆಗಾಗ ನಗರಕ್ಕೆ ಬರುತ್ತಿದ್ದ ಆರೋಪಿ, ಕಳ್ಳತನ ಮಾಡಿಕೊಂಡು ಹೋಗುತ್ತಿದ್ದ. ನೆರೆ ರಾಜ್ಯಗಳಲ್ಲೂ ಈತ ಕೃತ್ಯ ಎಸಗಿದ್ದು ತನಿಖೆಯಿಂದ ತಿಳಿದುಬಂದಿದೆ' ಎಂದೂ ಮಾಹಿತಿ ನೀಡಿದರು.

ಬಸ್ ಗುದ್ದಿ ಪಾದಚಾರಿ ಸಾವು

ಬೆಂಗಳೂರು: ನಾಗವಾರ ಸಿಗ್ನಲ್ ಬಳಿ ಬಿಎಂಟಿಸಿ ಬಸ್ ಗುದ್ದಿ ಮೈ ಮೇಲೆ ಚಕ್ರ ಹರಿದಿದ್ದರಿಂದಾಗಿ ಪಾದಚಾರಿ ಮಂಜುನಾಥ್ (45) ಸ್ಥಳದಲ್ಲೇ ಮೃತಪಟ್ಟಿದ್ದಾರೆ. 'ಸ್ಥಳೀಯ ನಿವಾಸಿಯಾದ ಮಂಜುನಾಥ್, ನಡೆದುಕೊಂಡು ರಸ್ತೆ ದಾಟುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಅಪಘಾತದ ನಂತರ ಬಸ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾರೆ' ಎಂದು ಚಿಕ್ಕಜಾಲ ಸಂಚಾರ ಪೊಲೀಸರು ಹೇಳಿದರು.

'ಹೆಬ್ಬಾಳ ಕಡೆಯಿಂದ ನಾಗವಾರ ಸಿಗ್ನಲ್ ಮೂಲಕ ಬಿಎಂಟಿಸಿ ಬಸ್ (ಕೆಎ 01 ಎಫ್ 8924) ಹೊರಟಿತ್ತು. ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಬಸ್ ಚಾಲನೆ ಮಾಡಿ ಮಂಜುನಾಥ್ ಅವರಿಗೆ ಗುದ್ದಿಸಿದ್ದರು. ನಂತರ ರಸ್ತೆಯಲ್ಲೇ ಬಿದ್ದಿದ್ದ ಮಂಜುನಾಥ್ ಮೈ ಮೇಲೆಯೇ ಬಸ್ಸಿನ ಚಕ್ರ ಹರಿದು ಹೋಗಿತ್ತು' ಎಂದೂ ತಿಳಿಸಿದರು.

ಸರ್ಕಾರಿ ನೌಕರರೆಂದು ಪರಿಗಣಿಸಲು ಆಗ್ರಹ

ಸಾರಿಗೆ ನೌಕರರ ಚಳವಳಿ 'ಕಪ್ಪು ಪಟ್ಟಿ' ಧರಿಸಿ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು' ಎಂಬುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯದ ಸಾರಿಗೆ ನಿಗಮಗಳ ನೌಕರರು ಚಳವಳಿ ಆರಂಭಿಸಿದ್ದು, ಅದರ ಪ್ರಯುಕ್ತ ಗುರುವಾರ 'ಕಪ್ಪು ಪಟ್ಟಿ' ಧರಿಸಿ ಪ್ರತಿಭಟನೆ ನಡೆಸಿದರು.

'ಏಪ್ರಿಲ್ 7ರಿಂದ ರಾಜ್ಯದಾದ್ಯಂತ ಕರ್ತವ್ಯಕ್ಕೆ ಗೈರು ಹಾಜರಾಗಿ ಮುಷ್ಕರ ನಡೆಸಲಾಗುವುದು' ಎಂದು ನೌಕರರು ಈಗಾಗಲೇ ಘೋಷಣೆ ಮಾಡಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಲು ನೌಕರರು, ಗುರುವಾರದಿಂದಲೇ ಸರಣಿ ಪ್ರತಿಭಟನೆ ಆರಂಭಿಸಿದ್ದಾರೆ. ಅದರ ಭಾಗವಾಗಿಯೇ ತಲೆ ಹಾಗೂ ಕೈಗಳಿಗೆ ಕಪ್ಪುಪಟ್ಟಿ ಧರಿಸಿಕೊಂಡು ಕರ್ತವ್ಯಕ್ಕೆ ಹಾಜರಾಗಿ ಆಕ್ರೋಶ ಹೊರಹಾಕಿದರು.

ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸೇರಿದ್ದ ನೌಕರರು, ತಮ್ಮ ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು.

ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದಿಂದ ಚಳವಳಿ ಹಮ್ಮಿಕೊಳ್ಳಲಾಗಿದ್ದು, ಇದರ ನೇತೃತ್ವವನ್ನು ಒಕ್ಕೂಟದ ಗೌರವ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ವಹಿಸಿಕೊಂಡಿದ್ದಾರೆ. ಬಿಎಂಟಿಸಿ, ಕೆಎಸ್ಆರ್‌ಟಿಸಿ ಸೇರಿದಂತೆ ರಾಜ್ಯದ ನಾಲ್ಕು ವಿಭಾಗಗಳ ನೌಕರರು ಚಳವಳಿಯಲ್ಲಿ ಭಾಗವಹಿಸುತ್ತಿದ್ದಾರೆ. ರಾಜ್ಯದ ಎಲ್ಲ ಬಸ್ ನಿಲ್ದಾಣ, ಡಿಪೊಗಳು ಹಾಗೂ ವಿಭಾಗದ ಕಚೇರಿಗಳಲ್ಲಿ ಬಹುಪಾಲು ನೌಕರರು ಕಪ್ಪು ಪಟ್ಟಿ ಧರಿಸಿ ಕರ್ತವ್ಯಕ್ಕೆ ಹಾಜರಾಗಿ ಸಾರ್ವಜನಿಕರ ಗಮನ ಸೆಳೆದರು.

'ಸಾರಿಗೆ ನೌಕರರರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಬೇಕು. 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು ಸೇರಿದಂತೆ ಪ್ರಮುಖ 9 ಬೇಡಿಕೆಗಳ ಈಡೇರಿಕೆಗಾಗಿ ಹಲವು ವರ್ಷಗಳಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಪ್ರತಿ ಬಾರಿಯೂ ಭರವಸೆ ನೀಡುತ್ತಿರುವ ಸರ್ಕಾರ, ಬೇಡಿಕೆ ಈಡೇರಿಕೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ನೌಕರರಿಗೆ ನೋವುಂಟು ಮಾಡಿದೆ. ಅದೇ ಕಾರಣಕ್ಕೆ ಪುನಃ ಮುಷ್ಕರ ಆರಂಭಿಸಲು ತೀರ್ಮಾನಿಸಲಾಗಿದೆ' ಎಂದು ಪ್ರತಿಭಟನನಿರತರು ಹೇಳಿದರು.

'ಏಕಾಏಕಿ ಮುಷ್ಕರ ಆರಂಭಿಸಿದರೆ, ಸಾರ್ವಜನಿಕರಿಗೆ ತೊಂದರೆಯಾಗಲಿದೆ. ಹೀಗಾಗಿ, ಮುಷ್ಕರ ದಿನಾಂಕವನ್ನೂ ಮೊದಲೇ ನಿಗದಿ ಮಾಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿದೆ. ಮುಷ್ಕರ ಆರಂಭಿಸುವ ಮುನ್ನವೇ ಸರ್ಕಾರ, ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಂದಾಗುವ ಸಮಸ್ಯೆಗಳಿಗೆ ಸರ್ಕಾರವೇ ಹೊಣೆ' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಸರಣಿ ಪ್ರತಿಭಟನೆ ಯಾವಾಗ ? ಏನು?

- **ಏಪ್ರಿಲ್ 2** ಬೆಂಗಳೂರು ಸೇರಿದಂತೆ ಹಲವು ನಗರಗಳ ವೃತ್ತಗಳಲ್ಲಿ ಸಾರಿಗೆ ನೌಕರರ ಕುಟುಂಬ ಸದಸ್ಯರಿಂದ ಬಜ್ಜಿ, ಬೊಂಡಾ ಮಾರಾಟ
- **ಏಪ್ರಿಲ್ 3** ಪ್ರಮುಖ ವೃತ್ತಗಳಲ್ಲಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಂದ ಮಾನವ ಸರಪಳಿ ನಿರ್ಮಾಣ
- **ಏಪ್ರಿಲ್ 4** ಸಾರ್ವಜನಿಕರಿಗೆ ಕರಪತ್ರ ಹಂಚಿ ಬೆಂಬಲ ಕೋರಿಕೆ
- **ಏಪ್ರಿಲ್ 5** ಒಂದು ದಿನದ ಧರಣಿ
- **ಏಪ್ರಿಲ್ 6** ನೌಕರರಿಂದ ಸಾಮೂಹಿಕ ಉಪವಾಸ
- **ಏಪ್ರಿಲ್ 7 ರಿಂದ** ರಾಜ್ಯದಾದ್ಯಂತ ಕರ್ತವ್ಯಕ್ಕೆ ಗೈರು. ಬಸ್ ಸಂಚಾರ ಸ್ಥಗಿತ ಸಾಧ್ಯತೆ

ಅಪಘಾತ: ಲಾರಿ ಚಾಲಕನಿಗೆ 6 ತಿಂಗಳ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ಯುವತಿಯೊಬ್ಬರ ಸಾವಿಗೆ ಕಾರಣವಾಗಿದ್ದ ಲಾರಿ ಚಾಲಕ ತಿಮ್ಮಯ್ಯನಿಗೆ (39) 6 ತಿಂಗಳು ಕಾರಾಗೃಹ ಶಿಕ್ಷೆ ಹಾಗೂ ₹ 12 ಸಾವಿರ ದಂಡ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

2015ರ ಆಗಸ್ಟ್ 26ರಂದು ಪ್ರಿಯಾಂಕಾ ಎಂಬುವರು ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಹಿಂಬದಿ ಆಸನದಲ್ಲಿ ಸಹೋದರಿ ಅಶ್ವಿನಿ (21) ಕುಳಿತಿದ್ದರು. ಮಿಲ್ ರಸ್ತೆಯ ಜಂಕ್ಷನ್ ಬಳಿ ಅಡುಗೆ ಅನಿಲ ಸಿಲಿಂಡರ್ ತುಂಬಿಕೊಂಡು ಹೊರಟಿದ್ದ ಲಾರಿ, ದ್ವಿಚಕ್ರ ವಾಹನಕ್ಕೆ ಗುದ್ದಿತ್ತು. ಅಪಘಾತದಿಂದಾಗಿ ಅಶ್ವಿನಿ ಮೃತಪಟ್ಟಿದ್ದರು.

ಅಪಘಾತಕ್ಕೆ ಕಾರಣವಾದ ಆರೋಪದಡಿ ಲಾರಿ ಚಾಲಕ ತಿಮ್ಮಯ್ಯನನ್ನು ಬಂಧಿಸಿದ್ದ ಚಿಕ್ಕಪೇಟೆ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಟಿ.ಡಿ. ಸತೀಶ್‌ಕುಮಾರ್, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ವಿಮಲಾ ವಾದಿಸಿದ್ದರು.

ಶಂಕಿತ ಉಗ್ರರ ವಿರುದ್ಧ ಚಾರ್ಜ್‌ಶೀಟ್

ಬೆಂಗಳೂರು: ರಾಜ್ಯದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಯುವಕರನ್ನು ನೇಮಿಸಿಕೊಂಡು ತರಬೇತಿ ನೀಡುತ್ತಿದ್ದ ಆರೋಪದಡಿ ಬಂಧಿಸಲಾಗಿದ್ದ ಇಬ್ಬರು ಶಂಕಿತ ಉಗ್ರರ ವಿರುದ್ಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ನಗರದ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ತಮಿಳುನಾಡಿನ ಅಹ್ಮದ್ ಅಬ್ದುಲ್ ಖಾದರ್ ಹಾಗೂ ಇರ್ಫಾನ್ ನಾಸೀರ್‌ನನ್ನು ಕಳೆದ ಅಕ್ಟೋಬರ್‌ನಲ್ಲಿ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಅವರಿಂದ ಲ್ಯಾಪ್‌ಟಾಪ್, ಕಂಪ್ಯೂಟರ್ ಹಾಗೂ ಹಲವು ಸಾಧನಗಳನ್ನು ಜಪ್ತಿ ಮಾಡಿದ್ದರು.

ಬಂಧಿತ ಆರೋಪಿಗಳು, 'ಕುರಾನ್ ಸರ್ಕಲ್' ಎಂಬ ಗುಂಪು ರಚಿಸಿಕೊಂಡು ಸಾಮಾಜಿಕ ಜಾಲತಾಣಗಳ ಮೂಲಕ ಯುವಕರನ್ನು ನೇಮಿಸಿಕೊಳ್ಳುತ್ತಿದ್ದರು. ನಗರದಲ್ಲಿರುವ ಯುವಕರನ್ನು ಸೆಳೆದು, ಅವರಿಗೆ ತರಬೇತಿಯನ್ನೂ ನೀಡುತ್ತಿದ್ದರು. ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿ ಸಂಘಟನೆ ಜೊತೆಯೂ ಆರೋಪಿಗಳ ನಂಟಿದ್ದ ಮಾಹಿತಿ ಎನ್‌ಐಎಗೆ ಲಭ್ಯವಾಗಿತ್ತು. ಬೆಂಗಳೂರು ಹಾಗೂ ಇತರೆಡೆ ಭಯೋತ್ಪಾದಕ ಕೃತ್ಯ ಎಸಗುವುದು ಆರೋಪಿಗಳ ಉದ್ದೇಶವಾಗಿತ್ತು ಎಂದು ಚಾರ್ಜ್‌ಶೀಟ್‌ನಲ್ಲಿ ತಿಳಿಸಲಾಗಿದೆ.

ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸಿದ್ದ ಎನ್‌ಐಎ, ಆರೋಪಿಗಳನ್ನು ಬಂಧಿಸಿತ್ತು. ಕೃತ್ಯಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಿರುವ ಎನ್‌ಐಎ, ಆರೋಪಿಗಳ ವಿರುದ್ಧ ಇದೀಗ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಸದ್ಯದಲ್ಲೇ ಪ್ರಕರಣದ ವಿಚಾರಣೆಯೂ ಆರಂಭವಾಗಲಿದೆ.

ವಿದ್ಯುತ್ ವ್ಯತ್ಯಯ 4ರಿಂದ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆಯ ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಸಲುವಾಗಿ ಇದೇ 4ರಿಂದ 10ರ ತನಕ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ರಾಮಯ್ಯ ಬಡಾವಣೆ, ಹಾವನೂರು ಎಕ್ಸ್‌ಟೆನ್ಷನ್, ರಾಷ್ಟ್ರೀಯ ಹೆದ್ದಾರಿ-4, ರಕ್ಷಣಾ ಇಲಾಖೆ ಕಾಲೊನಿ, ಮುನಿಕೊಂಡಪ್ಪ ಬಡಾವಣೆ, ಮುನೇಶ್ವರ ನಗರ, ವಿಡಿಯಾ ಶಾಲೆ, ಹೆಸರಘಟ್ಟ ಮುಖ್ಯರಸ್ತೆ, ಮಂಜುನಾಥ ನಗರ, ಹರಿಕುಮಾರ ಬಡಾವಣೆ, ಸೋಪ್ ಫ್ಯಾಕ್ಟರಿ ಸುತ್ತ-ಮುತ್ತಲಿನ ಪ್ರದೇಶ.

ಜೆಎಸ್‌ಎಸ್ ಶಾಲೆ, ಗಣಪತಿಪುರ, ಖೋಡೇಸ್ ಫ್ಯಾಕ್ಟರಿ, ಜೆ.ಪಿ. ನಗರ 6ನೇ ಹಂತ, ಸಾರಕ್ಕಿ ತೋಟ, ರೋಸ್ ಗಾರ್ಡನ್, ಸಿದ್ದೇಶ್ವರ ಥಿಯೇಟರ್, ಸಿಂಧೂರ್ ಕಲ್ಯಾಣ ಮಂಟಪ, ಆರ್‌ಬಿಐ ಬಡಾವಣೆ, ಶ್ರೀನಿಧಿ ಬಡಾವಣೆ, ಎಸ್‌ಬಿಎಂ ಕಾಲೊನಿ, ಬಿಸಿಎಂಸಿ ಬಡಾವಣೆ, ತಿಪ್ಪಸಂದ್ರ, ಚನ್ನಮ್ಮ ಗಾರ್ಡನ್, ರಘುವಿನಹಳ್ಳಿ, ಚುಂಚಘಟ್ಟ ಮುಖ್ಯರಸ್ತೆ, ಜರಗನಹಳ್ಳಿ, ಎಂ.ಎಸ್. ಬಡಾವಣೆ, ಸಾರಕ್ಕಿ ಕೆರೆ ಆಸುಪಾಸು, ರಾಜಮ್ಮ ಗಾರ್ಡನ್, ರಾಜೀವ್ ಗಾಂಧಿ ರಸ್ತೆ, ಗೋವಿಂದಪ್ಪ ಬಡಾವಣೆ, ಶಿವಾನಂದ ನಗರ ಸುತ್ತ-ಮುತ್ತಲಿನ ಪ್ರದೇಶ.

ಬನ್ನೇರುಘಟ್ಟ ರಸ್ತೆ, ಪಾಂಡುರಂಗ ನಗರ, ಸಹ್ಯಾದ್ರಿ ಬಡಾವಣೆ, ಅಪೊಲೊ ಆಸ್ಪತ್ರೆ, ಅಡಿಗಾಸ್ ಹೋಟೆಲ್, ಆದರ್ಶ ಅಪಾರ್ಟ್‌ಮೆಂಟ್, ಡೆಲ್ಟಾ ಫಾರೆಸ್ಟ್ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಸನ ಜಿಲ್ಲಾ ಪಂಚಾಯಿತಿಗೆ ಪುರಸ್ಕಾರ

ಹಾಸನ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು, ಪಂಚಾಯಿತಿಗಳ ಸಬಲೀಕರಣಕ್ಕೆ ನೀಡುವ ರಾಷ್ಟ್ರ ಪ್ರಶಸ್ತಿಗೆ ಹಾಸನ ಜಿಲ್ಲೆ ಆಯ್ಕೆಯಾಗಿದೆ.

ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳನ್ನು ಎಲ್ಲಾ ಸ್ವರೂಪಗಳಲ್ಲಿ ಸಶಕ್ತಗೊಳಿಸುವ ನಿಟ್ಟಿನಲ್ಲಿ ಮಾಡಿದ ಅತ್ಯುತ್ತಮ ಸಾಧನೆಗಾಗಿ, ಹಾಸನ ಜಿಲ್ಲಾ ಪಂಚಾಯಿತಿಯು ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದು, 'ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರ'ಕ್ಕೆ ಪಾತ್ರವಾಗಿದೆ.

ಏ.24ರಂದು ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

WEEKEND CORNER ಕ್ಲಾಸಿಫೈಡ್ಸ್

REAL ESTATE SELLING

Agricultural Land Converted

Nelamangala

EAST FACING Commercial 12 Guntas Agricultural Land Near Nelamangala Rs.45 Lakhs clear Documents. Contact-9741228396

Flat

HRBR Layout

ASWATH ENCLAVE Spacious Super Delux Last 2 Nos 3 BHK 1557/ 1683 sqft Rs. 7200 Sqft includes BESCOM + BWSSB Deposit + Car Parking at 9th E Main, 1st Block, Posh Locality. 9845351055/ 9845905000.

Indiranagar

LARGE 3 Bed Apartment in Versova Layout, Near Indira Nagar with lift, private car parking and 24 hour security. Immediate Possession. Price Rs. 2.6 Cr. Call: 7259665390

Rajarajeshwari Nagar

3BHK FLATS, 54 Lakhs, Opposite Gopalan Arcade, Metro Station. OC+CC, Canara-Bank Approved. Contact: 9611374397

Vidyaranyapura

PRE-LAUNCH OFFER 3BHK (1800sft) FLAT with Carpark. Contact: 8296895858 Also Sale 20x30 N/S Facing Site

Industrial & Factory

Kanakapura Road

INDUSTRIAL PLOTS 4000sft to 6500sft for Sale. suitable for Service Station, Garage, Small Scale Industries etc at Jaraganahalli Pipe-line road, Kanakapura Road,near JP Nagar Metro Station. Contact:Verna Developers MG Road. 9620253180/ 08050749740

Sites

Banashankari

"BANASHANKARI 2ND-STAGE 35x55, 45x60, 45x70, 50x70, 50x80 Banashankari 3rd-Stage 30x40, 30x45, 40x60, 50x80 Banashankari 6th-Stage 30x40 'Sri Ganesh Real Estate' 9845286505"

Nagarabhavi

"40X60 EF Site Sale Nagarabhavi Railway 1st Stage 40 feet Road, 7500/-P.Sft Genuine Buyers Contact. 9845268611"

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

RENTAL PROPERTIES

Accommodation Available

Commercial

COMMERCIAL SPACE for rent @Bannerghatta Road and Thilaknagar Road junction opp HP petrolbunk, ground floor 1000sqft for bank, showroom, hotel, 120sqft for ATM, 2ND floor 2100sqft furnished cabins workstations, 4th floor 1300 and 400sqft with power backup, lift, carparking. Contact 9845522122, 9353883078.

Flats

AUGUSTA GOLF VILLAGE, Luxury units for rent, 3 & 4 BHK ready to occupy with all amenities, Off Hennur Road. Call: 9900085276

1800 SQ.FT. 3 BHK Flat for RENT. 'Esteem Heritage', J.P. Nagar 5th Phase, 29,000/- Maintenance Extra. VEG ONLY. Phone: 9743411659, 9886115986.

Industrial And Factory

4 ACRES of land Available on 6 lane road NH7 80 km from Bangalore and 40 km from Hosur Suitable for Warehouse and Factories Contact 8056149444

House

INDEPENDENT HOUSE 1BHK 7K 2BHK 15K semi furnished at akshaya nagara, TC palya 9160087707, 7981438521

2 BHK house Rent Rs.12,000/- Ist Floor at Kanakanagar, near Manyatha Tech Park Contact: 9845535747

JOB OPPORTUNITIES

Engg/ Production Technical

CALIBRE UPS, Inverters & Batteries Near Yeshwanthpur Requires Male PUC/ITI/DIPLOMA Pass or Fail for Electrical/Electronics Technicians Post. Male/Female Office Assistant With Good Communication Contact-9845034531

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

Marketing & Sales

WANTED 10+ passed-boys... for telecom sales and promoters... attractive salary and incentives... contact 9844116015

WANTED MARKETING executives for leading newspaper Salary 15000/- to 25000/-. 2 wheeler must. Call: 8095400002.

Teachers/ Professors

WANTED Teachers for Higher Primary & High School Mathematics & Physics. MSc/BSc, B.Ed.Maths, Physics. Yeshwanthpur, Divanarapalya, Bangalore. Contact No. 9379191544

BUSINESS

Business to Business

Construction And Maintenance

CONSTRUCTION OF YOUR Dream House/ Villa- Renovation, Extension Floor Work etc with good Materials- 9353082981.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

Business Offers

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

EDUCATIONAL

Admission

DIRECT FINAL Year: B.Ed/ LL.B/B.Tech/M.Tech/ Diploma/MBA/BBA/BCA/ B.Com. Govt,UGC Recognised, Join immediately. Asha Institute: Bangalore. 9448460103/ 7093438248

PERSONAL

Change of Name

OM PARKASH, 14822598N, HAV/ MT, Vill- NIHALPURA, SOHALI, BUHANA, JHUNJHUNU, RAJASTHAN, have changed my name from OM PARKASH to OM PRAKASH, 01/04/2021, Notary K.V. Mani, Bangalore

CHANGE OF NAME

I, RAJKUMARA G S aged about 47 years S/o. Late. Shanmukappa. G, R/at. No.347, Maatha Nilaya, 13th Cross, 3rd Block, BEL Layout, Vidyaranyapura Post, Bengaluru-560097 have mentioned my name as Rajakumara G S, G S Raju, Rajkumar G, and Rajkumar G S S/o Shanmukhappa G. Here declaring that my correct name is **RAJKUMARA.G.S** vide affidavit dated 10/02/2021 sworn before XXIV Addl Chief Metropolitan Magistrate, Bangalore and / or sworn before Notary P. N. Nagesha, Bangalore. Hencefourth, I shall be called as **RAJKUMARA. G. S** only

I, BHAGYA W/o Siddegowda residing at Badagalapura Grama, Hadanur Post, Saraguru Hobli, Heggadadevanakote Tq, Mysore Dist, Karnataka-571121 have changed my name to BHAGYAMMA vide affidavit dated 18/03/2021 before notary G.Rajendra, Bengaluru.

I, MANJULA B and MANJULA BADARINARAYANA aged about 45 years, W/o Raghavendra Devaramane, residing at No.1104, 10th Cross, 21st Main, 1st Sector H.S.R Layout, Bengaluru-560102 have changed my name to MANJULA BHAT vide affidavit dated 31-03-2021 before Harisha.G, Notary

I, SHANKER BABU THANDRA resident of No. 26-20, Karywell Homes, Gandhamguda, Opp. Discovery School, Hydershahkote, Hyderabad-500091, have changed my name to THARAK RAJ THANDRA vide affidavit dated 31/03/2021 before notary L. Puttaraju, Bengaluru.

I, BEENA Mariykandi Elliah W/o M.E. Jyothish aged 49 Years Residing at No. 16, Anugraha, Near Nanjappa Circle, L.G. Enclave, Vidyaranyapura, Bangalore 560097. Have Changed my name to BEENA JYOTHISH vide affidavit dated 01.04.2021 before Notary L. Gopalakrishna, Bangalore

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಎಸ್‌ಪಿಗಳ ವರ್ಗಾವಣೆ

ಬೆಂಗಳೂರು: ಶಿವಮೊಗ್ಗ , ದಕ್ಷಿಣ ಕನ್ನಡ ಮತ್ತು ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ವರ್ಗಾವಣೆಗೊಳಿಸಿ ಗುರುವಾರ ಆದೇಶ ಹೊರಡಿಸಲಾಗಿದೆ.

ಶಿವಮೊಗ್ಗ ಎಸ್‌ಪಿ ಹುದ್ದೆಯ-ಲ್ಲಿದ್ದ 2012ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಕೆ.ಎಂ. ಶಾಂತರಾಜು ಅವರನ್ನು ಬೆಂಗಳೂರಿನ ಪೂರ್ವ ಸಂಚಾರ ವಿಭಾಗದ ಡಿಸಿಪಿ ಹುದ್ದೆಗೆ ವರ್ಗಾಯಿಸಿದ್ದು, ಈ ಹುದ್ದೆಯಲ್ಲಿದ್ದ ನಾರಾಯಣ ಎಂ. ಅವರನ್ನು ವರ್ಗಾವಣೆ ಮಾಡಲಾಗಿದೆ. ದಕ್ಷಿಣ ಕನ್ನಡ ಎಸ್‌ಪಿ ಹುದ್ದೆಯಲ್ಲಿದ್ದ 2014ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಬಿ.ಎಂ. ಲಕ್ಷ್ಮೀಪ್ರಸಾದ್ ಅವರನ್ನು ಶಿವಮೊಗ್ಗ ಎಸ್‌ಪಿ ಹುದ್ದೆಗೆ ನೇಮಿಸಲಾಗಿದೆ.

ಯಾದಗಿರಿ ಎಸ್‌ಪಿ ಹುದ್ದೆಯಲ್ಲಿದ್ದ 2015ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಸೋನಾವಣೆ ಹೃಷಿಕೇಶ್ ಭಾಗವಾನ್ ಅವರನ್ನು ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಕಾರಂತ ಬಡಾವಣೆ: ಏ. 30ಕೊನೆ ದಿನ

ಬೆಂಗಳೂರು: ಡಾ. ಕೆ. ಶಿವರಾಮಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲು ಏಪ್ರಿಲ್ 30 ಕೊನೆಯ ದಿನ ಎಂದು ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿ ತಿಳಿಸಿದೆ.

ಶಿವರಾಮ ಕಾರಂತ ಬಡಾವಣೆಗೆ ಗೊತ್ತುಪಡಿಸಿರುವ ಪ್ರದೇಶಗಳಲ್ಲಿ 2018ರ ಆ.3ಕ್ಕೆ ಮುಂಚಿತವಾಗಿ ನಿರ್ಮಿಸಲಾದ ಕಟ್ಟಡ ಮತ್ತು ಮನೆಗಳ ಬಗ್ಗೆ ವರದಿಯನ್ನು ನೀಡಲು ಸುಪ್ರೀಂ ಕೋರ್ಟ್ ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿಯನ್ನು ನೇಮಿಸಿದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಮಿತಿಯು ಮಾರ್ಚ್ 1ರಂದು ಚಾಲನೆ ನೀಡಿತ್ತು. ಈ ಬಡಾವಣೆಯ ಅಧಿಸೂಚಿತ ಪ್ರದೇಶಗಳಲ್ಲಿ ಐದು ಸಹಾಯ ಕೇಂದ್ರಗಳನ್ನು ಆರಂಭಿಸಲಾಗಿದೆ. ಈ ಕೇಂದ್ರಗಳಲ್ಲಿ ಸಮಿತಿಯು ದಾಖಲೆ ಸಂಗ್ರಹಿಸುತ್ತಿದೆ.

ಆನ್‌ಲೈನ್ ಪೋರ್ಟಲ್ (jcc-skl.in) ಮೂಲಕವೂ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್ 30ರ ನಂತರ ನಂತರ ಅರ್ಜಿ ಸ್ವೀಕರಿಸುವುದಿಲ್ಲ ಎಂದು ಸಮಿತಿಯು ತಿಳಿಸಿದೆ.

ಡಾ. ವೆಂಕಟೇಶ್ ನೇಮಕ

ಡಾ. ವೆಂಕಟೇಶ್

ಬೆಂಗಳೂರು: ನಗರದ ಅಪೋಲೊ ಆಸ್ಪತ್ರೆಯ ತುರ್ತು ಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ್ ಎ.ಎನ್. ಅವರು ಸೊಸೈಟಿ ಫಾರ್ ಎಮರ್ಜೆನ್ಸಿ ಮೆಡಿಸಿನ್ ಇಂಡಿಯಾದ (ಸೆಮಿ) ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ತುರ್ತು ಚಿಕಿತ್ಸೆ ವಿಭಾಗದಲ್ಲಿ ತರಬೇತಿ, ಶಿಕ್ಷಣ, ಸಂಶೋಧನೆ ಮತ್ತು ಸೇವೆಗಳನ್ನು ಸೆಮಿ ಒದಗಿಸುತ್ತಿದೆ. ಈ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸುವ ಏಕೈಕ ಸಂಘಟನೆ ಇದಾಗಿದೆ. ವೈದ್ಯರ ಪ್ರಾವೀಣ್ಯತೆ ಮತ್ತು ಕೌಶಲ ಹೆಚ್ಚಿಸಲು ಸಹಕಾರಿಯಾಗಿದೆ. ಇದರ ಅಧ್ಯಕ್ಷರಾಗಿ 2023ರವರೆಗೆ ವೆಂಕಟೇಶ್ ಕಾರ್ಯನಿರ್ವಹಿಸಲಿದ್ದಾರೆ.

ಬಾಲಕನಿಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ನಗರದ ಎಂಟೂವರೆ ವರ್ಷದ ಬಾಲಕನಿಗೆ ಮಿದುಳಿಗೆ ಹೊಂದಿಕೊಂಡು ಮೂಗಿನ ಭಾಗದಲ್ಲಿ ಬೆಳವಣಿಗೆ ಹೊಂದಿದ್ದ ಗಡ್ಡೆಯನ್ನು ಆಸ್ಟರ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದಿದ್ದಾರೆ.

ಒಂದು ವರ್ಷದಿಂದ ಬಾಲಕ ಸಮಸ್ಯೆ ಎದುರಿಸುತ್ತಿದ್ದ. ಗಡ್ಡೆಯು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದ ಪರಿಣಾಮ ಮುಖದ ಸ್ವರೂಪ ಕೂಡ ಬದಲಾಗಿತ್ತು. ಸಿಟಿ ಸ್ಕ್ಯಾನ್ ಮಾಡಿದಾಗ ಮಿದುಳಿನ ಮುಂಭಾಗ ಊತದ ರೂಪದಲ್ಲಿ ಗಡ್ಡೆ ಬೆಳವಣಿಗೆ ಹೊಂದಿರುವುದು ಪತ್ತೆಯಾಯಿತು. ಆ ಭಾಗದಲ್ಲಿ ಗಡ್ಡೆ ಇನ್ನಷ್ಟು ದೊಡ್ಡದಾದಲ್ಲಿ ಬಾಲಕನ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿದ್ದವು. ಈ ಸಮಸ್ಯೆಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ಎನ್ಸೆಫಲೋಸೆಲೆ ಎಂದು ಕರೆಯಲಾಗುತ್ತದೆ. ಆರು ಗಂಟೆಗಳ ಅವಧಿಯಲ್ಲಿ ಸಂಕೀರ್ಣ ಶಸ್ತ್ರಚಿಕಿತ್ಸೆ ಮೂಲಕ ಅನಗತ್ಯ ಭಾಗ ಹೊರತೆಗೆಯಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.



ಟ್ಯಾಕ್ಸಿ ಪ್ರಯಾಣ ದರ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಕಡೆ ಟ್ಯಾಕ್ಸಿಯಲ್ಲಿ ಪ್ರಯಾಣಿಸುವವರ ಜೇಬಿಗೆ ಇನ್ನು ಮತ್ತಷ್ಟು ಕತ್ತರಿ ಬೀಳಲಿದೆ.

ಟ್ಯಾಕ್ಸಿ ಬಳಕೆಗೆ ವಿಧಿಸುತ್ತಿದ್ದ ಪ್ರತಿ ಕಿ.ಮೀ ಹಾಗೂ ಕನಿಷ್ಠ 4 ಕಿ.ಮೀ ವರೆಗಿನ ದರವನ್ನು ಹೆಚ್ಚಿಸಿ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ಜಿಎಸ್‌ಟಿ, ಟೋಲ್ ಶುಲ್ಕವನ್ನು ಪ್ರಯಾಣಿಕರಿಂದಲೇ ವಸೂಲಿ ಮಾಡಬಹುದು ಎಂದೂ ಆದೇಶ ಹೇಳಿದೆ.

2018ರಲ್ಲಿ ಹೊರಡಿಸಿದ್ದ ಆದೇಶದಲ್ಲಿ ಬೆಂಗಳೂರು ನಗರ ವ್ಯಾಪ್ತಿ ಮತ್ತು ಬಿಬಿಎಂಪಿ ವ್ಯಾಪ್ತಿಯಿಂದ 25 ಕಿ.ಮೀ.ವರೆಗಿನ ಪರಿಧಿಯಲ್ಲಿ ಟ್ಯಾಕ್ಸಿ ಪ್ರಯಾಣ ದರವನ್ನು ಹೆಚ್ಚಿಸಲಾಗಿತ್ತು. ಪರಿಷ್ಕೃತ ಆದೇಶದಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನೂ ಒಳಗೊಂಡಂತೆ ಎಲ್ಲ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳ ವ್ಯಾಪ್ತಿಗೂ ಅನ್ವಯವಾಗುವಂತೆ ದರವನ್ನು ಹೆಚ್ಚಿಸಲಾಗಿದೆ.

ಇಂಧನ ಬೆಲೆ ಮತ್ತು ವಾಹನ ನಿರ್ವಹಣಾ ವೆಚ್ಚ ಗಣನೀಯವಾಗಿ ಹೆಚ್ಚಾಗುತ್ತಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ತಕ್ಷಣದಿಂದಲೇ ನೂತನ ದರ ಜಾರಿಗೆ ಬರಲಿದೆ ಆದೇಶ ಹೇಳಿದೆ.

ಸಮಯದ ಆಧಾರದಲ್ಲಿ ಹೆಚ್ಚು ಹಣ ಕೇಳದೆ, ಕಿ.ಮೀ. ಆಧಾರದಲ್ಲಿ ಸರ್ಕಾರ ನಿಗದಿಪಡಿಸಿದ ಹಣವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ನಿರ್ಬಂಧ ವಿಧಿಸಲಾಗಿದೆ.

ಕಾಯುವಿಕೆ ದರಗಳನ್ನು ಮೊದಲಿನ 20 ನಿಮಿಷಗಳವರೆಗೆ ಉಚಿತವಾಗಿ, ನಂತರದ ಪ್ರತಿ 15 ನಿಮಿಷಗಳಿಗೆ ₹10ರಂತೆ ನಿಗದಿ ಪಡಿಸಲಾಗಿದೆ.

ಕನಿಷ್ಠ ಮತ್ತು ಗರಿಷ್ಠ ದರವನ್ನು ಸರ್ಕಾರ ನಿಗದಿ ಪಡಿಸಿದ್ದು, ಸ್ಥಳೀಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಆಯಾ ವ್ಯಾಪ್ತಿಯಲ್ಲಿ ದರ ನಿಗದಿ ಮಾಡಬಹುದಾದ ಅವಕಾಶವನ್ನು ನೀಡಲಾಗಿದೆ.

ಟ್ಯಾಕ್ಸಿ ಪ್ರಯಾಣದ ಹೊಸ ದರ ಪಟ್ಟಿ (₹ಗಳಲ್ಲಿ)

ವಾಹನದ ವರ್ಗ	ವಾಹನದ ಮೌಲ್ಯ	ನಿಗದಿತ ದರ (ಕನಿಷ್ಠ 4 ಕಿ.ಮೀ.ವರೆಗೆ)	ಹೆಚ್ಚುವರಿ ಪ್ರತಿ ಕಿ.ಮೀ.ಗೆ	
			ಕನಿಷ್ಠ	ಗರಿಷ್ಠ
ಡಿ	5 ಲಕ್ಷದವರೆಗೆ	75	18	36
ಸಿ	5 ಲಕ್ಷದಿಂದ 10 ಲಕ್ಷ	100	21	42
ಬಿ	10 ಲಕ್ಷದಿಂದ 16 ಲಕ್ಷ	120	24	48
ಎ	16 ಲಕ್ಷ ಮೇಲ್ಪಟ್ಟು	150	27	54

ರಾಜ್ಯ ಸರ್ಕಾರಕ್ಕೆ ಜೀವ ವೈವಿಧ್ಯ ಮಂಡಳಿ ವರದಿ ಸಲ್ಲಿಕೆ

ಅರಣ್ಯ ನಾಶವೇ ಭೂಕುಸಿತಕ್ಕೆ ಪ್ರಮುಖ ಕಾರಣ

ಪ್ರಜಾವಾಣಿ ವಾರ್ತೆ

ಭೂಕುಸಿತ ಕುರಿತ ಉನ್ನತ ಮಟ್ಟದ ಅಧ್ಯಯನ ಸಮಿತಿಯು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರಿಗೆ ವರದಿ ಸಲ್ಲಿಸಿತು. ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮತ್ತು ಸಮಿತಿ ಸದಸ್ಯರು ಇದ್ದರು.

ಬೆಂಗಳೂರು: ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಭೂಕುಸಿತ ಹೆಚ್ಚಾಗಲು ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿರುವ ಅರಣ್ಯ ನಾಶ ಮತ್ತು ಅರಣ್ಯ ಛಿದ್ರೀಕರಣ ಪ್ರಮುಖ ಕಾರಣ. ಈ ಪ್ರದೇಶಗಳಲ್ಲಿ ನೈಸರ್ಗಿಕ ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ತಜ್ಞರ ಸಮಿತಿ ಸರ್ಕಾರಕ್ಕೆ ಸಲಹೆ ನೀಡಿದೆ.

ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಅಧ್ಯಕ್ಷತೆಯ ಈ ಸಮಿತಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಗುರುವಾರ ವರದಿ ಸಲ್ಲಿಸಿತು.

ಕೇಂದ್ರ ಸರ್ಕಾರ ನೀಡುವ ‘ಮಿಟಿಗೇಷನ್ ಫಂಡ್’ ಮೂಲಕ ಭೂ ಕುಸಿತ ಪ್ರದೇಶದ ಪುನರ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುದಾನವನ್ನೂ ಮೀಸಲಿಡುವ ಬಗ್ಗೆ ಸರ್ಕಾರ ಪರಿಶೀಲಿಸುವುದು ಹಾಗೂ ವರದಿಯಲ್ಲಿ ಮಾಡಲಾಗಿರುವ ಶಿಫಾರಸುಗಳ ಅನುಷ್ಠಾನಕ್ಕೆ ಸರ್ಕಾರ ಪರಿಶೀಲಿಸಿ ಕ್ರಮಕೈಗೊಳ್ಳಲಿದೆ ಎಂದು ಯಡಿಯೂರಪ್ಪ ತಿಳಿಸಿದರು.

ವರದಿಯ ಪ್ರಮುಖಾಂಶಗಳು:

- ಕರಾವಳಿಯ ನೈಸರ್ಗಿಕ ಸಂಪತ್ತು, ಮಲೆನಾಡಿನ ನದಿ-ಕಣಿವೆಗಳ ಉಳಿವಿಗೆ ಪೂರಕವಾದ ಮತ್ತು ಭೂ-ಕುಸಿತ ತಡೆಗಟ್ಟಲು ಭಾರಿ ಭೂ-ಕುಸಿತ ಪ್ರಕರಣಗಳನ್ನು ನೈಸರ್ಗಿಕ ವಿಪತ್ತು ವ್ಯಾಖ್ಯೆಯಡಿ ತರಬೇಕು. ಭೂ-ಕುಸಿತ ನಿಯಂತ್ರಣ ಮಾರ್ಗೋಪಾಯಗಳ ಬಗ್ಗೆ ಕ್ರಿಯಾಯೋಜನೆ ರೂಪಿಸಬೇಕು.
- ಕರ್ನಾಟಕ ರಾಜ್ಯ ವಿಕೋಪ ನಿಯಂತ್ರಣ ಪ್ರಾಧಿಕಾರದ ನೇತೃತ್ವದಲ್ಲಿ ಸೂಕ್ತ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸಬೇಕು. ಇವುಗಳ ಜಾರಿಗೆ ಅಗತ್ಯವಿರುವ ತಾಂತ್ರಿಕ ಮಾಹಿತಿಗಳನ್ನು ನೀಡುವ ನೋಡಲ್ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವನ್ನು ಗುರುತಿಸಬೇಕು.
- ಮಲೆನಾಡು ಮತ್ತು ಕರಾವಳಿಯ ಎಲ್ಲ ತಾಲ್ಲೂಕುಗಳಲ್ಲಿ ಭೂಕುಸಿತದ ಸಾಧ್ಯತೆ ಇರುವ ಪ್ರದೇಶಗಳ ಗ್ರಾಮ ಮಟ್ಟದ ನಕ್ಷೆ ರಚಿಸುವುದು.
- ಭೂಕುಸಿತದ ಕುರಿತು ಮೊದಲೇ ಶೀಘ್ರ ಮುನ್ಸೂಚನೆ ನೀಡುವ ತಾಂತ್ರಿಕ ವ್ಯವಸ್ಥೆಯನ್ನು ರೂಪಿಸುವುದು. ಜಿಲ್ಲಾಡಳಿತಗಳು ಸಕಾಲದಲ್ಲಿ ಅವುಗಳ ಸೂಕ್ತ ಸಹಾಯ ಪಡೆಯುವಂಥ ಆಡಳಿತಾತ್ಮಕ ನೀತಿ ರೂಪಿಸುವುದು.
- ತಳ ಮಟ್ಟದಲ್ಲಿ ಜನ ಸಹಭಾಗಿತ್ವದ ವಿಕೋಪ ಅಪಾಯ ತಡೆ ಯೋಜನೆ ರೂಪಿಸಬೇಕು.
- ಮಲೆನಾಡು ಮತ್ತು ಕರಾವಳಿ ಭೂಕುಸಿದ ಸಾಧ್ಯತೆ ಇರುವ ಪ್ರದೇಶಗಳ ನಾಶವಾದ ಅರಣ್ಯಭೂಮಿಯಲ್ಲಿ, ಸ್ಥಳೀಯ ಜನರ ಸಹಭಾಗಿತ್ವದೊಂದಿಗೆ, ಸ್ಥಳೀಯ ಸಸ್ಯ ಪ್ರಭೇಧಗಳನ್ನು ನೆಟ್ಟು, ಕಾಡು ಬೆಳೆಸುವ ಯೋಜನೆಗಳನ್ನು ರೂಪಿಸಬೇಕು.
- ಮೇಲ್ಮೈ ನೀರು ಹರಿಯುವ ಸಹಜ ಮಾರ್ಗಗಳಾದ ಹೊಳೆ-ತೊರೆಗಳು, ಕೆರೆ ಕೋಡಿ ಹರಿಯುವ ಕಣಿವೆಗಳು ಹಾಗೂ ಮಳೆಗಾಲದಲ್ಲಿ ನೀರು ಹರಿಯುವ ಸಹಜ ಜಲ ಮಾರ್ಗಗಳು ಹೂಳು ತುಂಬದಂತೆ, ಅತಿಕ್ರಮಣವಾಗದಂತೆ ಕಸ ಕಟ್ಟದಂತೆ ಸೂಕ್ತವಾಗಿ ನಿರ್ವಹಿಸಬೇಕು.
- ಅನಧಿಕೃತವಾಗಿ ಬಳಕೆಯಾಗುತ್ತಿರುವ ಮರ ಕಡಿಯುವ ವಿದ್ಯುತ್ ಯಂತ್ರಗಳು, ಭೂಕೊರೆತ ಯಂತ್ರಗಳು, ಗಣಿಗಳಲ್ಲಿ ಬಳಸುವ ಸ್ಫೋಟಕಗಳು, ಭೂ ಅಗೆತದ ಬೃಹತ್ ಯಂತ್ರಗಳನ್ನು ಸೂಕ್ತ ಕಾನೂನು ಮತ್ತು ಸಕ್ರಮ ಪ್ರಾಧಿಕಾರದ ಮೂಲಕ ನಿಯಂತ್ರಿಸಬೇಕು.

23 ತಾಲ್ಲೂಕುಗಳಲ್ಲಿ ಭೂಕುಸಿತದ ಸಾಧ್ಯತೆ

ಇಸ್ರೊದ ರಾಷ್ಟ್ರೀಯ ದೂರ ಸಂವೇದಿ ಸಂಸ್ಥೆ ಮತ್ತು ಭಾರತೀಯ ಭೂಗರ್ಭ ಸರ್ವೇಕ್ಷಣಾ ಸಂಸ್ಥೆಗಳು ಪಶ್ಚಿಮ ಘಟ್ಟದಲ್ಲಿ ಸಂಭವಿಸಿರುವ ಭೂ ಕುಸಿತಗಳ ಸಮಗ್ರ ಅಧ್ಯಯನ ನಡೆಸಿವೆ. ಅದರ ಪ್ರಕಾರ, ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳ 23 ತಾಲ್ಲೂಕುಗಳಲ್ಲಿ ಭವಿಷ್ಯದಲ್ಲೂ ಭೂಕುಸಿತದ ಸಾಧ್ಯತೆಗಳಿವೆ. ಇದು ರಾಜ್ಯದ ಶೇ 13 ರಷ್ಟು ಪ್ರದೇಶವಾಗಿದೆ.

ಭೂಕುಸಿತ ಸಾಧ್ಯತೆ ತಾಲ್ಲೂಕುಗಳು:

- ಮಡಿಕೇರಿ, ಸೋಮವಾರ ಪೇಟೆ, ವಿರಾಜಪೇಟೆ(ಕೊಡಗು ಜಿಲ್ಲೆ)
- ಕೊಪ್ಪ, ಮೂಡಿಗೆರೆ, ಶೃಂಗೇರಿ ಮತ್ತು ಚಿಕ್ಕಮಗಳೂರು(ಚಿಕ್ಕಮಗಳೂರು ಜಿಲ್ಲೆ)
- ಸಾಗರ(ಶಿವಮೊಗ್ಗ ಜಿಲ್ಲೆ)
- ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಸಿದ್ದಾಪುರ, ಶಿರಸಿ, ಯಲ್ಲಾಪುರ ಹಾಗೂ ಜೋಯ್ಡಾ (ಉತ್ತರಕನ್ನಡ ಜಿಲ್ಲೆ)
- ಕಾರ್ಕಳ (ಉಡುಪಿ ಜಿಲ್ಲೆ)
- ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಮಂಗಳೂರು(ದಕ್ಷಿಣ ಕನ್ನಡ ಜಿಲ್ಲೆ)

ಅಲ್ಲದೆ, ಉಡುಪಿ ಜಿಲ್ಲೆಯ ಕುಂದಾಪುರ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕುಗಳ ಹಲವು ಪ್ರದೇಶಗಳಲ್ಲಿ ಭೂಕುಸಿತವಾಗುತ್ತಿದೆ. ಈ ಎಲ್ಲ ತಾಲ್ಲೂಕು ಪ್ರದೇಶಗಳ ಕಡಿದಾದ ಗುಡ್ಡ– ಕಣಿವೆ ಪ್ರದೇಶಗಳನ್ನು ಭೂಕುಸಿತವಾಗಬಲ್ಲ ಸೂಕ್ಷ್ಮ ಪ್ರದೇಶವೆಂದು ಗುರುತಿಸಬೇಕು ಎಂದು ವರದಿ ಹೇಳಿದೆ.

ರಾಜಸ್ವ ಹಣ ದುರ್ಬಳಕೆ: 9 ಮಂದಿಗೆ ಜೈಲು

ಮಂಡ್ಯ: ರಾಜಸ್ವ ಹಣ ದುರುಪಯೋಗ ಆರೋಪ ಸಾಬೀತಾಗಿದ್ದರಿಂದ, ನಾಲ್ವರು ಉಪ ನೋಂದಣಾಧಿಕಾರಿಗಳಿಗೆ 4 ವರ್ಷ ಜೈಲು, ಮೂವರು ಪತ್ರ ಬರಹಗಾರರು ಮತ್ತು ಇಬ್ಬರು ಎಫ್‌ಡಿಎಗಳಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ ಒಟ್ಟು ₹1.25 ಕೋಟಿ ದಂಡ ವಿಧಿಸಿ 1ನೇ ಹೆಚ್ಚುವರಿ ಸಿವಿಲ್, ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ಸೋಮವಾರ (ಮಾರ್ಚ್ 29) ತೀರ್ಪು ನೀಡಿದ್ದಾರೆ.

2006ಕ್ಕೂ ಹಿಂದೆ ನಗರದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಉಪ ನೋಂದಣಾಧಿಕಾರಿಗಳಾಗಿದ್ದ ಎಸ್.ಎನ್. ಪ್ರಭಾ, ಚೆಲುವರಾಜು, ಪ್ರಭಾರ ಉಪ ನೋಂದಣಾಧಿಕಾರಿಗಳಾಗಿದ್ದ ಲೀಲಾವತಿ, ಸುನಂದಾ ಹಾಗೂ ಪತ್ರ ಬರಹಗಾರರಾಗಿದ್ದ ಬಿ.ಕೆ. ರಾಮರಾವ್, ನರಸಿಂಹಮೂರ್ತಿ, ಚಂದ್ರಶೇಖರ್, ಎಫ್‌ಡಿಎ ಆಗಿ ನಿವೃತ್ತಿ ಹೊಂದಿರುವ ಶ್ರೀನಿವಾಸಲು, ವಿಜಯ್ ಶಿಕ್ಷೆಗೆ ಒಳಗಾದವರು.

ಒಟ್ಟು 154 ಪ್ರಕರಣಗಳಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ, 2006ರಲ್ಲಿ ಉಪ ನೋಂದಣಾಧಿಕಾರಿಯಾಗಿದ್ದ ನರಸಿಂಹಯ್ಯ ಪಶ್ಚಿಮ ಠಾಣೆಗೆ ದೂರು ಸಲ್ಲಿಸಿದ್ದರು. ಇದರ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ರಮೇಶ್ ಎಸ್.ಗಾಣಿಗೇರ, ತೀರ್ಪು ನೀಡಿದ್ದಾರೆ.

ಎಸ್.ಎನ್.ಪ್ರಭಾ, ಸದ್ಯ ಬೆಂಗಳೂರು ಐಜಿಆರ್ (ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್) ಕಚೇರಿಯಲ್ಲಿದ್ದಾರೆ. ಚೆಲುವರಾಜು ಶೃಂಗೇರಿ ಉಪ ನೋಂದಣಾಧಿಕಾರಿಯಾಗಿದ್ದಾರೆ. ಲೀಲಾವತಿ ಮದ್ದೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಎಫ್‌ಡಿಎ ಆಗಿದ್ದಾರೆ. ಸುನಂದಾ ಅವರು ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಎಫ್‌ಡಿಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸರ್ಕಾರಿ ಅಭಿಯೋಜಕ ಎಂ.ಜಿ.ಸುರೇಶ್ ಅವರು ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಕೃಷ್ಣಾ ನದಿಯಲ್ಲಿ ಎಮ್ಮೆ ಹೊತ್ತೊಯ್ದ ಮೊಸಳೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಮಖಂಡಿ ತಾಲ್ಲೂಕಿನ ಶೂರ್ಪಾಲಿಯಲ್ಲಿ ಬುಧವಾರ ಕೃಷ್ಣಾ ನದಿಯಲ್ಲಿ ನೀರು ಕುಡಿಯಲು ಹೋದ ಎಮ್ಮೆಯನ್ನು ಮೊಸಳೆ ಹೊತ್ತೊಯ್ದಿದೆ. ಆ ವಿಡಿಯೊ ಈಗ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ.

ಮೊಸಳೆ ಎಮ್ಮೆಯನ್ನು ಹೊತ್ತೊಯ್ಯುತ್ತಿರುವ ದೃಶ್ಯವನ್ನು ಗ್ರಾಮದ ಕೆಲವು ಯುವಕರು ದೋಣಿಯಲ್ಲಿ ತೆರಳಿ ಮೊಬೈಲ್ ಫೋನ್ ಮೂಲಕ ಸೆರೆ ಹಿಡಿದಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪೂ)ರವರ ಕಛೇರಿ,
ಸಯ್ಯಾಜಿರಾವ್ ರಸ್ತೆ, ಮೈಸೂರು–570024, ಇಮೇಲ್:eeemccmys@gmail.com
ಸಂಖ್ಯೆ: ಮೈ.ನ.ಪಾ/ಕಾ.ಇಂ(ಪೂ&ಪ)ಟಿಎನ್–104/2020–21 ದಿನಾಂಕ: 01.04.2021
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ
2015–16 ರಿಂದ 2018–19ನೇ ಸಾಲಿನ 14ನೇ ಹಣಕಾಸು ಉಳಿಕೆ ಅನುದಾನ ಒಟ್ಟು 65 ಕಾಮಗಾರಿಗಳಿಗೆ (ಒಟು ಮೊತ್ತ ರೂ.673.00 ಲಕ್ಷಗಳು) ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ "E-Procurement", Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನೀತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : 05.04.2021ರ ನಂತರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ : 15.04.2021 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ : 16.04.2021 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು (ಪೂ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.
ವಾಸಾಸಂಇ/ಮೈಸೂರು/ಶಿರಡಿ ಸಾಯಿ/06/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್: bmrcl@dataone.in ವೆಬ್‌ಸೈಟ್: www.bmrc.co.in
ಟೆಂಡರ್ ಸಂ. 4 ಎಎಫ್‌ಸಿ–ಪಿಪಿಐ ದಿನಾಂಕ: 02.04.2021
ಟೆಂಡರ್ ಪ್ರಕಟಣೆ
ಬಿಎಂಆರ್‌ಸಿಎಲ್ ಇವರು, ‘‘**ಬಿಎಂಆರ್‌ಸಿಎಲ್ ಸಿಸ್ಟಮ್‌ನಲ್ಲಿ ಸ್ಮಾರ್ಟ್‌ಕಾರ್ಡ್‌ಗಳ ರೀಚಾರ್ಜ್ ಹಾಗೂ ಕ್ಯೂಆರ್ ಕೋಡ್ ಆಧಾರಿತ ಮೊಬೈಲ್ ಟಿಕೆಟಿಂಗ್‌ಗೆ ಬಿ2ಸಿ ಸೇವೆಗಳನ್ನು ಒದಗಿಸಲು**’’ ಭಾರತದಲ್ಲಿ ಯೋಗ್ಯರಾದ, ಸೂಕ್ತ ಅರ್ಹತೆಗಳಿಸಿರುವ, ಅನುಭವಸ್ಥ ಮತ್ತು ಹೆಸರಾಂತ ಸೇವಾದಾರರಿಂದ (ಏಕಹಂತ–ದ್ವಿಲಕೋಟೆ ಪದ್ಧತಿ) ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳ ಬೆಲೆ(ಹಿಂದಿರುಗಿಸಲಾಗದ): **ರೂ.11,800/-** [10,000+1,800 (ಜಿಎಸ್‌ಟಿ @18%). ದಸ್ತಾವೇಜುಗಳ ಆನ್‌ಲೈನ್‌ನಲ್ಲಿ ಮಾರಾಟ: **02.04.2021 ರಿಂದ 01.05.2021 ಮಧ್ಯರಾತ್ರಿಯವರೆಗೆ.** ಟೆಂಡರ್ ಸಲ್ಲಿಸಲು ದಿನಾಂಕ: **20.05.2021, 11.00 ಗಂಟೆಯಿಂದ 15.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **20.05.2021, 15.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ನಮ್ಮ ವೆಬ್‌ಸೈಟ್ **www.bmrc.co.in** ಸಂದರ್ಶಿಸುವುದು.
ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್

ಕರ್ನಾಟಕ ಸರ್ಕಾರ
(ಸಾರ್ವಜನಿಕ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ. 4, ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085. ದೂರವಾಣಿ: 080-26422238/45
ಇ-ಮೇಲ್: mdktbs.tender@gmail.com
ವೆಬ್‌ಸೈಟ್: http://www.ktbs.kar.nic.in
No: A7/KTBS/Nali-kali-33/2020-21 ದಿನಾಂಕ: 01.04.2021
ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2021-22ನೇ ಸಾಲಿಗೆ, ಸರ್ಕಾರಿ ಶಾಲೆಗಳಲ್ಲಿನ 1 ರಿಂದ 3 ನೇ ತರಗತಿಗಳಿಗೆ ಅಗತ್ಯವಿರುವ ನಲಿಕಲಿ ಕಲಿಕಾ ಸಾಮಗ್ರಿಗಳು, ಆಂಗ್ಲ ಅಭ್ಯಾಸ ಪುಸ್ತಕಗಳು ಹಾಗೂ ಶಿಕ್ಷಕರ ಕೈಪಿಡಿಗಳನ್ನು ಮುದ್ರಿಸಿ ರಾಜ್ಯದ 204 ಬ್ಲಾಕ್‌ಗಳಿಗೆ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 15.04.2021 ರಂದು ಸಂಜೆ 5.30 ರವರೆಗೂ** ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://www.eproc.karnataka.gov.in
ಸಹಾಯವಾಣಿ: 080-46010000 080-22631200
ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಕರ್ನಾಟಕ ಸರ್ಕಾರ
(ಸಾರ್ವಜನಿಕ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ. 4, ಡಿ.ಎಸ್.ಇ.ಆರ್.ಟಿ. ಕಟ್ಟಡ, ಹೊಸಕೆರೆಹಳ್ಳಿ,100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು - 560 085.
ದೂರವಾಣಿ : 080-26422238/45
ಇ-ಮೇಲ್ : mdktbs.tender@gmail.com
ವೆಬ್‌ಸೈಟ್ : http://www.ktbs.kar.nic.in
ಸಂಖ್ಯೆ: A7/KTBS/2021-22.Pa.Pu.Mu Tender/01/16/2020-21 ದಿನಾಂಕ:01.04.2021
ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2021–22ನೇ ಸಾಲಿಗೆ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಅಂದಾಜು 636 ಲಕ್ಷ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ:30.04.2021 ರಂದು ಸಂಜೆ 5.30** ರವರೆಗೂ ಸಲ್ಲಿಸಬಹುದಾಗಿರುತ್ತದೆ.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://www.eproc.karnataka.gov.in
ಸಹಾಯವಾಣಿ: 080–46010000 080–22631200
ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:41/2020–21/1899
ದಿನಾಂಕ : 01–04–2021
ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
NRDWP ಯೋಜನೆಯಡಿ ರಾಣೇಬೆನ್ನೂರ ತಾಲೂಕಿನ ಈ ಕೆಳಕಂಡ ಗ್ರಾಮುಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : **12–04–2021** ರ 17:30 ಗಂಟೆವರೆಗೆ
(2) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **15–04–2021** ರ 10:30 ಗಂಟೆ ನಂತರ
Supply installation and commissioning of pump and motor to supply of pure/clear water from WTP to ZBT-3 in Kudarihal and other 22 villages in Ranebennur Taluka of Haveri District. (RWSSD/2020-21/WS/WORK_INDENT33650)
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/01/2021–22

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್.ಎಸ್. ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀ ರಾಮನಗರ ರಸ್ತೆ, ಎನ್.ಸಿ.ಸಿ ಕ್ಯಾಂಪ್ ಪಕ್ಕ. ದಾವಣಗೆರೆ.–577005
ದೂ: 08192 237833 e mail : dhodavangere-hfws@karnataka.gov.in
ಸಂ:ಜಿಆದಾ:ಟೆಂಡರ್/131/2021–22 ದಿನಾಂಕ:29–03–2021
ಟೆಂಡರ್ ಪ್ರಕಟಣೆ
ವಿಷಯ: 2021–22ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಚೇರಿ ಅಧೀನದಲ್ಲಿ ಬರುವ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್ 1 ಹುದ್ದೆ ಮತ್ತು ಗ್ರೂಪ್ ಡಿ–80 ಒಟ್ಟಾರೆ 81 ಸಿಬ್ಬಂದಿಗಳನ್ನು ಒದಗಿಸುವ ಸಂಬಂಧ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ.
ಉಲ್ಲೇಖ: ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು, ಜಿಪಂ ದಾವಣಗೆರೆ ಇವರ ಟಿಪ್ಪಣಿ ಸಂಖ್ಯೆ(5)ರಲ್ಲಿ ಅನುಮೋದಿಸಿದಂತೆ
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2021–22ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಚೇರಿಯ ಅಧೀನಕ್ಕೊಳಪಡುವ ಜಿ.ಪಂ.ವಲಯದ ಸಾರ್ವಜನಿಕ ಆಸ್ಪತ್ರೆ ಹರಿಹರ ನ್ಯಾಮತಿ, ಮಲೆಬೆನ್ನೂರು, ಸಂತೆಬೆನ್ನೂರು ಮತ್ತು ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಗ್ರೂಪ್ ಡಿ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ನಿಗದಿ ಪಡಿಸಿದ ಮೊತ್ತ ರೂ. 1,40,00,000/–(ರೂ. ಒಂದು ಕೋಟಿ ನಲವತ್ತು ಲಕ್ಷ) ಮೊಹರಾದ ಟೆಂಡರ್‌ನ್ನು ರೂ:3.50.000/–(ರೂ. ಮೂರು ಲಕ್ಷದ ಐವತ್ತು ಸಾವಿರ) ಇ.ಎಂ.ಡಿ.ಂಯೊಂದಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ https://erpoc.karnataka.gov.in ನಲ್ಲಿ ಪೂರ್ಣ ವಿಳಾಸದೊಂದಿಗೆ ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ಅನ್ನು ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ:29–03–2021 ರಿಂದ ದಿನಾಂಕ: 16–04–2021 ಸಂಜೆ 05.00 ಗಂಟೆಯವರೆಗೆ ಟೆಂಡರ್‌ನ್ನು ಸಲ್ಲಿಸಬಹುದು. ಹಾಗೂ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಬಹುದು.
ವಾಸಾಇ/ಡಿವಿಜಿ/01/ ಎಂಸಿಎ/2020–21
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ–580025
ನ್ಯಾಕ್ 'ಎ' ಶ್ರೇಣಿ ಮಾನ್ಯತೆ
ದೂರವಾಣಿ ಸಂಖ್ಯೆ: 0836–2222392/0836–2223392
ಜಾಲತಾಣ: www.kslu.co.in ಇ–ಮೇಲ್: kslu.registrar@gmail.com
ಸಂಖ್ಯೆ:ಕರಾಕಾವಿ/ಪರೀಕ್ಷಾ ವಿಭಾಗ/2020–21/960 ದಿನಾಂಕ: 01–04–2021
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ 2021–22ನೇ ಸಾಲಿಗೆ ಪರೀಕ್ಷಾ ಫಲಿತಾಂಶ ಸಂಬಂಧಿಸಿದ ಸೇವೆಯನ್ನು ಪಡೆಯಲು ಟೆಂಡರ್ ಮಾಡಲು, ಮಾನ್ಯ ಕುಲಪತಿಗಳು ಪರವಾಗಿ ಕುಲಸಚಿವರು (ಮೌಲ್ಯಮಾಪನ) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.
ಕೆಲಸದ ಹೆಸರು: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪರೀಕ್ಷಾ ಫಲಿತಾಂಶಕ್ಕೆ ಸಂಬಂಧಿಸಿದ ಸೇವೆಯನ್ನು ಪೂರೈಸುವುದು.
ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ **ರೂ. 25.00 ಲಕ್ಷ**
ಇ.ಎಮ್.ಡಿ. ಮೊತ್ತ **ರೂ. 00.00** ಇ.ಎಮ್.ಡಿ
ಡಿಕ್ಲರೇಷನ್ ಲಗತ್ತಿಸುವುದು
ಟೆಂಡರ್ ಡಾಕ್ಯುಮೆಂಟ್‌ದಂತೆ ಮೌಲ್ಯಮಾಪನ ಮಾಡಲಾಗುವುದು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಯಾವುದೇ ಕಾರಣ ನೀಡದೆ ಟೆಂಡರನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 08–04–2021 ಸಂಜೆ 5.00 ಘಂಟೆಯವರೆಗೆ**
ಟೆಂಡರ್ ತೆರೆಯುವ **ದಿನಾಂಕ: 09–04–2021 ಸಂಜೆ 5.10 ಘಂಟೆಯವರೆಗೆ**
ಸಹಿ/– ಪ್ರೊ.(ಡಾ.) ಜಿ. ಬಿ. ಪಾಟೀಲ
ಕುಲಸಚಿವರು
(ಮೌಲ್ಯಮಾಪನ)
ವಾ.ಸಾ.ಇ./ಧಾ/942/2020–21/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳವರ ಕಾರ್ಯಾಲಯ ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
E Mail : mohshikaripur@gmail.com
Phone No & Fax No : 08187-222412.
ಸಂಖ್ಯೆ: ಸಾಆಶಿ/ಹೊ.ಗು.ಗ್ರೂ.ಡಿ.ಟೆಂ/03/2020–21 ದಿ: 31.03.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ವಿಷಯ:– 2021–22 ನೇ ಸಾಲಿಗೆ ಹೊರಗುತ್ತಿಗೆ ಮೂಲಕ ಗ್ರೂಪ್ ಡಿ ಸೇವೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2021–22 ನೇ ಸಾಲಿಗೆ (ಟೆಂಡರ್ ಅನುಮೋದನೆಯಾದ ದಿನಾಂಕದಿಂದ ದಿ:31–03–2022 ರವರೆಗೆ ಅಥವಾ ಮುಂದಿನ ವರ್ಷದ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ) ಹೊರಗುತ್ತಿಗೆ ಆಧಾರದ ಮೇಲೆ 32 ಜನರ ಗ್ರೂಪ್ ಡಿ ಸೇವೆಗಳನ್ನು ಒದಗಿಸುವ ಸಲುವಾಗಿ ಅರ್ಹ ಮತ್ತು ಆಸಕ್ತ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಷರತ್ತು ಹಾಗೂ ನಿಬಂಧನೆಗಳನ್ನು ಹೊಂದಿರುವ ಖಾಲಿ ಟೆಂಡರ್ ಫಾರಂ ಮತ್ತು ಸಲ್ಲಿಸಬೇಕಾದ ತಾಂತ್ರಿಕ ದಾಖಲೆಗಳ ವಿವರಗಳನ್ನು www.eproc.kartnataka.gov.in ವೆಬ್‌ಸೈಟ್ ವಿಳಾಸದಲ್ಲಿ ಡೌನ್‌ಲೋಡ್ ಮಾಡಿ ಪಡೆದುಕೊಳ್ಳಬಹುದು. ನಿಗದಿತ ಸಮಯದೊಳಗೆ ಅಪ್‌ಲೋಡ್ ಮಾಡಿದ ಟೆಂಡರ್ ಬಿಡ್‌ಗಳನ್ನು As on E-portal ಮೂಲಕ ತೆರೆಯಲಾಗುವುದು. ಸದರಿ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಕಛೇರಿಯಲ್ಲಿ ಪಡೆದುಕೊಳ್ಳತಕ್ಕದ್ದು.

ಕ್ರ ಸಂ.	ಹುದ್ದೆಯ ವಿವರಗಳು.	ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ
01	ಅಡುಗೆ ಸಹಾಯಕರು (ಮಹಿಳೆಯರು)	02
02	ಕ್ಷ–ಕಿರಣ ಸಹಾಯಕರು	01
03	ಪ್ರಯೋಗ ಶಾಲಾ ಸಹಾಯಕರು	01
04	ಎಲೆಕ್ಟ್ರಿಷಿಯನ್ / ಪ್ಲಂಬರ್	01
05	ಜವಾನರು	01
06	ವಾರ್ಡ್ ಬಾಯ್	12
07	ವಾರ್ಡ್ ಆಯಾ. (ಮಹಿಳೆಯರು)	08
08	ಭದ್ರತಾ ಕಾವಲುಗಾರರು. (ವಾಚ್ ಮ್ಯಾನ್)	06
	ಒಟ್ಟು ಸಿಬ್ಬಂದಿ	32

ಸಹಿ/– ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
ವಾ.ಸಾ.ಸಂ.ಇ/ಶಿ/ನಂ–08/04/ಎಂಸಿಎ/21–22

ಕರ್ನಾಟಕ ಸರ್ಕಾರ
ಜಿಲ್ಲಾ ಸರ್ಜನರ ಕಚೇರಿ, ಜಿಲ್ಲಾ ಆಸ್ಪತ್ರೆ, ಉಡುಪಿ–576101
ಕ್ರ.ಸಂ: ಸವಿ:52,55&60/2020–21 ದಿನಾಂಕ: 31.03.2021
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ವಿಷಯ: ಜಿಲ್ಲಾ ಆಸ್ಪತ್ರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವಿವಿಧ ಟೆಂಡರುಗಳ ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ.
ಜಿಲ್ಲಾ ಆಸ್ಪತ್ರೆಗೆ ಅವಶ್ಯಕತೆ ಇರುವ ಈ ಕೆಳಗಿನ ಟೆಂಡರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಿದೆ.

ಕ್ರ. ಸಂ.	ಟೆಂಡರ್ ಕ್ರಮಾಂಕ ಹಾಗೂ ದಿನಾಂಕ	ಕಾಮಗಾರಿಯ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ.ಗಳಲ್ಲಿ	ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆ ದಿನಾಂಕ ಮತ್ತು ಸಮಯ	ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1	ಸವಿ/52/20–21 31.03.2021	ನಾನ್ ಕ್ಲಿನಿಕಲ್ ಹೊರಗುತ್ತಿಗೆ ಮೂಲಕ ಗ್ರೂಪ್–ಡಿ ಮತ್ತು ಬಾಹ್ಯ ಮೂಲ ಸೇವೆ	90–ಲಕ್ಷ ಮಿತಿಯೊಳಗೆ	2,50,000/–	09.04.2021 4.30 PM	09.04.2021 4.30 PM	12.04.2021 4.30 PM
2	ಸವಿ/55/20–21 31.03.2021	ರಕ್ತನಿಧಿ ರಾಸಾಯನಿಕ ಮತ್ತು ಪರಿಕರ	25–ಲಕ್ಷ ಮಿತಿಯೊಳಗೆ	50,000/–	09.04.2021 4.30 PM	09.04.2021 4.30 PM	12.04.2021 4.30 PM
3	ಸವಿ/60/20–21 31.03.2021	ಪಥ್ಯಾಹಾರ	25–ಲಕ್ಷ ಮಿತಿಯೊಳಗೆ	50,000/–	09.04.2021 4.30 PM	09.04.2021 4.30 PM	12.04.2021 4.30 PM

ಟೆಂಡರಿನ ಶರ್ತ ಮತ್ತಿತರ ವಿವರಗಳನ್ನು ದಿನಾಂಕ: 31.03.2021 ರಿಂದ ವೆಬ್‌ಸೈಟ್ www.eproc.karnataka.gov.in ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಪಡೆದುಕೊಳ್ಳಬಹುದು.
ಸಹಿ/– ಜಿಲ್ಲಾ ಸರ್ಜನ್ ಜಿಲ್ಲಾ ಆಸ್ಪತ್ರೆ, ಉಡುಪಿ ಜಿಲ್ಲೆ, ಉಡುಪಿ
ವಾಸಾಇ/ಸನಿಉ/ಎಂಸಿಎ/02/21–22 ದಿ: 01.4.2021

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇಃಬಾವಿಃ/ಪಿಬಿ/ಕೆಡಬ್ಲು/2020–21/05580 ದಿನಾಂಕಃ 30–03–2021
ಟೆಂಡರ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,2,3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ: **ಸಾಮಾನ್ಯ: 136850, 136159, 136033, 136111, 133204, 130123, 133821, 133804, 134070, 122611ಕಾಲ್–2, 133801ಕಾಲ್–2, 137028, 137029, 137031, 137032, 13706, 137034, 137035, 137037, 136762, 136802**
ಎಸ್.ಸಿ : 137036, 137033.
ಎಸ್.ಟಿ : 137030
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ 700.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ 5.75 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ ಅಹ್ವಾನಿಸಲಾಗಿದೆ.

ಅ)	ಫ್ರೀಬಿಡ್ ಮಿಟಿಂಗ್ ದಿನಾಂಕ: 12–04–2021 ರಂದು ಮಧ್ಯಾಹ್ನ 11–30 ಘಂಟೆಯವರೆಗೆ
ಬ)	ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 15–04–2021 ರಂದು ಮಧ್ಯಾಹ್ನ 5–30 ಘಂಟೆಯವರೆಗೆ
ಕ)	ಟೆಂಡರ ಸ್ವೀಕರಿಸುವ ದಿನಾಂಕ : 16–04–2021 ರಂದು ಮಧ್ಯಾಹ್ನ 4–00 ಘಂಟೆಯವರೆಗೆ
ಡ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17–04–2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ
ಬ)	ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–04–2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟೆ/01/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ನಂ,ಮುನಿಸಿ(3)ಕಂ,ಶಾ:ಸಿಆರ್01:2020–21 ದಿನಾಂಕ: 01.04.2021
–: ಇ–ಪ್ರಕ್ಯೂರ್‌ಮೆಂಟ್ ಮರು ಹರಾಜು ಇಸ್ತಿಹಾರ್ ಪ್ರಕಟಣೆ :–
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಚನ್ನರಾಯಪಟ್ಟಣ ಪುರಸಭೆಯ ಕೆಳಕಂಡ ಬಾಬುಗಳನ್ನು 2021–22ನೇ ಸಾಲಿಗೆ ದಿನಾಂಕ:01–04–2021 ರಿಂದ 31–03–2022ರವರೆಗಿನ ಆಯಾ ಬಾಬ್ತುಗಳ ಮುಂದೆ ನಮೂದಿಸಿರುವ ದಿನಾಂಕದಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ ಹರಾಜು ಪ್ರಕ್ರಿಯೆ ವಿಲೇ ಮಾಡಲಾಗುವುದು. (ಪುರಸಭೆಯ ಸಾಮಾನ್ಯ ಸಭೆಯ ದಿನಾಂಕ:09–02–2021ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.18ರ ತೀರ್ಮಾನದಂತೆ ಹಾಗೂ ದಿನಾಂಕ:15.03.2021 ರಂದು ನಡೆದ ತುರ್ತು ಸಭೆಯ ತೀರ್ಮಾನದಂತೆ) ಇಚ್ಛೆ ಉಳ್ಳವರು ದಿನಾಂಕ:15.04.2021 ರಂದು ನಡೆಯುವ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿ ಇ–ಪ್ರಕ್ಯೂರ್‌ಮೆಂಟ್ ಹರಾಜು ಷರತ್ತುಗೊಳಪಟ್ಟು ಬಾಬ್ತುಗಳನ್ನು ರೂಢಿಸಿಕೊಳ್ಳಬಹುದಾಗಿರುತ್ತದೆ. ಇ–ಪ್ರಕ್ಯೂರ್‌ಮೆಂಟ್ ಮರು ಹರಾಜಿನ ಷರತ್ತುಗಳನ್ನು ಇನ್ನಿತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ. **ಕ್ರಸಂ:1)ಬಾಬುಗಳ ವಿವರ:** ವಾರದ ಸಂತೆ ಸುಂಕ **ಹರಾಜಿನ ದಿನಾಂಕ:** 15.04.2021 **ವೇಳೆ:** ಬೆಳಿಗ್ಗೆ 10.30 ಗಂಟೆಗೆ ಮಧ್ಯಾಹ್ನ 14.30 ರವರೆಗೆ **ಠೇವಣಿ ಮಾಡಬೇಕಾದ ಮೊಬಲಗು:** 1,99,650/– 2)ಡೈಲಿ ಸಂತೆ ಸುಂಕ **ಹರಾಜಿನ ದಿನಾಂಕ:** 15.04.2021 **ವೇಳೆ:** ಬೆಳಿಗ್ಗೆ 10.30 ಗಂಟೆಗೆ ಮಧ್ಯಾಹ್ನ 14.30 ರವರೆಗೆ **ಠೇವಣಿ ಮಾಡಬೇಕಾದ ಮೊಬಲಗು:** 1,99,650/– **ಸೂಚನೆ:–** 1.ಬಾರಾಮಾರ್ಗ ಹೋಗತಕ್ಕವುಗಳಿಗೆ ಸುಂಕ ವಸೂಲಿ ಮಾಡತಕ್ಕದ್ದು, ಬಾರಾಮಾರ್ಗ ಹೋಗತಕ್ಕ ಮತ್ತು ಬರತಕ್ಕವುಗಳ ಮುನಿಸಿಪಲ್ ಬೌಂಡರಿಯಲ್ಲಿ ಬಿ.ಎಂ ರಸ್ತೆ, ಮೈಸೂರು ರಸ್ತೆ, ಬಾಗೂರು ರಸ್ತೆ ಬಾಜುವಿನಲ್ಲಿ 30 ನಿಮಿಷಗಳ ಕಾಲ ನಿಲ್ಲುವ ಅವಕಾಶವಿರುತ್ತದೆ. ಇವುಗಳ ಮೇಲೆ ಸುಂಕ ವಸೂಲಿ ಮಾಡತಕ್ಕದ್ದಲ್ಲ. 2.ಗೊಬ್ಬರ ಗೋಡು ಏರತಕ್ಕ ಗಾಡಿಗಳ ಮೇಲೆ ಸುಂಕ ವಸೂಲಿ ಮಾಡತಕ್ಕದ್ದಲ್ಲ. 3.ಅಂತಿಮ ಬಿಡ್ ಮೊಬಲಗಿಗೆ ಜಿಎಸ್‌ಟಿ ಅನ್ವಯವಾಗುತ್ತದೆ.
ಸಹಿ/– (ಶ್ರೀ ಹೆಚ್.ಎನ್ ನವೀನ್) ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ
ಸಹಿ/– (ಶ್ರೀ ಯೋಗೇಶ್) ಉಪಾಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ
ಸಹಿ/– (ಶ್ರೀಮತಿ ಕೆ.ಎನ್ ಬನಶಂಕರಿ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ
ಸಹಿ/– (ಶ್ರೀ ಹೆಚ್.ಟಿ.ಕೃಷ್ಣಮೂರ್ತಿ, ಕೆ.ಎಂ.ಎ.ಎಸ್) ಮುಖ್ಯಾಧಿಕಾರಿ, ಪುರಸಭೆ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/04/2020–21

‘ಕುರುಬರು ಯಾರ ಹಕ್ಕನ್ನೂ ಕಸಿಯುವುದಿಲ್ಲ’

ವಾಲ್ಮೀಕಿ ಗುರುಪೀಠದ ವಾದಕ್ಕೆ ಹಾಲುಮತದವರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುರುಬರು ಮೂಲತಃ ಬುಡಕಟ್ಟು ಜನಾಂಗದವರು. ಸಂವಿಧಾನ ರಚನೆಯಾದಾಗಿನಿಂದಲೂ ಪರಿಶಿಷ್ಟ ಪಂಗಡದ (ಎಸ್‌.ಟಿ) ಮೀಸಲಾತಿ ಪಟ್ಟಿಯಲ್ಲಿದ್ದಾರೆ. ಹಾಲುಮತ ಸಮಾಜದ ಇತಿಹಾಸ ಪುರುಷರ ಹೆಸರನ್ನು ಬಳಸಿಕೊಂಡು ಮೀಸಲಾತಿ ವಿಸ್ತಾರ ಮಾಡಿಕೊಳ್ಳುವ ಅನಿವಾರ್ಯ ಕುರುಬ ಸಮಾಜಕ್ಕಿಲ್ಲ’ ಎಂದು ಹಾಲುಮತ ಮಹಾಸಭಾ ಸ್ಪಷ್ಟಪಡಿಸಿದೆ.

‘ವಾಲ್ಮೀಕಿ ಸಮುದಾಯದ ಹಕ್ಕ–ಬುಕ್ಕರ ಹೆಸರನ್ನು ಬಳಸಿಕೊಂಡು ಕುರುಬ ಸಮಾಜದವರು ಮೀಸಲಾತಿ ಪಡೆಯಲು ಯತ್ನಿಸುತ್ತಿದ್ದಾರೆ’ ಎಂದು ಹರಿಹರದ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಬಳ್ಳಾರಿ ಜಿಲ್ಲಾ ಧರ್ಮದರ್ಶಿ ಜಂಬಯ್ಯ ನಾಯಕ ಅವರು ಬುಧವಾರ ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಹಾಲುಮತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ರುದ್ರಣ್ಣ ಗುಳಗುಳಿ, ‘ಕುರುಬರು ಯಾರನ್ನೂ ವಿರೋಧಿಸುವುದಿಲ್ಲ. ಯಾರ ಹಕ್ಕನ್ನೂ ಕಸಿಯುವುದಿಲ್ಲ. 1991ರಲ್ಲಿ ಬೇರೆ ರಾಜ್ಯದಲ್ಲಿರುವ ಜಾತಿಯ ಸಮನಾರ್ಥಕ ಪದದನ್ವಯ ಎಸ್‌.ಟಿ ಮೀಸಲಾತಿ ಪಟ್ಟಿಯೊಳಗೆ ಸೇರಿದ್ದಾರೆ. ಆದರೆ, 1950ರ ಗೆಜೆಟ್‌ನಲ್ಲಿ ಪ್ರಕಟವಾಗಿರುವ ಆರು ಜಾತಿಗಳಲ್ಲಿ ಜೇನು ಕುರುಬ ಮತ್ತು ಕಾಡು ಕುರುಬ ಕೂಡ ಇದೆ. 1977ರಲ್ಲಿ ಕುರುಬ ಜಾತಿಯ ಗೊಂಡ, ರಾಜಗೊಂಡ, ಕುರುಮನ್ಸ್‌, ಕಾಟ್ಟುನಾಯಕನ್‌, ಕುರುಬ ಸೇರಿ ಒಟ್ಟು ಆರು ಜಾತಿಗಳು ಎಸ್‌.ಟಿ ಪಟ್ಟಿಯಲ್ಲಿವೆ. ಕುರುಬರು ಹೊಸದಾಗಿ ಎಸ್‌.ಟಿ ಮೀಸಲಾತಿಗೆ ಬೇಡಿಕೆ ಸಲ್ಲಿಸುತ್ತಿಲ್ಲ’ ಎಂದಿದ್ದಾರೆ.

‘ಎಸ್‌.ಟಿ ಮೀಸಲಾತಿಯಲ್ಲಿ ಆಗಿರುವ ಅನ್ಯಾಯ ಸರಿಪಡಿಸಬೇಕೆಂದು ಈಗಾಗಲೇ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿದೆ. ವಿಜಯನಗರದ ಸಂಸ್ಥಾಪಕರಾದ ಹಕ್ಕ–ಬುಕ್ಕರು ಹಾಲುಮತ ಸಮಾಜದವರು ಎಂಬ ಸತ್ಯವನ್ನು ಶಾಸನಗಳು ಹೇಳುತ್ತವೆ. ಡಾ. ಲಿಂಗದಹಳ್ಳಿ ಹಾಲಪ್ಪನವರು ಬರೆದ ‘ವಿಜಯನಗರ ಸಾಮ್ರಾಜ್ಯ’ ಸೇರಿದಂತೆ ಹಲವು ಗ್ರಂಥದಲ್ಲಿ ದಾಖಲೆಗಳ ಸಮೇತ ಉಲ್ಲೇಖಿಸಲಾಗಿದೆ. ಪ್ರತಿವರ್ಷ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಮಾರ್ಗದರ್ಶನದಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾ ದಿನವನ್ನು ರಾಜ್ಯದ ಎಲ್ಲೆಡೆ ಆಚರಣೆ ಮಾಡಲಾಗುತ್ತಿದೆ. ಈ ವರ್ಷವೂ ಏ.18ರಂದು ರಾಜ್ಯದಾದ್ಯಂತ ಆಚರಣೆ ಮಾಡಲಾಗುತ್ತದೆ’ ಎಂದು ಅವರು ವಿವರಿಸಿದ್ದಾರೆ.

ಸರಳವಾಗಿ ನಡೆದ 114ನೇ ಜಯಂತ್ಯುತ್ಸವ ಆಚರಣೆ

ಶಿವಕುಮಾರ ಸ್ವಾಮೀಜಿಗೆ ಭಕ್ತಿ ನಮನ

ಪ್ರಜಾವಾಣಿ ವಾರ್ತೆ

ತುಮಕೂರು ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಸ್ವಾಮೀಜಿಗಳು ಪೂಜೆ ಸಲ್ಲಿಸಿದರು

ತುಮಕೂರು: ಸಿದ್ಧಗಂಗಾ ಮಠದಲ್ಲಿ ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ 114ನೇ ವರ್ಷದ ಜಯಂತಿಯನ್ನು ಸರಳವಾಗಿ ಗುರುವಾರ ಆಚರಿಸಲಾಯಿತು.

ಮಠಾಧೀಶರಾದ ಸಿದ್ಧಲಿಂಗ ಸ್ವಾಮೀಜಿ ಬೆಳಗಿನ ಜಾವವೇ ಶಿವಪೂಜೆ ನೆರವೇರಿಸಿ, ನಂತರ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಪೂಜೆ ಸಲ್ಲಿಸಿದರು. ತಮ್ಮ ಗುರುವನ್ನು ನೆನೆದು ಕಣ್ಣೀರಾದರು. ಕೆಲ ಸಮಯ ಧ್ಯಾನಸ್ಥ ಸ್ಥಿತಿಯಲ್ಲಿ ನಮಿಸಿದರು. ಸ್ವಾಮೀಜಿ ಪೂಜೆ ಪೂರ್ಣಗೊಳಿಸಿದ ನಂತರ ಇತರ ಸ್ವಾಮೀಜಿಗಳು, ಭಕ್ತರು ಪೂಜೆ ಮುಂದುವರಿಸಿದರು. ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು.

ಗದ್ದುಗೆ ಪೂಜೆ ನಂತರ ರುದ್ರಾಕ್ಷಿ ಮಂಟಪದಲ್ಲಿ ಶಿವಕುಮಾರ ಸ್ವಾಮೀಜಿ ಕಂಚಿನ ಪುತ್ಥಳಿಯನ್ನು ಪ್ರತಿಷ್ಠಾಪಿಸಿ, ಮಠದ ಆವರಣದಲ್ಲಿ ಮೆರವಣಿಗೆ ಮಾಡಲಾಯಿತು. ಮಠದ ವಿದ್ಯಾರ್ಥಿಗಳು, ವಿವಿಧ ಮಠಗಳ ಸ್ವಾಮೀಜಿಗಳು, ಭಕ್ತರು ಮೆರವಣಿಗೆಯಲ್ಲಿ ಭಾಗವಹಿಸಿದರು. ಕಲಾ ತಂಡಗಳು ಮೆರುಗು ತಂದವು.

ಬೆಳಿಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕಂಡುಬರಲಿಲ್ಲ. ಮಧ್ಯಾಹ್ನದ ವೇಳೆಗೆ ಭಕ್ತರ ಸಂಖ್ಯೆ ಸ್ವಲ್ಪ ಮಟ್ಟಿಗೆ ಹೆಚ್ಚಾಗತೊಡಗಿತು. ಸಂಜೆ ವೇಳೆಗೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಯಿತು. ಭಕ್ತರು, ಅತಿಥಿಗಳಿಗಾಗಿ ಮಠದಲ್ಲಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ನಗರದ ವಿವಿಧೆಡೆ, ಪ್ರಮುಖ ವೃತ್ತಗಳು ಹಾಗೂ ಇತರ ಪ್ರಮುಖ ಸ್ಥಳಗಳಲ್ಲಿ ಸ್ವಾಮೀಜಿ ಭಾವಚಿತ್ರವಿಟ್ಟು ಪೂಜಿಸಿದರು. ಕಾರ್ಯಕ್ರಮಗಳು ನಡೆದ ಸ್ಥಳಗಳಲ್ಲಿ ಪ್ರಸಾದ ವಿತರಣೆ ಮಾಡಲಾಯಿತು. ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಸಮಿತಿ ವತಿಯಿಂದ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸ್ವಾಮೀಜಿಗೆ ನುಡಿ ನಮನ ಸಲ್ಲಿಸಲಾಯಿತು.

ಅನ್ನ, ಅಕ್ಷರ ಸಂತನ ಸ್ಮರಣೆ

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಚನ್ನಬಸವ ಸ್ವಾಮೀಜಿಯವರು ಶಿವಕುಮಾರ ಸ್ವಾಮೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ವಿ.ಸೋಮಣ್ಣ, ಬಿ.ಎಲ್‌.ಶಂಕರ್‌, ವಿಧಾನಪರಿಷತ್‌ ಸದಸ್ಯ ಅ.ದೇವೇಗೌಡ, ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ನಟ ಶ್ರೀನಿವಾಸಮೂರ್ತಿ ಹಾಗೂ ಡಾ.ನವೀನ್‌ ಸೋಮಣ್ಣ ಇದ್ದರು

ಬೆಂಗಳೂರು: ‘ಶಿವಕುಮಾರ ಸ್ವಾಮೀಜಿ ಲಕ್ಷಾಂತರ ಮಕ್ಕಳಿಗೆ ಅನ್ನ, ಅಕ್ಷರ ಹಾಗೂ ಆಶ್ರಯ ನೀಡಿದವರು. ತ್ರಿವಿಧ ದಾಸೋಹದ ಮೂಲಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾದ ವಿಶ್ವದ ಶ್ರೇಷ್ಠ ಸಂತ’ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ಶಿವಕುಮಾರ ಸ್ವಾಮೀಜಿ ಅವರ 114ನೇ ಜನ್ಮದಿನದ ಅಂಗವಾಗಿ ವಿ.ಸೋಮಣ್ಣ ಪ್ರತಿಷ್ಠಾನವು ಮೂಡಲಪಾಳ್ಯದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಸ್ವಾಮೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

‘ಪ್ರತಿ ವರ್ಷವೂ ಪ್ರತಿಷ್ಠಾನದ ವತಿಯಿಂದ ಬಾಲಗಂಗಾಧರನಾಥ ಸ್ವಾಮಿ, ಶಿವಕುಮಾರ ಸ್ವಾಮೀಜಿ ಮತ್ತು ಮಾಜಿ ಮುಖ್ಯಮಂತ್ರಿ ದಿ.ಜೆ.ಹೆಚ್‌. ಪಟೇಲ್‌ ಜನ್ಮ ದಿನವನ್ನು ಆಚರಿಸಲಾಗುತ್ತಿದೆ. ಶಿವಕುಮಾರ ಸ್ವಾಮೀಜಿ ಮತ್ತು ಬಾಲಗಂಗಾಧರನಾಥ ಸ್ವಾಮೀಜಿ ನನಗೆ ಎರಡು ಕಣ್ಣುಗಳಿದ್ದಂತೆ. ಶಿವಕುಮಾರ ಸ್ವಾಮೀಜಿಯವರು ಹೇಳಿಕೊಟ್ಟ ದಾರಿಯಲ್ಲಿ ನಡೆದಿದ್ದೇನೆ’ ಎಂದರು.

ಕನಕಪುರದ ಶ್ರೀದೇಗುಲ ಮಠದ ಚನ್ನಬಸವ ಸ್ವಾಮಿ, ‘ಶಿವಕುಮಾರ ಸ್ವಾಮೀಜಿಯವರ ಜನ್ಮದಿನವನ್ನು ಸೇವಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಅವರು ಬಡವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದರು. ನಿಸ್ವಾರ್ಥ ಸೇವೆಯಿಂದ ಜನರ ಮನಸ್ಸು ಗೆದ್ದಿದ್ದರು’ ಎಂದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಬಿ.ಎಲ್‌.ಶಂಕರ್‌, ‘ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಹೇಗಿರಬೇಕು ಎಂಬುದನ್ನು ಇಡೀ ದೇಶಕ್ಕೆ ತೋರಿಸಿಕೊಟ್ಟವರು ಶಿವಕುಮಾರ ಸ್ವಾಮೀಜಿ. ಅವರು ರೈತರ ಸಮಸ್ಯೆಗಳ ಬಗ್ಗೆ ದನಿ ಎತ್ತುತ್ತಿದ್ದರು. ಪರಿಸರ, ಶಿಕ್ಷಣ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸದಾ ಚಿಂತನೆ ಮಾಡುತ್ತಿದ್ದರು’ ಎಂದು ಹೇಳಿದರು.

ಕನ್ನಡ ಸಾಹಿತ್ಯ, ಸಂಗೀತ ಮತ್ತು ಜಾನಪದ ನಾಟಕ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ಸಮನ್ವಯ ವೇದಿಕೆ ನಗರದಲ್ಲಿ ಗುರುವಾರ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ಜಯಂತಿ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ‘ಮುಖ್ಯಮಂತ್ರಿ’ ಚಂದ್ರು ಅವರಿಗೆ ‘ಶ್ರೀ ಸಿದ್ದಗಂಗಾ ಸಿರಿ’ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. (ಎಡದಿಂದ) ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ ಅಧ್ಯಕ್ಷ ಎಸ್‌. ಶಾಂತರಾಜು, ಶಿವಗಂಗೆ ಮೇಲಣ ಗವಿಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ, ಪೂರ್ಣಚಂದ್ರ ರಂಗಮಂದಿರ ಟ್ರಸ್ಟ್‌ನ ಕಾರ್ಯದರ್ಶಿ ಆರ್‌. ಚೆನ್ನಕೇಶವಮೂರ್ತಿ, ಸಾಹಿತಿ ಗೊ.ರು. ಚನಬಸಪ್ಪ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಸಿಂ.ರಾ. ಹೊನ್ನಲಿಂಗಯ್ಯ ಇದ್ದರು ಪ್ರಜಾವಾಣಿ ಚಿತ್ರ

ಮದ್ದೂರು ಅರಣ್ಯ ವಲಯದಲ್ಲಿ ಬೆಂಕಿ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದ ಕರಡಿಕಲ್ಲು ಬೆಟ್ಟದ ಬಳಿ ಬೆಂಕಿ ಬಿದ್ದಿದ್ದು, ಹತ್ತಾರು ಎಕರೆ ಅರಣ್ಯ ಪ್ರದೇಶ ನಾಶವಾಗಿದೆ.

ಗುರುವಾರ ಮಧ್ಯಾಹ್ನ ಹೊತ್ತಿಕೊಂಡಿದ್ದ ಬೆಂಕಿ ರಾತ್ರಿ ಒಂಬತ್ತು ಗಂಟೆಯವರೆಗೂ ಉರಿಯಿತು.

‘ವಿಷಯ ತಿಳಿದ ಅರ್ಧ ತಾಸಿನಲ್ಲಿ ವಿವಿಧ ವಲಯಗಳ ವಲಯ ಅರಣ್ಯಾಧಿಕಾರಿಗಳು, ಡಿಆರ್‌ಎಫ್‌ಒ, ಫಾರೆಸ್ಟರ್‌ಗಳು, ನೌಕರರು ಸೇರಿ 250 ಮಂದಿ ಕಾರ್ಯ ಪ್ರವೃತ್ತರಾಗಿ ಫೈರ್‌ ಬೀಟರ್‌, ಹಸಿರು ಸೊಪ್ಪು ಬಳಸಿ ಬೆಂಕಿ ನಂದಿಸಿದೆವು. ಸಕಾಲಿಕ ಕ್ರಮದಿಂದ, ಪಶ್ಚಿಮ ಭಾಗದ ದಟ್ಟ ಕಾಡಿನತ್ತ ಬೆಂಕಿ ವ್ಯಾಪಿಸುವುದು ತಪ್ಪಿತು’ ಎಂದು ಎಸಿಎಫ್‌ ಕೆ.ಪರಮೇಶ್‌ ತಿಳಿಸಿದರು.

‘ಕೃಷಿ ಕಾಯ್ದೆ ಪ್ರತಿ ಸುಟ್ಟು ಯುಗಾದಿ ಆಚರಣೆ’

ಪ್ರಜಾವಾಣಿ ವಾರ್ತೆ

ಬಡಗಲಪುರ ನಾಗೇಂದ್ರ

ಮೈಸೂರು: ಸರ್ಕಾರ ಈಚೆಗೆ ಜಾರಿಗೆ ತಂದಿರುವ ಕೃಷಿ ಕ್ಷೇತ್ರದ ಕಾಯ್ದೆಗಳ ಪ್ರತಿಗಳನ್ನು ಸುಟ್ಟು ವಿಶಿಷ್ಟವಾಗಿ ಯುಗಾದಿ ಹಬ್ಬ ಆಚರಿಸಲು ಕರ್ನಾಟಕ ರಾಜ್ಯ ರೈತ ಸಂಘ ಕರೆ ನೀಡಿದೆ.

ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆಗಳ ಪ್ರತಿಗಳನ್ನೂ ಸುಟ್ಟು, ಕಾಯ್ದೆ ವಾಪಸ್‌ ಪಡೆಯುವಂತೆ ಸರ್ಕಾರವನ್ನು ಆಗ್ರಹಿಸಲಾಗುವುದು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು, ಮಂಗಳೂರು, ಚಿತ್ರದುರ್ಗದಲ್ಲಿ ಮೇ ತಿಂಗಳಿನಲ್ಲಿ ಬೃಹತ್‌ ಮಹಾ ಪಂಚಾಯತ್‌ ನಡೆಸುವ ಆಲೋಚನೆ ಇದೆ ಎಂದು ಅವರು ಹೇಳಿದರು.

ಬಹಿರಂಗವಾಗಿ ಕಾಣಿಸಿಕೊಂಡರೆ ಬಂಧನ ವಾರೆಂಟ್: ಕೋರ್ಟ್ ಎಚ್ಚರಿಕೆ

ಎಚ್‌ಡಿಕೆ ಓಡಾಟಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ತಂದೆ, ತಾಯಿಗೆ ಕೋವಿಡ್ ಸೋಂಕು ತಗಲಿರುವುದರಿಂದ ಕ್ವಾರಂಟೈನ್‌ನಲ್ಲಿ ಇರುವುದಾಗಿ ಕಾರಣ ನೀಡಿ ವಿಚಾರಣೆಗೆ ಗೈರಾಗಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಏಪ್ರಿಲ್ 17ರವರೆಗೂ ಬಹಿರಂಗವಾಗಿ ಕಾಣಿಸಿಕೊಂಡರೆ ಬಂಧನ ವಾರೆಂಟ್ ಜಾರಿಗೊಳಿಸುವುದಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ಎಚ್ಚರಿಕೆ ನೀಡಿದೆ.

ನಗರದ ಹಲಗೇವಡೇರಹಳ್ಳಿಯಲ್ಲಿ ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನ 2 ಎಕರೆ 24 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಜಿಲ್ಲೆಯ ಸಂತೆಮರಹಳ್ಳಿಯ ಎಂ. ಮಹಾದೇವಸ್ವಾಮಿ ಎಂಬುವವರು 2011ರಲ್ಲಿ ಖಾಸಗಿ ದೂರು ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆಗೆ ಕುಮಾರಸ್ವಾಮಿ ಸತತ ಮೂರನೇ ಬಾರಿಗೆ ಗೈರಾಗಿದ್ದರು.

ಕುಮಾರಸ್ವಾಮಿ ಅವರ ತಂದೆ ಮತ್ತು ತಾಯಿಗೆ ಕೋವಿಡ್ ಸೋಂಕು ತಗುಲಿದೆ. ಆದ್ದರಿಂದ ಅವರೂ ಹೋಂ ಕ್ವಾರಂಟೈನ್‌ನಲ್ಲಿ ಇದ್ದಾರೆ. ವಿಚಾರಣೆಗೆ ಖುದ್ದಾಗಿ ಹಾಜರಾಗುವುದರಿಂದ ವಿನಾಯಿತಿ ನೀಡಬೇಕು ಎಂದು ಕೋರಿ ಕುಮಾರಸ್ವಾಮಿ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು.

‘ಕ್ವಾರಂಟೈನ್‌ನಲ್ಲಿ ಇದ್ದರೆ ನೀವು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಂತಿಲ್ಲ. ಕ್ವಾರಂಟೈನ್ ಅವಧಿ ಮುಗಿಯುವವರೆಗೂ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿರುವುದು ಅಥವಾ ಬಹಿರಂಗವಾಗಿ ಓಡಾಡುತ್ತಿರುವುದು ಕಂಡುಬಂದರೆ ಬಂಧನ ವಾರೆಂಟ್ ಹೊರಡಿಸಲಾಗುವುದು’ ಎಂದು ನ್ಯಾಯಾಧೀಶರು ಎಚ್ಚರಿಕೆ ನೀಡಿದರು.

ಈ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ವಿಚಾರಣೆಗೆ ಸಮನ್ಸ್ ಜಾರಿಗೊಳಿಸಿರುವುದನ್ನು ಪ್ರಶ್ನಿಸಿ ಕುಮಾರಸ್ವಾಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ತಿರಸ್ಕರಿಸಿದ್ದ ಹೈಕೋರ್ಟ್, ವಿಚಾರಣೆ ಎದುರಿಸುವಂತೆ ಸೂಚಿಸಿತ್ತು. ಖುದ್ದು ಹಾಜರಿಯಿಂದ ವಿನಾಯಿತಿ ನೀಡಬೇಕೆಂಬ ಕೋರಿಕೆಯನ್ನೂ ಮಾನ್ಯ ಮಾಡಿರಲಿಲ್ಲ.

ಬಳಿಕ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಕುಮಾರಸ್ವಾಮಿ, ವಿಚಾರಣೆಗೆ ತಡೆ ನೀಡಲು ಮನವಿ ಮಾಡಿದ್ದರು. ಆದರೆ, ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿತ್ತು. ಸುಪ್ರೀಂಕೋರ್ಟ್‌ನಲ್ಲಿ ಕುಮಾರಸ್ವಾಮಿ ಅವರ ಅರ್ಜಿ ಇನ್ನೂ ಬಾಕಿ ಇದೆ.

ಹೈಕೋರ್ಟ್‌ಗೆ ಬೆಂಗಳೂರು ಟರ್ಫ್ ಕ್ಲಬ್ ಮಾಹಿತಿ

ಯಲಹಂಕಕ್ಕೆ ಕುದುರೆಗಳ ಸ್ಥಳಾಂತರಕ್ಕೆ ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಲಾಯಗಳಲ್ಲಿರುವ 800ಕ್ಕೂ ಹೆಚ್ಚು ಕುದುರೆಗಳ ಪೈಕಿ 200 ಕುದುರೆಗಳನ್ನು ಯಲಹಂಕದಲ್ಲಿರುವ ಸ್ಥಳವೊಂದಕ್ಕೆ ಸ್ಥಳಾಂತರಕ್ಕೆ ಪ್ರಯತ್ನ ನಡೆದಿದೆ ಎಂದು ಬಿಟಿಸಿ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಬಿಟಿಸಿಯಲ್ಲಿ ನಿಯಮ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾಣಿ ದಯಾ ಸಂಘಟನೆ (ಕ್ಯೂಪ) ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠದಲ್ಲಿ ಗುರುವಾರ ನಡೆಯಿತು.

ಆಗ ಪ್ರತಿಕ್ರಿಯೆ ಸಲ್ಲಿಸಿದ ಬಿಟಿಸಿ ಪರ ವಕೀಲರು, ‘ಕುದುರೆ ಲಾಯಗಳ ದುರಸ್ತಿ ಕಾಮಗಾರಿ ನಡೆಯುತ್ತಿದೆ. 800 ಕುದುರೆಗಳ ಪೈಕಿ 200 ಕುದುರೆಗಳನ್ನು ಸ್ಥಳಾಂತರಿಸಲು ಯಲಹಂಕ ಬಳಿ ಪ್ರಶಸ್ತವಾದ ಸ್ಥಳವೊಂದನ್ನು ಗುರುತಿಸಲಾಗಿದೆ. ಜಮೀನು ಮಾಲೀಕರ ಜತೆ ಮಾತುಕತೆಯೂ ನಡೆಯುತ್ತಿದೆ’ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 100 ವರ್ಷಗಳಿಂದ ಕುದುರೆ ರೇಸ್ ನಡೆಯುತ್ತಿದೆ. ರಾಜ್ಯ ಸರ್ಕಾರವೂ ಇದರಿಂದ ಆದಾಯ ಪಡೆಯುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರವನ್ನೂ ಪ್ರತಿವಾದಿಯನ್ನಾಗಿ ಮಾಡಬೇಕು ಎಂದು ಬಿಟಿಸಿ ಮಧ್ಯಂತರ ಅರ್ಜಿಯೊಂದನ್ನು ಸಲ್ಲಿಸಿತು. ಈ ಕೋರಿಕೆಯನ್ನು ಮಾನ್ಯ ಮಾಡಲು ನಿರಾಕರಿಸಿದ ನ್ಯಾಯಪೀಠ, ‘ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಅರ್ಜಿದಾರರು ಇಂತಹ ಕೋರಿಕೆ ಸಲ್ಲಿಸಬಹುದು. ಆದರೆ, ಪ್ರತಿವಾದಿ ಸಲ್ಲಿಸಲು ಅವಕಾಶವಿಲ್ಲ’ ಎಂದು ತಿಳಿಸಿತು.

ಪ್ರಾಣಿ ಕಲ್ಯಾಣ ಮಂಡಳಿ ನಿಯೋಜಿಸಿದ್ದ ತಪಾಸಣಾ ಅಧಿಕಾರಿ ಸಲ್ಲಿಸಿರುವ ವರದಿಯನ್ನು ಉಲ್ಲೇಖಿಸಿದ ನ್ಯಾಯಪೀಠ, ‘ವರದಿ ಪ್ರಕಾರ ಬಿಟಿಸಿಯಲ್ಲಿನ ಕುದುರೆ ಲಾಯಗಳ ಪೈಕಿ ಶೇಕಡ 80ರಷ್ಟು ಮಾರ್ಗಸೂಚಿಗಳ ಪ್ರಕಾರ ಇಲ್ಲ. ವರದಿಯ ಶಿಫಾರಸುಗಳನ್ನು ಶೀಘ್ರದಲ್ಲಿ ಅನುಷ್ಠಾನಕ್ಕೆ ತರಬೇಕು’ ಎಂದು ಸೂಚಿಸಿತು.

‘ಸಂಶೋಧನೆ ಸಮಾಜದ ಒಳಿತಿಗಾಗಿರಲಿ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಯಾವುದೇ ಸಂಶೋಧನೆ ನಡೆಸಿ, ಹೊಸದನ್ನು ಕಂಡು ಹಿಡಿದರೂ ಅದರಿಂದ ಸಮಾಜಕ್ಕೆ ಎಷ್ಟು ಲಾಭ ಹಾಗೂ ಒಳಿತಾಗುತ್ತದೆ ಎಂಬುದನ್ನು ಗುರುತಿಸುವಂತಿರಬೇಕು’ ಎಂದು ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಹೇಳಿದರು.



ಕಾರ್ಯಕ್ರಮದಲ್ಲಿ ಕೇಂದ್ರ ಕೌಶಲ್ಯ ಮತ್ತು ಸಂಪರ್ಕ ಸಚಿವಾಲಯ ಪ್ರಕಟಿತ ಅತ್ಯುತ್ತಮ ಹ್ಯಾಕಥಾನ್ ಪ್ರಾಜೆಕ್ಟ್ ವಿಜೇತ ರೇವಾ ವಿದ್ಯಾರ್ಥಿ ಆದಿತ್ಯ ದಿಲೀಪ್ ನಾಯರ್ ಅವರಿಗೆ ₹1 ಲಕ್ಷ ನಗದು ಹಾಗೂ ಪ್ರಶಸ್ತಿಯನ್ನು ಕುಲಾಧಿಪತಿ ಡಾ.ಪಿ. ಶ್ಯಾಮರಾಜು ವಿತರಿಸಿದರು. ಕುಲಪತಿ ಡಾ.ಎಂ.ಧನಂಜಯ ಇದ್ದರು.

ರೇವಾ ವಿಶ್ವವಿದ್ಯಾಲಯದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಇಇಇ) ಸ್ಕೂಲ್ ವಿದ್ಯಾರ್ಥಿಗಳ ಸಾಧನೆ ಆವಿಷ್ಕಾರಗಳನ್ನು ಪ್ರಸ್ತುತ ಪಡಿಸುವ ‘ರೇವಾ ಇಂಪ್ರಿಂಟ್’ ಕಾರ್ಯಕ್ರಮದಲ್ಲಿ, ‘ಇಇಇ ವಿಭಾಗದ ವಿದ್ಯಾರ್ಥಿಗಳು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಏನೆಲ್ಲ ವಿಶೇಷ ಸಾಧನೆ ಮಾಡಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ’ ಎಂದರು.

‘ರೈತಾಪಿ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ‘ಸಿಂಗಲ್ ಫೇಸ್ ಪ್ರಿವೆಂಟರ್’ ಸಾಧನವನ್ನು ಅಭಿವೃದ್ಧಿ ಪಡಿಸಿ ಲೋಕಾರ್ಪಣೆ ಮಾಡಿರುವುದು ತೃಪ್ತಿ ತಂದಿದೆ. ವಿದ್ಯುತ್ ಸಮಸ್ಯೆಯಿಂದ ಮೋಟಾರ್‌ಗಳು ಕೆಟ್ಟು ಹೋಗುವ ಹಾಗೂ ಅದರಿಂದಾಗುವ ನಷ್ಟವನ್ನು ತಪ್ಪಿಸಲು ಈ ಸಾಧನ ನೆರವಾಗಲಿದೆ. ಹಳ್ಳಿಗಾಡಿನ ರೈತರನ್ನು ಗಮನದಲ್ಲಿಟ್ಟುಕೊಂಡು ಅನ್ವೇಷಣೆ ಮಾಡುತ್ತಿರುವುದು ನಮ್ಮ ವಿದ್ಯಾರ್ಥಿಗಳಿಗಿರುವ ಸಾಮಾಜಿಕ ಕಾಳಜಿಯನ್ನು ತೋರಿಸುತ್ತಿದೆ’ ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಇಇಇ ವಿಭಾಗದ ನಿರ್ದೇಶಕ ಡಾ.ರಾಜಶೇಖರ ಮಂಡಿ ಉಪಸ್ಥಿತರಿದ್ದರು.

‘ಕುಶ’ನ ಮತ್ತೆ ಪಳಗಿಸುವ ತಾಲೀಮು

ಪ್ರಜಾವಾಣಿ ವಾರ್ತೆ

ಕುಶಾಲನಗರ (ಕೊಡಗು): ಸಂಗಾತಿಯನ್ನು ಹುಡುಕಿಕೊಂಡು ವರ್ಷದ ಹಿಂದೆ ಕಾಡಿಗೆ ಹೋಗಿದ್ದ ದುಬಾರೆ ಶಿಬಿರದ ಆನೆ ‘ಕುಶ’ನನ್ನು ಸೆರೆ ಹಿಡಿದು, ಕ್ರಾಲ್ (ದೌಡ್ಡಿ)ನಲ್ಲಿ ಬಂಧಿಸಿಯಾಗಿದೆ. ಆದರೆ, ಆ ಆನೆಯಲ್ಲಿ ಗೆಲುವಿಲ್ಲ. ತನ್ನ ಸಹಪಾಠಿಗಳ ಗುಂಪಿಗೆ ಸೇರಿದ ಖುಷಿಯೂ ಕಾಣುತ್ತಿಲ್ಲ.



‘ಕುಶ’ ಆನೆಯನ್ನು ಕ್ರಾಲ್‌ಗೆ ಕಳುಹಿಸುತ್ತಿರುವ ದೃಶ್ಯ

ಶಿಬಿರದ ರೀತಿ-ರಿವಾಜುಗಳನ್ನು ‘ಕುಶ’ ಮರೆತೇ ಹೋಗಿದ್ದಾನೆ. ಒಂದು ವರ್ಷದಿಂದ ಕಾಡಾನೆಗಳ ಸಹವಾಸ ಮಾಡಿದ ಈ ಗಂಡಾನೆ, ಸ್ವಾಭಾವಿಕವಾಗಿ ಕಾಡಾನೆಯಾಗಿ ಪರಿವರ್ತನೆ ಹೊಂದಿದೆ. ಮೃದು ಸ್ವಾಭಾವ ಹೋಗಿ ಪುಂಡಾಟಿಕೆ ಸ್ವಭಾವ, ರೋಷಾವೇಷ ಬೆಳೆಸಿಕೊಂಡಿದೆ. ಇದರೊಂದಿಗೆ, ಸಂಗಾತಿಯಿಂದ ದೂರವಾದ ವೇದನೆಯನ್ನೂ ಅನುಭವಿಸುತ್ತಿದೆ.

ಕಾಡಿನಲ್ಲಿ ತನ್ನ ಸಂಗಾತಿ ಹಾಗೂ ಇತರ ಕಾಡಾನೆಗಳೊಂದಿಗೆ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದ ‘ಕುಶ’ನ ತೂಕ 200 ಕೆ.ಜಿ ಕಡಿಮೆಯಾಗಿದ್ದರೂ ಆರೋಗ್ಯವಾಗಿದ್ದಾನೆ. ಮಾವುತರ ಭಾಷೆಯನ್ನು ಸ್ವಲ್ಪ ಮರೆತಂತಿದೆ. ಮಾವುತರ ಆಜ್ಞೆಗಳನ್ನು ಪಾಲಿಸುತ್ತಿಲ್ಲ. ಮಾವುತರ ಭಾಷೆಯನ್ನೇ ಮರೆತಿದೆ. ಸಾಕಾನೆಗಳ ಸಹಕಾರದಿಂದ ಮರದ ದಿಮ್ಮಿಗಳಿಂದ ನಿರ್ಮಾಣ ಮಾಡಿರುವ ‘ಕ್ರಾಲ್’ಗೆ ಹಾಕಲಾಗಿದ್ದು, ಒಂದು ತಿಂಗಳ ಕಾಲ ಅಲ್ಲಿ ಅದನ್ನು ಮತ್ತೆ ಪಳಗಿಸುವ ಕೆಲಸ ನಡೆಯಲಿದೆ. ‘ಕುಶ’ ಆನೆಗೆ ಮಿತವಾಗಿ ಆಹಾರ ನೀಡುವ ಮೂಲಕ, ಮಾವುತರಿಂದ ಪಳಗಿಸಿ ಶಿಸ್ತಿನ ಪಾಠ ಕಲಿಸಲು ಇಲಾಖೆ ಕ್ರಮ ಕೈಗೊಂಡಿದೆ ಎಂದು ಕುಶಾಲನಗರ ವಲಯ ಅರಣ್ಯಾಧಿಕಾರಿ ಅನನ್ಯ ಕುಮಾರ್ ತಿಳಿಸಿದ್ದಾರೆ.

ದುಬಾರೆ ಶಿಬಿರದಲ್ಲಿನ ಸಾಕಾನೆಗಳು, ಮದವೇರಿದ ಸಂದರ್ಭದಲ್ಲಿ ಕಾಡಿಗೆ ತೆರಳಿ ಹೆಣ್ಣಾನೆ ಸಂಗ ಮಾಡಿ ವಾಪಸ್ಸಾಗುವುದು ಸಾಮಾನ್ಯ. ಆದರೆ, ’ಕುಶ’ ಮಾತ್ರ ವಾಪಸ್ಸಾಗಿರಲಿಲ್ಲ. ಅರಣ್ಯ ಇಲಾಖೆ ಸಿಬ್ಬಂದಿ ಆನೆಯನ್ನು ಸೆರೆ ಹಿಡಿದಿದ್ದು, ಬುಧವಾರ ಮತ್ತೆ ಶಿಬಿರಕ್ಕೆ ಕರೆತರಲಾಗಿದೆ.

ಆಲೂರು ಗ್ರಾ.ಪಂ. ಹೊಸಬರಿಗೆ ಮನ್ನಣೆ

ಎಂ. ಸವಿತಾ

ಹೆಸರಘಟ್ಟ: ಆಲೂರು ಗ್ರಾಮ ಪಂಚಾಯಿತಿ ಚುನಾವಣಾ ಫಲಿತಾಂಶ ಬುಧವಾರ ಪ್ರಕಟಗೊಂಡಿದ್ದು ಗ್ರಾಮಸ್ಥರು ಹೊಸಬರಿಗೆ ಮನ್ನಣೆ ನೀಡಿದ್ದಾರೆ.

22 ಸ್ಥಾನಗಳಲ್ಲಿ ಏಳು ಅವಿರೋಧ ಆಯ್ಕೆಯಾಗಿ 15 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. 33 ಸದಸ್ಯರು ಕಣದಲ್ಲಿ ಇದ್ದರು. ಆಲೂರು ಗ್ರಾಮದಲ್ಲಿ 5, ಹೆಗ್ಗಡದೇವನಪುರದಲ್ಲಿ 6 ಮತ್ತು ತಮ್ಮೇನಹಳ್ಳಿ ಗ್ರಾಮದಲ್ಲಿ ಇಬ್ಬರು ಒಟ್ಟು 13 ಸದಸ್ಯರು ಮೊದಲ ಬಾರಿ ಗೆಲುವನ್ನು ಪಡೆದಿದ್ದಾರೆ.

ತಮ್ಮೇನಹಳ್ಳಿ ಗ್ರಾಮದ ವಾರ್ಡ್ ನಂ 1 ಸಾಮಾನ್ಯವರ್ಗಕ್ಕೆ ಮೀಸಲಾಗಿತ್ತು. ಸಾಮಾನ್ಯವರ್ಗಕ್ಕೆ ಮೀಸಲಾಗಿದ್ದ ವಾರ್ಡ್‌ನಲ್ಲಿ ಪರಿಶಿಷ್ಟ ಜಾತಿಯ ಎಂ. ಸವಿತಾ ಗೆಲುವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇವರು ಸತತವಾಗಿ ಎರಡು ಬಾರಿ ಜಯಶೀಲರಾಗಿದ್ದು 233 ಮತಗಳ ಅಂತರದಿಂದ ಗೆಲುವನ್ನು ಪಡೆದಿದ್ದಾರೆ.

ವಿದ್ಯಾರ್ಥಿಗೆ ಪ್ರವೇಶ: ಎನ್‌ಬಿಎಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಲೋಶಿಪ್ ಪ್ರವೇಶ ಪರೀಕ್ಷೆಯಲ್ಲಿ (ಎಫ್‌ಇಟಿ) 15ನೇ ರ‍್ಯಾಂಕ್ ಪಡೆದಿದ್ದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಬಿ. ಸುಜಿತ್ ಎಂಬ ವಿದ್ಯಾರ್ಥಿಗೆ ಕ್ರೀಡಾ ಔಷಧಿ ವಿಭಾಗದಲ್ಲಿ ವೈದ್ಯಕೀಯ ಫೆಲೋಶಿಪ್ ಕೋರ್ಸ್‌ಗೆ ಪ್ರವೇಶ ನೀಡುವಂತೆ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ (ಎನ್‌ಬಿಎ) ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

2020ರ ಅಕ್ಟೋಬರ್‌ನಲ್ಲಿ ನಡೆದಿದ್ದ ಎಫ್‌ಇಟಿಯಲ್ಲಿ ಸುಜಿತ್ 15ನೇ ರ‍್ಯಾಂಕ್ ಪಡೆದಿದ್ದರು. ಮೊದಲ ಎರಡು ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಲಭಿಸಿದ್ದ ಸೀಟುಗಳನ್ನು ನಿರಾಕರಿಸಿದ್ದ ಅವರು, ಕೊನೆಯ (ಮಾಪ್ ಅಪ್) ಸುತ್ತಿನ ಕೌನ್ಸೆಲಿಂಗ್‌ಗೆ ಅರ್ಜಿ ಸಲ್ಲಿಸಿದ್ದರು.

2021ರ ಮಾರ್ಚ್ 11ರಂದು ಸುತ್ತೋಲೆಯೊಂದನ್ನು ಹೊರಡಿಸಿದ್ದ ಎನ್‌ಬಿಎ, ಮೊದಲ ಎರಡು ಸುತ್ತುಗಳಲ್ಲಿ ಸೀಟುಗಳ ಹಂಚಿಕೆಯಾಗದೇ ಇದ್ದು, ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು ಮಾತ್ರ ಕೊನೆಯ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂಬ ಷರತ್ತು ವಿಧಿಸಿತ್ತು. ಮೊದಲ ಎರಡು ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟುಗಳನ್ನು ನಿರಾಕರಿಸಿರುವ ಕಾರಣದಿಂದ ಕೊನೆಯ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿಲ್ಲ ಎಂದು ಅರ್ಜಿದಾರರಿಗೆ ತಿಳಿಸಲಾಗಿತ್ತು.

ಮಾರ್ಚ್ 23ರಂದು ಮತ್ತೊಂದು ಸುತ್ತೋಲೆ ಹೊರಡಿಸಿದ್ದ ಎನ್‌ಬಿಎ, ಮೊದಲ ಸುತ್ತುಗಳಲ್ಲಿ ಸೀಟು ಹಂಚಿಕೆಯಾಗಿದ್ದರೂ ಅವುಗಳನ್ನು ಒಪ್ಪಿಕೊಳ್ಳದ ಮತ್ತು ಶುಲ್ಕ ಪಾವತಿಸದ ಅಭ್ಯರ್ಥಿಗಳು ಕೊನೆಯ ಸುತ್ತಿನಲ್ಲಿ ಭಾಗವಹಿಸಬಹುದು ಎಂದು ತಿಳಿಸಿತ್ತು.

ಇದನ್ನು ಸುಜಿತ್ ನ್ಯಾಯಾಲಯದ ಗಮನಕ್ಕೆ ತಂದಿದ್ದರು. ಎಫ್‌ಇಟಿಯಲ್ಲಿ 63, 67 ಮತ್ತು 80ನೇ ರ‍್ಯಾಂಕ್ ಗಳಿಸಿದ್ದ ಅಭ್ಯರ್ಥಿಗಳಿಗೆ ಕ್ರೀಡಾ ಔಷಧ ವಿಭಾಗದಲ್ಲಿ ಪ್ರವೇಶ ನೀಡಿರುವುದನ್ನೂ ತಿಳಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅರವಿಂದ್ ಕುಮಾರ್ ನೇತೃತ್ವದ ವಿಭಾಗೀಯ ಪೀಠ, ಸುಜಿತ್ ಅವರಿಗೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಮೆಟ್ಟುಪಾಳ್ಯಂನ ಗಂಗಾ ಮೆಡಿಕಲ್ ಸೆಂಟರ್ ಮತ್ತು ಆಸ್ಪತ್ರೆಯಲ್ಲಿ ಕ್ರೀಡಾ ಔಷಧ ವಿಭಾಗದಲ್ಲಿ ಪ್ರವೇಶ ನೀಡುವಂತೆ ಗುರುವಾರ ಮಧ್ಯಂತರ ಆದೇಶ ಹೊರಡಿಸಿತು.

ಮಾ.31ಕ್ಕೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಂಡಿದೆ. ಇದೇ ಕಾಲೇಜಿನಲ್ಲಿ 63ನೇ ರ‍್ಯಾಂಕ್ ವಿದ್ಯಾರ್ಥಿಗೆ ಕ್ರೀಡಾ ಔಷಧ ವಿಭಾಗದಲ್ಲಿ ಪ್ರವೇಶ ನೀಡಲಾಗಿದೆ. ಈಗಾಗಲೇ ಪ್ರವೇಶ ಪಡೆದಿರುವವರಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂಬ ಸೂಚನೆ ನೀಡಿದ ನ್ಯಾಯಾಲಯ, ಎಲ್ಲ ಪ್ರವೇಶಾತಿಗಳು ಈ ಅರ್ಜಿಯ ಮೇಲಿನ ಅಂತಿಮ ಆದೇಶದ ವ್ಯಾಪ್ತಿಗೆ ಒಳಪಡುತ್ತವೆ ಎಂದು ತಿಳಿಸಿದೆ.

ಕಾಗಿನೆಲೆ ಗ್ರಾಮ: ಅಲೆಮಾರಿ ದುರಗಮುರಗಿ ಜನಾಂಗದ ಮಹಿಳೆ

ಗ್ರಾ.ಪಂ. ಅಧ್ಯಕ್ಷೆಯಾಗುವ ಯೋಗ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ): ತಾಲ್ಲೂಕಿನ ಕಾಗಿನೆಲೆ ಗ್ರಾಮದ ಹೊರವಲಯದ ಗುಡಿಸಲಿನಲ್ಲಿ ವಾಸಿಸುವ ಗ್ರಾಮ ಪಂಚಾಯ್ತಿ ಸದಸ್ಯೆ ಗುತ್ತೆವ್ವ ದುರಗಮುರಗಿ ಅವರಿಗೆ ಗ್ರಾ.ಪಂ.ಅಧ್ಯಕ್ಷೆಯಾಗುವ ಯೋಗ ಒಲಿದು ಬಂದಿದೆ.

ಅಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವುದರಿಂದ ಆ ಸಮುದಾಯಕ್ಕೆ ಸೇರಿದ ಮಹಿಳೆ ಇವರೊಬ್ಬರೇ ಆಗಿದ್ದಾರೆ. ಕಾಗಿನೆಲೆ ಗ್ರಾಮ ಪಂಚಾಯ್ತಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 4 ನೇ ವಾರ್ಡ್‌ಗೆ ಮೊದಲ ಬಾರಿಗೆ ಸ್ಪರ್ಧಿಸಿದ್ದ ಗುತ್ತೆವ್ವ 218 ಮತಗಳನ್ನು ಪಡೆದಿದ್ದರು. ತಮ್ಮ ಸಮೀಪದ ಸ್ಪರ್ಧಿಯನ್ನು 52 ಮತಗಳಿಂದ ಸೋಲಿಸಿದ್ದರು.

ಸೂಜಿ, ಪಿನ್ನು, ಹೇರ್‌ಪಿನ್, ದಾರ ಮಾರಿಕೊಂಡು ಜೀವನ ಸಾಗಿಸುತ್ತಿದ್ದ ಅಲೆಮಾರಿ ಜನಾಂಗದ ಮಹಿಳೆ ಈ ಸ್ಥಾನಕ್ಕೆ ಏರಿದ್ದು ತಾಲ್ಲೂಕಿನಲ್ಲಿ ಇದೇ ಮೊದಲಾಗಿದೆ.

ಗ್ರಾಮದ ಹೊರವಲಯದಲ್ಲಿ ಖಾಸಗಿಯವರ ಜಾಗದಲ್ಲಿ ಕಳೆದ 20 ವರ್ಷಗಳಿಂದ ವಾಸಿಸುತ್ತಿದ್ದ ಅಲೆಮಾರಿ ಕುಟುಂಬಗಳಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕ ಸಿಕ್ಕಿರಲಿಲ್ಲ. ಅವರ ಕುಟುಂಬದ ಬಳಿಯಿದ್ದ ಮೊಬೈಲ್‌ಗಳಿಗೆ ಪ್ರತಿದಿನ ಚಾರ್ಜ್ ಮಾಡಲು ತಲಾ ₹5 ಬೇರೆಯವರಿಗೆ ಸಂದಾಯ ಮಾಡಬೇಕಾಗಿತ್ತು. ಇದನ್ನು ಅರಿತ ಸ್ಥಳೀಯ ಆಡಳಿತ 14ನೇ ಹಣಕಾಸು ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಅನುದಾನದಲ್ಲಿ ವಿದ್ಯುತ್ ಸಂಪರ್ಕ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿದೆ ಎಂದು ಪಿಡಿಒ ವಿಶ್ವನಾಥ ಕಟ್ಟೆಪ್ಪನವರ ಮಾಹಿತಿ ನೀಡಿದ್ದಾರೆ.



ವಾರ್ಡ್ ಹಿರಿಯರು ಹೆಚ್ಚಿನ ಮತಗಳಿಂದ ಆಯ್ಕೆ ಮಾಡಿದ್ದಾರೆ. ಉತ್ತಮ ಕೆಲಸ ಮಾಡುವುದು ನನ್ನ ಕರ್ತವ್ಯ

ಗುತ್ತೆವ್ವ ದುರಗಮುರಗಿ, ಗ್ರಾ.ಪಂ. ಸದಸ್ಯೆ, ಕಾಗಿನೆಲೆ

ಕಸಾಪ ಚುನಾವಣೆ: ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಹೆಚ್ಚಿದ ಆಕಾಂಕ್ಷಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಗುರುವಾರ ಐದು ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಪರಿಷತ್ತಿನ ರಾಜ್ಯ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ರಂದು ಚುನಾವಣೆ ನಡೆಯಲಿದೆ. ಏ.7ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಇದೆ.

ಸಿ.ಕೆ. ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಸಿ. ಹಳ್ಳೂರ, ಬಾಡದ ಬದ್ರಿನಾಥ್ ಹಾಗೂ ಶಿವರಾಜ ಪಾಟೀಲ ಅವರು ತಮ್ಮ ಬೆಂಬಲಿಗರೊಂದಿಗೆ ಪರಿಷತ್ತಿನ ಕೇಂದ್ರ ಕಚೇರಿಗೆ ಗುರುವಾರ ತೆರಳಿ, ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ವ.ಚ. ಚನ್ನೇಗೌಡ, ಮಹೇಶ್ ಜೋಶಿ ಹಾಗೂ ಸಂಗಮೇಶ ಬಾದವಾಡಗಿ ಈಗಾಗಲೇ ನಾಮಪತ್ರ ಸಲ್ಲಿಸಿ, ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಈವರೆಗೆ ನಾಮಪತ್ರ ಸಲ್ಲಿಸಿದವರ ಸಂಖ್ಯೆ 8ಕ್ಕೆ ತಲುಪಿದೆ. ಕೇರಳ ಗಡಿನಾಡ ಘಟಕಕ್ಕೆ ಸುಬ್ರಮಣ್ಯ ವಿ. ಭಟ್, ಆಂಧ್ರ ಪ್ರದೇಶ ಗಡಿನಾಡ ಘಟಕಕ್ಕೆ ಕುಣೆ ಬಾಲರಾಜ್ ಹಾಗೂ ಮಹಾರಾಷ್ಟ್ರ ಗಡಿನಾಡ ಘಟಕಕ್ಕೆ ಎಸ್.ಎಸ್. ಸಾಲೀಮಠ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಏ.8ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏ.12ರಂದು ಅಂತಿಮವಾಗಿ ಸ್ಪರ್ಧೆಯಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ.

ಅಪಘಾತ: ನೀರಾವರಿ ಆಯೋಗದ ನಿರ್ದೇಶಕರಿಬ್ಬರು ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಮರಿಯಮ್ಮನಹಳ್ಳಿ (ಹೊಸಪೇಟೆ ತಾಲ್ಲೂಕು): ಚಾಲಕನ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾದ ಕಾರು ರಸ್ತೆ ವಿಭಜಕ ದಾಟಿ ಇನ್ನೊಂದು ಕಾರಿಗೆ ಅಪ್ಪಳಿಸಿ ಸಂಭವಿಸಿದ ಭೀಕರ ಅಪಘಾತದಲ್ಲಿ ನಾಲ್ವರು ಮೃತಪಟ್ಟು, ಆರು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮರಿಯಮ್ಮನಹಳ್ಳಿ ಸಮೀಪದ ಹಾರುವನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಗುರುವಾರ ಮಧ್ಯಾಹ್ನ ಈ ಅಪಘಾತ ಸಂಭವಿಸಿದೆ. ನೀರಾವರಿ ಆಯೋಗದ ನಿರ್ದೇಶಕರಾದ ಬೆಂಗಳೂರಿನ ರಾಮಸ್ವಾಮಿ (50), ಜಿತೇಂದ್ರ (50) ಹಾಗೂ ತಿಪಟೂರಿನ ಕಾವ್ಯ (30), ಶರಣಬಸವ (10) ಮೃತರು. ತೀವ್ರವಾಗಿ ಗಾಯಗೊಂಡಿರುವ ಸರ್ಕಾರಿ ಇನ್ನೊವಾ ಕಾರಿನ ಚಾಲಕ ಅನ್ವರ್, ಮತ್ತೊಂದು ಕಾರಿನ ಚಾಲಕ ಗಿರೀಶ್, ಶಿವಲೀಲಾ, ಸಿದ್ದಲಿಂಗೇಶ್, ಸುವರ್ಣ, ಮಂಜುಶ್ರೀ ಅವರನ್ನು ಹೊಸಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಬೆಂಗಳೂರಿನಿಂದ ಕುಷ್ಟಗಿ ಕಡೆ ಹೊರಟಿದ್ದ ಏಳು ಜನರಿದ್ದ ಇನ್ನೊವಾ ಕಾರು ಮೊದಲು ಅಪಘಾತಕ್ಕೀಡಾಗಿ ರಸ್ತೆಯ ಇನ್ನೊಂದು ಬದಿಯಲ್ಲಿ ಸಾಗುತ್ತಿದ್ದ ಅಧಿಕಾರಿಗಳಿದ್ದ ಇನ್ನೊವಾ ಕಾರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಇಬ್ಬರು ಅಧಿಕಾರಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಇನ್ನಿಬ್ಬರು ಸಾವನ್ನಪ್ಪಿದ್ದಾರೆ. ಅಧಿಕಾರಿಗಳಿದ್ದ ಕಾರು ಆಲಮಟ್ಟಿಯಿಂದ ಬೆಂಗಳೂರಿನ ಕಡೆಗೆ ಹೋಗುತ್ತಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ತಜ್ಞ ಮೌಲ್ಯಮಾಪಕರ ಸಮಿತಿಗೆ ನೇಮಕಾತಿ ದಾಖಲೆ ಸಲ್ಲಿಸಲು ಕೇಂದ್ರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನದಿ ಕಣಿವೆ ಮತ್ತು ಜಲ ವಿದ್ಯುತ್ ಯೋಜನೆಗಳ ತಜ್ಞ ಮೌಲ್ಯಮಾಪಕರ ಸಮಿತಿಯ (ಇಎಸಿ) ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಗುರುವಾರ ನಿರ್ದೇಶನ ನೀಡಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಕೆ. ಗೋಪಕುಮಾರ್ ಅವರನ್ನು ಇಎಸಿಯ ಅಧ್ಯಕ್ಷರನ್ನಾಗಿ ಮತ್ತು ಬಿ.ಕೆ. ಪಾಣಿಗ್ರಾಹಿ, ಆರ್.ವಿ. ಉದಯ್ ಕುಮಾರ್, ಚಂದ್ರಹಾಸ್ ದೇಶಪಾಂಡೆ ಮತ್ತು ಬಾಲರಾಜ್ ಜೋಶಿ ಅವರನ್ನು ಸದಸ್ಯರನ್ನಾಗಿ ನೇಮಿಸಿರುವುದನ್ನು ಪ್ರಶ್ನಿಸಿ ಬೆಂಗಳೂರಿನ ಯುನೈಟೆಡ್ ಕನ್ಸರ್ವೇಷನ್ ಮೂವ್‌ಮೆಂಟ್ ಚಾರಿಟಬಲ್ ಟ್ರಸ್ಟ್ ಸಂಸ್ಥೆಯು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದೆ.

ಪರಿಸರ ಪರಿಣಾಮ ಅಧ್ಯಯನಕ್ಕೆ (ಇಎಸ್‌ಎ) ಸಂಬಂಧಿಸಿದಂತೆ 2006ರಲ್ಲಿ ಹೊರಡಿಸಿರುವ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಅರ್ಹತೆಗಳಿಗೆ ವಿರುದ್ಧವಾಗಿ ನೇಮಕಾತಿ ನಡೆದಿದೆ ಎಂದು ಅರ್ಜಿದಾರರು ದೂರಿದ್ದಾರೆ. ಐವರನ್ನು ನೇಮಕ ಮಾಡಿ 2020ರ ಜುಲೈ 13ರಂದು ಹೊರಡಿಸಿರುವ ಆದೇಶವನ್ನು ರದ್ದು ಮಾಡುವಂತೆ ಕೋರಿದ್ದಾರೆ.

ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಆಕ್ಷೇಪಣೆ ಸಲ್ಲಿಸಿತ್ತು. ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಕೇಂದ್ರ ಸರ್ಕಾರ ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಸರಿಯಾದ ಮಾಹಿತಿ ಇಲ್ಲ. ಮಹತ್ವದ ಸಮಿತಿಯೊಂದಕ್ಕೆ ಹೇಗೆ ನೇಮಕಾತಿ ನಡೆಸಲಾಗಿದೆ ಎಂಬುದರ ವಿವರಗಳನ್ನೇ ಒದಗಿಸಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿತು.

ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಸಮಗ್ರ ವಿವರ ಹಾಗೂ ದಾಖಲೆಗಳನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ ವಿಭಾಗೀಯ ಪೀಠ, ಮೇ 25ಕ್ಕೆ ವಿಚಾರಣೆ ಮುಂದೂಡಿತು.

ಸಿ.ಡಿ. ಪ್ರಕರಣ: ವಿಚಾರಣೆಗೆ ಹಾಜರಾಗಲು ಶಾಸಕ ರಮೇಶ ಜಾರಕಿಹೊಳಿಗೆ ನೋಟಿಸ್

ಅತ್ಯಾಚಾರ: 'ಮಂತ್ರಿ' ಫ್ಲ್ಯಾಟ್‌ನಲ್ಲಿ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ 'ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಸ್ವ-ಇಚ್ಛಾ ಹೇಳಿಕೆ ನೀಡಿರುವ ಸಂತ್ರಸ್ತೆಯ ಸಮ್ಮುಖದಲ್ಲಿ ಮಹಜರು ಪ್ರಕ್ರಿಯೆ ಗುರುವಾರ ನಡೆದಿದೆ.

ಸಿಆರ್‌ಪಿಸಿ 164ರಡಿ ಸಂತ್ರಸ್ತೆ ನೀಡಿರುವ ಹೇಳಿಕೆಯ ಪ್ರತಿ, ಮುಚ್ಚಿದ ಲಕೋಟೆಯಲ್ಲಿ ತನಿಖಾಧಿಕಾರಿಯೂ ಆಗಿರುವ ಎಸಿಪಿ ಎಂ.ಸಿ. ಕವಿತಾ ಕೈ ಸೇರಿದೆ. ಅದರಲ್ಲಿರುವ ಅಂಶಗಳನ್ನು ಆಧರಿಸಿ ತನಿಖೆ ಚುರುಕುಗೊಳಿಸಿರುವ ಕವಿತಾ, ಬುಧವಾರವಷ್ಟೇ ಯುವತಿ ಪೂರಕ ಹೇಳಿಕೆ ಪಡೆದು, ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಿದ್ದರು.

ಮಹಜರು ಪ್ರಕ್ರಿಯೆ ಆರಂಭಿಸಿದ ತನಿಖಾಧಿಕಾರಿ, ನಗರದ ಹಲವು ಸ್ಥಳಗಳಿಗೆ ಭೇಟಿ ಕೊಟ್ಟರು. ಈ ಹಿಂದಿನ ಕೆಲ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ನೀಡಿರುವ ನಿಯಮಗಳ ಅನ್ವಯ ವಿಧಿವಿಜ್ಞಾನ ಪ್ರಯಾಗಾಲಯದ ಅಧಿಕಾರಿಗಳ ಜೊತೆಯಲ್ಲೇ ತನಿಖಾಧಿಕಾರಿಯವರು ಮಹಜರು ಮಾಡಿದರು.

ಅತ್ಯಾಚಾರ ನಡೆದಿದ್ದ ಫ್ಲ್ಯಾಟ್‌ನಲ್ಲೂ ಮಹಜರು: ಯುವತಿ ಮೇಲೆ ರಮೇಶ ಜಾರಕಿಹೊಳಿ ಅತ್ಯಾಚಾರ ನಡೆಸಿದ್ದರು ಎನ್ನಲಾದ ಮಲ್ಲೇಶ್ವರದಲ್ಲಿರುವ ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲೂ ಮಹಜರು ಪ್ರಕ್ರಿಯೆ ನಡೆಯಿತು.

ಸಮುಚ್ಚಯದ 'ಸಿ' ಬ್ಲಾಕ್‌ನ 17ನೇ ಮಹಡಿಯಲ್ಲಿರುವ ಫ್ಲ್ಯಾಟ್‌ಗೆ ಹೋದ ಸಂತ್ರಸ್ತೆ, ರಮೇಶ ಜಾರಕಿಹೊಳಿ ಜೊತೆಗೆ ಕಳೆದ ಪ್ರತಿಯೊಂದು ಕ್ಷಣಗಳನ್ನೂ ವಿವರಿಸಿದರು. ಅದನ್ನು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಯಿತು. ಸಂದರ್ಶಕರ ಪಟ್ಟಿ ಪುಸ್ತಕ, ಕೊಠಡಿಯಲ್ಲಿದ್ದ ಬಟ್ಟೆಗಳು, ಬೆಡ್‌ಶೀಟ್‌ಗಳು, ಸ್ಥಳದಲ್ಲಿ ಸಿಕ್ಕ ಕೆಲ ಕೂದಲುಗಳನ್ನೂ ತನಿಖಾ ತಂಡ ಸುಪರ್ದಿಗೆ ಪಡೆದಿರುವುದಾಗಿ ಗೊತ್ತಾಗಿದೆ.

'ನನ್ನನ್ನು ಮೊದಲೇ ಫ್ಲ್ಯಾಟ್‌ಗೆ ಕರೆಸಿಕೊಳ್ಳುತ್ತಿದ್ದ ರಮೇಶ ಜಾರಕಿಹೊಳಿ, ತಡವಾಗಿ ಬರುತ್ತಿದ್ದರು. ಕೊಠಡಿಯಲ್ಲೂ ಕಾಯುವಂತೆ ಹೇಳುತ್ತಿದ್ದರು. ಅವರು ಹೇಳಿದ್ದರಿಂದ, ಕೆಲ ಬಾರಿ ಅಪಾರ್ಟ್‌ಮೆಂಟ್ ಸಮುಚ್ಚಯದ ಹಿಂಬಾಗಿಲಿನಿಂದಲೂ ಒಳಗೆ ಬಂದಿದೆ. ಮೂರು ಸಾರಿ ಫ್ಲ್ಯಾಟ್‌ಗೆ ಬಂದಿದ್ದೆ. ಮೂರು ಬಾರಿಯೂ ಕೊಠಡಿಯಲ್ಲಿ ನನ್ನ ಮೇಲೆ ರಮೇಶ ಜಾರಕಿಹೊಳಿ ಅತ್ಯಾಚಾರ ಮಾಡಿದ್ದಾರೆ' ಎಂದೂ ಸಂತ್ರಸ್ತೆ ವಿವರಿಸಿರುವುದಾಗಿ ಮೂಲಗಳು ಹೇಳಿವೆ.

ಸಂತ್ರಸ್ತೆ ಹಾಗೂ ತನಿಖಾ ತಂಡಕ್ಕೆ ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು. ಬೆಂಗಾವಲು ವಾಹನವೂ ಜೊತೆಗಿತ್ತು. ಮಹಜರು ನಡೆಯುವ ಸ್ಥಳದಲ್ಲಿ ಸಾರ್ವಜನಿಕರ ಓಡಾಟ ನಿರ್ಬಂಧಿಸಲಾಗಿತ್ತು.

ಕೊಠಡಿಯಲ್ಲಿ ಬಟ್ಟೆ ಸಂಗ್ರಹ: ಸಂತ್ರಸ್ತೆ ವಾಸವಿದ್ದ ಆರ್‌.ಟಿ.ನಗರದಲ್ಲಿರುವ ಕೊಠಡಿಗೆ ಹೋಗಿದ್ದ ತನಿಖಾ ತಂಡ, ಸಂತ್ರಸ್ತೆಯಿಂದಲೇ ವಿಸ್ತೃತ ಮಾಹಿತಿ ಪಡೆಯಿತು. ಕೊಠಡಿಯಲ್ಲಿ ಯಾರೆಲ್ಲ ಇದ್ದರು ? ಬೇರೆ ಯಾರೆಲ್ಲ ಬಂದು ಹೋಗಿದ್ದರು ? ಅವರು ಎಲ್ಲಿ ಕುಳಿತುಕೊಂಡಿದ್ದರು? ಕೊಠಡಿ ಮಾಲೀಕರ ಜೊತೆಗಿನ ಒಡನಾಟ ? ಅಕ್ಕ-ಪಕ್ಕದ ಹೋಟೆಲ್ ಹಾಗೂ ಅಂಗಡಿಗಳ ಬಳಿ ಭೇಟಿಯಾದ ವ್ಯಕ್ತಿಗಳು ? ಹೀಗೆ ಹಲವು ಪ್ರಶ್ನೆಗಳನ್ನು ಆಧರಿಸಿ ಮಹಜರು ನಡೆಸಲಾಯಿತು.

ಎಲ್ಲ ಪ್ರಕ್ರಿಯೆಯನ್ನೂ ಫೋಟೊ ಹಾಗೂ ವಿಡಿಯೊ ಮೂಲಕ ದಾಖಲಿಸಿಕೊಳ್ಳಲಾಯಿತು.

'ಪ್ರಕರಣ ಬೆಳಕಿಗೆ ಬಂದ ಮಾರ್ಚ್ 2ರಂದು ರಾತ್ರಿಯೇ ಯುವತಿ ಕೊಠಡಿ ತೊರೆದಿದ್ದರು. ಆದರೆ, ಅವರ ಬಟ್ಟೆ ಹಾಗೂ ಗೃಹ ಬಳಕೆ ವಸ್ತುಗಳು ಅಲ್ಲಿಯೇ ಇದ್ದವು. ಆ ಪೈಕಿ ಬಟ್ಟೆಗಳು ಸೇರಿದಂತೆ ಕೆಲ ದಾಖಲೆಗಳನ್ನೂ ಸುಪರ್ದಿಗೆ ಪಡೆಯಲಾಯಿತು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಆರೋಪಿಗೆ ನೋಟಿಸ್: ಯುವತಿ ನೀಡಿದ್ದ ದೂರು ಆಧರಿಸಿ ದಾಖಲಾಗಿರುವ ಎಫ್‌ಐಆರ್ ವಿಚಾರಣೆಗೆ ಇತ್ತೀಚೆಗಷ್ಟೇ ಹಾಜರಾಗಿದ್ದ ರಮೇಶ ಜಾರಕಿಹೊಳಿ ಅವರಿಗೆ ಮತ್ತೊಂದು ನೋಟಿಸ್ ನೀಡಲಾಗಿದೆ.

'ಪ್ರಕರಣದಲ್ಲಿ ನಿಮ್ಮಿಂದ ಹಲವು ಅಗತ್ಯ ಮಾಹಿತಿ ಬೇಕಿದೆ. ಹೀಗಾಗಿ, ಶುಕ್ರವಾರ (ಏಪ್ರಿಲ್ 2) ಬೆಳಿಗ್ಗೆ 10 ಗಂಟೆಗೆ ವಿಚಾರಣೆಗಾಗಿ ಆಡುಗೋಡಿಯಲ್ಲಿರುವ ಸಿಸಿಬಿ ತಾಂತ್ರಿಕ ವಿಭಾಗದ ವಿಶೇಷ ಕೊಠಡಿಗೆ ಹಾಜರಾಗಬೇಕು. ಇಲ್ಲದಿದ್ದರೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ' ಎಂದು ನೋಟಿಸ್‌ನಲ್ಲಿ ತನಿಖಾಧಿಕಾರಿ ಎಚ್ಚರಿಸಿದ್ದಾರೆ.

ಸಿ.ಡಿ. ಸೂತ್ರಧಾರರಿಗಾಗಿ ಶೋಧ

'ವಿಡಿಯೊ ಚಿತ್ರೀಕರಣ ಮಾಡಲು ಸುದ್ದಿವಾಹಿನಿಯ ಕೆಲ ವ್ಯಕ್ತಿಗಳು, ಯುವತಿಗೆ ಸಹಾಯ ಮಾಡಿದ್ದ ಮಾಹಿತಿ ತನಿಖೆಯಿಂದ ಸಿಕ್ಕಿದೆ. ಆ ವ್ಯಕ್ತಿಗಳ ಬಗ್ಗೆ ಈಗಾಗಲೇ ಸಾಕಷ್ಟು ಮಾಹಿತಿ ಕಲೆಹಾಕಲಾಗಿದ್ದು, ಅವರಿಗಾಗಿ ಚುರುಕಿನ ಶೋಧ ನಡೆಯುತ್ತಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಸಿ.ಡಿ. ಚಿತ್ರೀಕರಣ ಹಾಗೂ ಅದನ್ನು ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದ ತಂಡವೇ ಬೇರೆ ಇದೆ. ಯುವತಿಯಿಂದಲೂ ಆ ಬಗ್ಗೆ ಮಾಹಿತಿ ಸಿಕ್ಕಿದೆ. ಈಗ ಆ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ತನಿಖೆಯಿಂದಲೇ ಎಲ್ಲರೂ ನಿಖರವಾಗಬೇಕಿದೆ' ಎಂದೂ ತಿಳಿಸಿವೆ.

ಬಹಿರಂಗವಾಗಿ ಕಾಣಿಸಿಕೊಳ್ಳದ ರಮೇಶ ಜಾರಕಿಹೊಳಿ

ಸಂತ್ರಸ್ತೆ ನ್ಯಾಯಾಲಯಕ್ಕೆ ಹೇಳಿಕೆ ನೀಡಿದಾಗಿನಿಂದಲೂ ರಮೇಶ ಜಾರಕಿಹೊಳಿ ಬಹಿರಂಗವಾಗಿ ಎಲ್ಲಿಯೂ ಕಾಣಿಸುತ್ತಿಲ್ಲ. ಮಾರ್ಚ್ 30ರಂದು ಕೊಲ್ಲಾಪುರದ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಅವರು, ಆ ನಂತರ ಎಲ್ಲಿದ್ದಾರೆ ಎಂಬ ಮಾಹಿತಿಯೂ ಯಾರಿಗೂ ಸಿಗುತ್ತಿಲ್ಲ. ಅವರ ಬಗ್ಗೆ ಎಸ್‌ಐಟಿ ತಂಡವೂ ಮಾಹಿತಿ ಕಲೆಹಾಕುತ್ತಿದೆ.

'ಶುಕ್ರವಾರ ಬೆಳಿಗ್ಗೆ ರಮೇಶ ವಿಚಾರಣೆಗೆ ಬರಬಹುದೆಂದು ಕಾಯುತ್ತಿದ್ದೇವೆ. ಬಂದರೆ, ವಿಚಾರಣೆ ನಡೆಸಲಾಗುವುದು. ಇಲ್ಲದಿದ್ದರೆ, ಮುಂದಿನ ಕಾನೂನು ಕ್ರಮ' ಎಂದೂ ಎಸ್‌ಐಟಿ ಮೂಲಗಳು ಹೇಳಿವೆ.

'ಆರೋಪಿ ಬಂಧಿಸದಿದ್ದರೆ ನ್ಯಾಯಾಲಯ ಮೊರೆ'

'ಪ್ರಕರಣ ದಾಖಲಾದ ನಂತರ ಸಿಆರ್‌ಪಿಸಿ 164ರಡಿ ಸಂತ್ರಸ್ತೆ ಹೇಳಿಕೆ ನೀಡಿದ್ದಾರೆ. ಅವರನ್ನು ವೈದ್ಯಕೀಯ ಪರೀಕ್ಷೆಗೂ ಒಳಪಡಿಸಲಾಗಿದೆ. ಇಷ್ಟಾದರೂ ಆರೋಪಿ ರಮೇಶ ಜಾರಕಿಹೊಳಿ ಬಂಧನವಾಗಿಲ್ಲ. ಅವರನ್ನು ಕೂಡಲೇ ಬಂಧಿಸದಿದ್ದರೆ, ನ್ಯಾಯಾಲಯದ ಮೊರೆ ಹೋಗುತ್ತೇವೆ' ಎಂದು ಸಂತ್ರಸ್ತೆ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಡಿಕೆಶಿ ರಾಜೀನಾಮೆ ಪಡೆಯಲೇಬೇಕು'

ಗೋಕಾಕ (ಬೆಳಗಾವಿ ಜಿಲ್ಲೆ): 'ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಆ ಯುವತಿಯ ಪೋಷಕರೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಆರೋಪ ಮಾಡಿದ್ದಾರೆ. ತಂದೆ-ತಾಯಿಯೇ ಹೇಳಿರುವುದರಿಂದ ಅದು ಸತ್ಯವೇ ಇರಬೇಕು. ಹೀಗಾಗಿ, ನೈತಿಕ ಹೊಣೆ ಹೊತ್ತು ಶಿವಕುಮಾರ್ ರಾಜೀನಾಮೆ ನೀಡಬೇಕು' ಎಂದು ಕಾಂಗ್ರೆಸ್ ಮುಖಂಡ ಲಖನ್ ಜಾರಕಿಹೊಳಿ ಆಗ್ರಹಿಸಿದರು.

ಇಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಶಿವಕುಮಾರ್ ವಿರುದ್ಧದ ಆರೋಪವನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿ, ರಾಜೀನಾಮೆ ಪಡೆದುಕೊಳ್ಳಲೇಬೇಕು. ಆರೋಪ ಕೇಳಿಬಂದ ಕೂಡಲೇ ಸಹೋದರ ರಮೇಶ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅದರಂತೆ ಕೆಪಿಸಿಸಿ ಅಧ್ಯಕ್ಷರೂ ನಡೆದುಕೊಳ್ಳಬೇಕು. ಸತ್ಯಾಸತ್ಯತೆಯು ರಾಜ್ಯದ ಜನರಿಗೆ ಗೊತ್ತಾಗಬೇಕು' ಎಂದರು.

'ರಮೇಶ ಅವರನ್ನು ಈಚೆಗೆ ಬೆಂಗಳೂರಿನಲ್ಲಿ ಭೇಟಿಯಾಗಿ ಧೈರ್ಯ ತುಂಬಿದ್ದೇನೆ. ಇಂಥವು ಬರ್ತವೆ. ಸಹನೆಯಿಂದ ಇರುವಂತೆ ಹೇಳಿದ್ದೇನೆ' ಎಂದು ತಿಳಿಸಿದರು.

'ಸಿ.ಡಿ. ಕಾರ್ಖಾನೆ ಯಾರದು, ನಿರ್ಮಾಪಕರು ಮತ್ತು ನಿರ್ದೇಶಕರು ಯಾರು? ಮಾಡಿಸಿದವರಾರು ಎನ್ನುವುದನ್ನು ಎಲ್ಲ ಪಕ್ಷದವರೂ ಯೋಚಿಸಬೇಕು. ಅಂಥವರೊಂದಿಗೆ ಹುಷಾರಾಗಿ ವೇದಿಕೆ ಹಂಚಿಕೊಳ್ಳಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಎಲ್ಲರಿಗೂ ಕಾದಿದೆ' ಎಂದರು.

'ರಮೇಶ ದೊಡ್ಡದಾಗಿ ಬೆಳೆಯುತ್ತಿದ್ದುದನ್ನು ಸಹಿಸದೆ ಷಡ್ಯಂತ್ರ ಮಾಡಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

'ಶತ್ರು ಪಕ್ಕದಲ್ಲೇ ಎನ್ನುವಂತಾಗಿದೆ. ಮಸ್ಕಿ, ಬಸವಕಲ್ಯಾಣ ವಿಧಾನಸಭೆ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೇ ನೇರ ಪರಿಣಾಮ ಆಗಲಿದೆ. ಯಾರನ್ನು ನಂಬಿ ಯಾರು ಪ್ರಚಾರಕ್ಕೆ ಹೋಗುವುದು? ಡಿಕೆಶಿ ರಾಜೀನಾಮೆ ಕೊಟ್ಟರೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಒಳ್ಳೆಯದಾಗುತ್ತದೆ.

ಇಲ್ಲವಾದಲ್ಲಿ, ಪ್ರಚಾರ ಮಾಡಲು ಕಾರ್ಯಕರ್ತರಿಗೆ ಮುಜುಗರ ಆಗುತ್ತದೆ' ಎಂದು ಹೇಳಿದರು.

'ಮಗಳ ಭೇಟಿಗೆ ಅವಕಾಶ ಕಲ್ಪಿಸಿ'

ವಿಜಯಪುರ: ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸಿಡಿ ಪ್ರಕರಣದ ಸಂತ್ರಸ್ತ ಯುವತಿಯ ತಂದೆ, ತಾಯಿ ಮತ್ತು ಸಹೋದರ ಜಿಲ್ಲೆಯಲ್ಲಿರುವ ಅವರ ಅಜ್ಜಿ ಮನೆಗೆ ಗುರುವಾರ ಬೆಳಿಗ್ಗೆ ಬಂದಿದ್ದು, ಸ್ಥಳೀಯ ಪೊಲೀಸರು ಭದ್ರತೆ ಒದಗಿಸಿದ್ದಾರೆ.

'ಮಗಳನ್ನು ಮನೆಗೆ ಕಳಿಸುವಂತೆ ಆದೇಶಿಸಲಿ, ಮಗಳ ಜತೆ ಮಾತನಾಡಲು ಅವಕಾಶ ಕಲ್ಪಿಸಬೇಕು. ಎಸ್‌ಐಟಿಯವರು ಮಗಳ ಭೇಟಿಗೆ ಅವಕಾಶ ಕಲ್ಪಿಸಿದರೆ ಬೆಂಗಳೂರಿಗೆ ಹೋಗುತ್ತೇವೆ' ಎಂದು ಯುವತಿಯ ತಂದೆ ಮನವಿ ಮಾಡಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನಾನು, ನನ್ನ ಕುಟುಂಬ ಯಾವುದೇ, ಯಾರದೇ ಪ್ರಭಾವಕ್ಕೂ ಒಳಗಾಗಿಲ್ಲ. ಇಲ್ಲಿಯವರೆಗೆ ಮಗಳು ಕುಟುಂಬದವರ ಜತೆ ಫೋನ್‌ನಲ್ಲಿ ಮಾತನಾಡಿದ ಎಲ್ಲ ರೆಕಾರ್ಡ್‌ಗಳನ್ನು ಎಸ್‌ಐಟಿಗೆ ನೀಡಿದ್ದೇವೆ, ಈಗ ಅವುಗಳನ್ನು ಬಹಿರಂಗಪಡಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸಿಡಿ ಪ್ರಕರಣಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಕಾರಣ. ಆಕೆಯನ್ನು ನಮ್ಮ ಜೊತೆ ಕಳುಹಿಸಬೇಕು' ಎಂದು ಯುವತಿಯ ಸಹೋದರ ಮನವಿ ಮಾಡಿದರು.

ಯುವತಿಯ ಪೋಷಕರು ಅಜ್ಜಿ ಮನೆಗೆ ಬಂದಿರುವ ಸುದ್ದಿ ತಿಳಿಯುತ್ತಿದ್ದಂತೆ ಸುತ್ತಮುತ್ತಲಿನ ಜನರು ಅವರ ಮನೆಯ ಬಳಿ ನೆರೆದಿದ್ದರು. ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಈ ಹಿಂದೆ ಪೊಲೀಸರು ಎರಡು ಬಾರಿ ನೋಟಿಸ್ ಅನ್ನು ಯುವತಿಯ ಅಜ್ಜಿ ಮನೆ ಬಾಗಿಲಿಗೆ ಅಂಟಿಸಿದ್ದರು. ಅನಾರೋಗ್ಯದಿಂದ ಬಳಲುತ್ತಿರುವ ಅಜ್ಜಿಯ ಆರೈಕೆಗಾಗಿ ಯುವತಿಯ ಪೋಷಕರು ಬಂದಿದ್ದಾರೆ.

ಅರುಣ್‌ಸಿಂಗ್ ಬೇಸರ

ಒಂದನೇ ಪುಟದಿಂದ

ರಾಜ್ಯದಲ್ಲಿ ಪಕ್ಷದ ಲಕ್ಷಾಂತರ ಕಾರ್ಯಕರ್ತರಿದ್ದಾರೆ. ಸಂಘ ಪರಿವಾರದಲ್ಲೂ ಸಾವಿರಾರು ಸದಸ್ಯರಿದ್ದಾರೆ. ಆದರೆ ಎಲ್ಲರಿಗೂ ಶಾಸಕ, ಸಚಿವ ಸ್ಥಾನ ದೊರೆಯುವುದಿಲ್ಲ. ರಾಜ್ಯ ಘಟಕದ ಅಧ್ಯಕ್ಷ, ಉಪ ಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನ ಸೇರಿದಂತೆ ಇತರ ಜವಾಬ್ದಾರಿಯುತ ಸ್ಥಾನ ಪಡೆದವರು ಪಕ್ಷದ ಶಿಸ್ತನ್ನು ಮೀರಬಾರದು ಎಂದು ಅವರು ಕಿವಿಮಾತು ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರೂ ನಾಯಕತ್ವ ಬದಲಾವಣೆ ಬಗ್ಗೆ ಹೇಳಿಕೆ ನೀಡುತ್ತಾರೆ. ಯಾರೇ ಇರಲಿ, ಪಕ್ಷದ ಹೆಸರಿಗೆ ಧಕ್ಕೆ ತಂದಲ್ಲಿ ಶಿಸ್ತು ಕ್ರಮ ಎದುರಿಸುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಎಚ್ಚರಿಕೆ ನೀಡಲು ಸೂಚನೆ: ಬಹಿರಂಗ ಆರೋಪ ಮಾಡುವವರಿಗೆ ಎಚ್ಚರಿಕೆ ನೀಡುವಂತೆ ಬಿಜೆಪಿ ಹೈಕಮಾಂಡ್, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರಿಗೆ ಸೂಚಿಸಿದೆ.

ಸಂತ್ರಸ್ತೆ ಪರ ವಕೀಲರ 'ವೃತ್ತಿ ನೋಂದಣಿ' ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ.ಪ್ರಕರಣದ ಸಂತ್ರಸ್ತೆಗಿಂತಲೂ ಅವರ ಪರ ವಕೀಲ ಕೆ.ಎನ್.ಜಗದೀಶ್ ಕುಮಾರ್ ಬಗ್ಗೆಯೇ ಹೆಚ್ಚು ಸುದ್ದಿಯಾಗುತ್ತಿದ್ದು, ಅವರ ವಕೀಲ ವೃತ್ತಿ ನೋಂದಣಿ ಬಗ್ಗೆ ಇದೀಗ ಚರ್ಚೆಯಾಗುತ್ತಿದೆ.

'ಕರ್ನಾಟಕ ವಕೀಲರ ಪರಿಷತ್‌ನಲ್ಲಿ ಕೆ.ಎನ್. ಜಗದೀಶ್‌ಕುಮಾರ್ ನೋಂದಣಿ ಮಾಡಿಸಿದ್ದಾರೆಯೇ? ಇಲ್ಲ, ನೋಂದಣಿ ವರ್ಗಾವಣೆ ಮಾಡಿಕೊಂಡಿದ್ದಾರೆಯೇ ? ಇದರ ಮಾಹಿತಿ ಇದ್ದರೆ ತಿಳಿಸಿ. ಆಕಸ್ಮಾತ್ ಎಲ್ಲಾದರೂ ನೋಂದಣಿ ಮಾಡಿಸಿದ್ದರೆ, ಕರ್ನಾಟಕದಲ್ಲಿ ವಕಾಲತ್ತು ಮಾಡಲು ಬರುವುದಿಲ್ಲ' ಎಂದು ವಕೀಲ ಎಸ್. ಬಸವರಾಜ್ ಎಂಬುವರು ಪರಿಷತ್‌ಗೆ ಪತ್ರ ಬರೆದಿದ್ದಾರೆ.

ಅದಕ್ಕೆ ಉತ್ತರಿಸಿರುವ ಪರಿಷತ್ ವ್ಯವಸ್ಥಾಪಕ ಅರುಣ್ ಪೂಜಾರ, 'ಕೆ.ಎನ್. ಜಗದೀಶ್‌ಕುಮಾರ್ ನಮ್ಮ ಪರಿಷತ್‌ನಲ್ಲಿ ನೋಂದಣಿ ಮಾಡಿಸಿಲ್ಲ. ನೋಂದಣಿ ವರ್ಗಾವಣೆಯನ್ನೂ ಪಡೆದಿಲ್ಲ' ಎಂದಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಜಗದೀಶ್‌ಕುಮಾರ್, 'ನಾನು ದೆಹಲಿ ವಕೀಲರ ಪರಿಷತ್ ಸದಸ್ಯ. ಭಾರತೀಯ ವಕೀಲರ ಪರಿಷತ್ ಪರೀಕ್ಷೆ ಸಹ ಎದುರಿಸಿ ವಕೀಲನಾಗಲು ಅರ್ಹತೆ ಪಡೆದಿದ್ದೇನೆ. ವಕೀಲರ ಕಾಯ್ದೆ ಪ್ರಕಾರ, ದೇಶದ ಯಾವುದೇ ನ್ಯಾಯಾಲಯದಲ್ಲಿ ವಕಾಲತ್ತು ಮಾಡಬಹುದು' ಎಂದಿದ್ದಾರೆ.

'ಅತ್ಯಾಚಾರ ಸಂತ್ರಸ್ತೆ ಪರ ನಿಂತಿದ್ದಕ್ಕೆ ನನ್ನ ತೇಜೋವಧೆ ಮಾಡುವ ಕೆಲಸ ನಡೆದಿದೆ. ಇದಕ್ಕೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಸಂತ್ರಸ್ತೆಗೆ ನ್ಯಾಯ ಸಿಗುವವರೆಗೂ ಪ್ರಕರಣ ಕೈಬಿಡುವುದಿಲ್ಲ' ಎಂದು ಅವರು ಹೇಳಿದರು.

'ವಕೀಲರ ಪರಿಷತ್‌ನಲ್ಲಿ ಅಭಿವೃದ್ಧಿ ಸ್ಟಾಂಪ್ ಹಗರಣ'

ಜಗದೀಶ್ ಕುಮಾರ್

'ವಕೀಲರ ಪರಿಷತ್‌ನಿಂದ ₹ 20 ಹಾಗೂ ₹ 30 ಅಭಿವೃದ್ಧಿ ಸ್ಟಾಂಪ್ ಮುದ್ರಿಸಲಾಗುತ್ತದೆ. ಅದನ್ನು ವಕಾಲತ್ತು ಸಮಯದಲ್ಲಿ ಲಗತ್ತಿಸಬೇಕು. ಆದರೆ, ಅದೇ ಸ್ಟಾಂಪ್ ಹೆಸರಿನಲ್ಲೇ ದೊಡ್ಡ ಹಗರಣವೇ ನಡೆದಿದೆ' ಎಂದು ವಕೀಲರಾದ ಜಗದೀಶ್‌ಕುಮಾರ್ ಹಾಗೂ ಮಂಜುನಾಥ್ ಆರೋಪಿಸಿದರು.

ಸಾಮಾಜಿಕ ಜಾಲತಾಣದಲ್ಲಿ ನೇರಪ್ರಸಾರದಲ್ಲಿ ಮಾತನಾಡಿದ ಅವರು, 'ವಕೀಲರಿಗೆ ಯಾವುದೇ ಸೌಕರ್ಯವಿಲ್ಲ. ಅವರ ಕಷ್ಟಕ್ಕೆ ಆರ್ಥಿಕವಾಗಿ ಸ್ಪಂದಿಸಲು ಅಭಿವೃದ್ಧಿ ಸ್ಟಾಂಪ್ ಮಾರಾಟ ಮಾಡಲಾಗುತ್ತಿದೆ. ಆದರೆ, ಸ್ಟಾಂಪ್ ಮುದ್ರಣ ಹಾಗೂ ಮಾರಾಟ ಬಗ್ಗೆ ಯಾವುದೇ ಲೆಕ್ಕ ಪರಿಶೋಧನೆಯೂ ಇದುವರೆಗೂ ಆಗಿಲ್ಲ. ಆ ಬಗ್ಗೆ ದೂರುಗಳೂ ಸಲ್ಲಿಕೆಯಾಗಿವೆ' ಎಂದರು.

'ಲಾಕ್‌ಡೌನ್ ವೇಳೆ ವಕೀಲರು ಕೆಲಸವಿಲ್ಲದೆ ನರಳಿದ್ದಾರೆ. ಸ್ಟಾಂಪ್ ಮಾರಾಟದ ಹಣದಿಂದ ವಕೀಲರಿಗೆ ಸಹಾಯ ಮಾಡಬಹುದಿತ್ತು. ಆದರೆ, ಪರಿಷತ್‌ನಿಂದ ಯಾವುದೇ ಸಹಾಯವೂ ಆಗಲಿಲ್ಲ. ಹೀಗಾದರೆ, ವಕೀಲರು ಸ್ಟಾಂಪ್ ಏಕೆ ಖರೀದಿಸಬೇಕು. ಇದರಲ್ಲಿ ದೊಡ್ಡ ಅಕ್ರಮವಿದ್ದು, ಅದನ್ನು ವಕೀಲರು ಪ್ರಶ್ನಿಸಬೇಕು' ಎಂದೂ ಒತ್ತಾಯಿಸಿದರು.

'ಸಿ.ಡಿ. ಪ್ರಕರಣ ಮುಗಿಯುತ್ತ ಬಂದಿದೆ. ಮುಗಿದ ಕೂಡಲೇ ಪರಿಷತ್ ಅಕ್ರಮಗಳ ವಿರುದ್ಧ ಹೋರಾಟ ಶುರು ಮಾಡುತ್ತೇವೆ. ನಾನು ವಕೀಲನಲ್ಲನೆಂದು ನನ್ನ ನೋಂದಣಿಯನ್ನೇ ನೀವು ಪ್ರಶ್ನಿಸಿದ್ದಿರಲ್ಲ ಬಸವರಾಜ್ ಅವರೇ, ನಿಮ್ಮ ಬಗ್ಗೆಯೂ ನಾನು ಪ್ರಶ್ನಿಸುತ್ತೇನೆ. ದಾಖಲೆ ಸಮೇತ' ಎಂದೂ ಹೇಳಿದರು.

ನಕಲಿ ಸ್ಟಾಂಪ್: ವಕೀಲ ಮಂಜುನಾಥ್, 'ನ್ಯಾಯಾಲಯದಲ್ಲಿ ನಕಲಿ ಸ್ಟಾಂಪ್‌ಗಳೂ ಸಿಗುತ್ತಿವೆ. ಅದು ಎಲ್ಲ ಸದಸ್ಯರಿಗೂ ಗೊತ್ತಿದೆ. ತೆಲಗಿ ರೀತಿಯಲ್ಲೇ ಈ ಹಗರಣವಿದೆ' ಎಂದು ಆರೋಪಿಸಿದರು.

ಬಿ.ಎಸ್. ಯಡಿಯೂರಪ್ಪ ಬಗ್ಗೆ ಅಸಮಾಧಾನ ಇಲ್ಲ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ನನ್ನ ಮತ್ತು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಧ್ಯೆ ಯಾವುದೇ ಅಸಮಾಧಾನವಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಸ್ಪಷ್ಟಪಡಿಸಿದರು.

ಪಕ್ಷದ ವರಿಷ್ಠರಿಗೆ ಬರೆದಿರುವ ಪತ್ರದ ಕುರಿತು ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು ಹೇಳಿಕೊಂಡಿದ್ದೇನೆ. ಇದರಲ್ಲಿ ಅಸಮಾಧಾನದ ಪ್ರಶ್ನೆಯೇ ಇಲ್ಲ. ಇಲಾಖೆಯ ವಿಚಾರಗಳನ್ನು ಚರ್ಚಿಸಲು ರಾಜ್ಯಪಾಲರ ಬಳಿಯಷ್ಟೇ ಅಲ್ಲ; ದೆಹಲಿಗೂ ಹೋಗುತ್ತೇನೆ. ಇದರಲ್ಲೇನೂ ವಿಶೇಷವಿಲ್ಲ' ಎಂದು ಹೇಳಿದರು.

'ಅಲ್ಲದೇ ಗ್ರಾಮೀಣಾಭಿವೃದ್ಧಿ ಇಲಾಖೆಯ ಆಡಳಿತಾತ್ಮಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಿತ್ತು. ಹೀಗಾಗಿ, ರಾಜ್ಯಪಾಲರ ಬಳಿಗೆ ಹೋಗಿ ಚರ್ಚಿಸಿದ್ದೇನೆ. ಅದಕ್ಕೆ ಇಷ್ಟೊಂದು ಪ್ರಾಮುಖ್ಯ ನೀಡುವ ಅವಶ್ಯಕತೆ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮಧ್ಯಪ್ರವೇಶಕ್ಕೆ ಅಧಿಕಾರ ಇಲ್ಲ'

ಒಂದನೇ ಪುಟದಿಂದ

'ಸರ್ಕಾರದಲ್ಲಿ ಅಹಿತಕರ ಬೆಳವಣಿಗೆಗಳು ನಡೆಯುತ್ತಿವೆ ಎಂಬುದು ಮನವರಿಕೆಯಾದರೆ ರಾಜ್ಯ ಸರ್ಕಾರದ ಸಾಂವಿಧಾನಿಕ ಮುಖ್ಯಸ್ಥರಾಗಿ ಮುಖ್ಯಮಂತ್ರಿ ಮತ್ತು ಸಂಬಂಧಿಸಿದ ಸಚಿವರಿಗೆ ನೈತಿಕ ನೆಲೆಯಲ್ಲಿ ಸಲಹೆ ನೀಡುವ ಪ್ರಯತ್ನವನ್ನಷ್ಟೇ ರಾಜ್ಯಪಾಲರು ಮಾಡಬಹುದು.

ಅದನ್ನು ಮೀರಿ ಯಾವುದೇ ರೀತಿಯ ಹಸ್ತಕ್ಷೇಪದ ಅಧಿಕಾರ ರಾಜ್ಯಪಾಲರಿಗೆ ಇಲ್ಲ.

ಇದು ಪೂರ್ಣವಾಗಿ ಸಂಪುಟದ ಒಳಗಿನ ವಿಷಯ. ಮುಖ್ಯಮಂತ್ರಿಗೆ ಎಲ್ಲ ಇಲಾಖೆಗಳ ಮೇಲೂ ಪರಮಾಧಿಕಾರ ಇದೆ ಎಂಬುದು ಸ್ಪಷ್ಟ. ಇತರ ಸಚಿವರಿಗೆ ಸಂಬಂಧಿಸಿದ ಇಲಾಖೆಗಳಲ್ಲಿ ಮುಖ್ಯಮಂತ್ರಿ ನೇರವಾಗಿ ಮಧ್ಯಪ್ರವೇಶ ಮಾಡಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸಂವಿಧಾನ ನೀಡಿದೆ. ಆದರೆ, ಇಂತಹ ಅಧಿಕಾರ ರಾಜ್ಯಪಾಲರಿಗೆ ಮಾತ್ರವಲ್ಲ, ನ್ಯಾಯಾಲಯಕ್ಕೂ ಇಲ್ಲ.

ಪ್ರಕರಣವೊಂದರ ಆರೋಪಿಯ ಖುಲಾಸೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಕಾನೂನು ಸಚಿವರು ಕೈಗೊಂಡ ತೀರ್ಮಾನವನ್ನೇ ಮುಖ್ಯಮಂತ್ರಿಯಾಗಿದ್ದ ಎಸ್. ನಿಜಲಿಂಗಪ್ಪ ರದ್ದು ಮಾಡಿದ್ದರು. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಚಿವರ ಜತೆ ಸಮಾಲೋಚಿಸದೇ ನಿರ್ಧಾರ ಕೈಗೊಂಡಿದ್ದ ಪ್ರಕರಣವೊಂದು ಹೈಕೋರ್ಟ್ ಮುಂದೆ ಬಂದಿತ್ತು. ಏಕ ಸದಸ್ಯ ಪೀಠ ಮುಖ್ಯಮಂತ್ರಿಯ ನಿರ್ಧಾರವನ್ನು ರದ್ದು ಮಾಡಿತ್ತು. ಆದರೆ, ವಿಭಾಗೀಯ ಪೀಠ ಮುಖ್ಯಮಂತ್ರಿಯ ತೀರ್ಮಾನವನ್ನು ಎತ್ತಿ ಹಿಡಿಯಿತು. ಇವು ಮುಖ್ಯಮಂತ್ರಿ ಹೊಂದಿರುವ ಪರಮಾಧಿಕಾರಕ್ಕೆ ಉದಾಹರಣೆಗಳು.

ಬಿ.ವಿ. ಆಚಾರ್ಯ, ಹಿರಿಯ ವಕೀಲ

'ಸಿ.ಎಂ ಇಚ್ಛಿಸಿದರಷ್ಟೇ ಸಚಿವ ಸ್ಥಾನ ಉಳಿದೀತು'

ಒಂದನೇ ಪುಟದಿಂದ

ರಾಜ್ಯ ಸರ್ಕಾರದ ವ್ಯವಹಾರ ನಿರ್ವಹಣೆ ನಿಯಮಗಳಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಸಚಿವರೊಬ್ಬರು ಮುಖ್ಯಮಂತ್ರಿ ವಿರುದ್ಧ ಈ ರೀತಿ ದೂರು ಸಲ್ಲಿಸುವುದಕ್ಕೂ ಕಾನೂನಿನಲ್ಲಿ ಅವಕಾಶಗಳಿಲ್ಲ. ಈಶ್ವರಪ್ಪ ಅವರು ಯಾವ ಆಧಾರದಲ್ಲಿ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೋ ತಿಳಿಯದು.

ಸಂವಿಧಾನದ ಪ್ರಕಾರ ಮುಖ್ಯಮಂತ್ರಿಗೆ ಪರಮಾಧಿಕಾರ ಇದೆ. ಎಲ್ಲ ಸಚಿವರೂ ಮುಖ್ಯಮಂತ್ರಿಯ ಇಚ್ಛೆಗೆ ಅನುಗುಣವಾಗಿ ಸಂಪುಟದಲ್ಲಿ ಇರುತ್ತಾರೆ. ಎಲ್ಲಿಯವರೆಗೆ ಮುಖ್ಯಮಂತ್ರಿ ಬಯಸುತ್ತಾರೋ ಅಲ್ಲಿಯವರೆಗೆ ಮಾತ್ರ ಅವರನ್ನು ಸಂಪುಟದಲ್ಲಿ ಇರಿಸಿಕೊಳ್ಳುವ ಅಧಿಕಾರ ಅವರಿಗೆ ಇದೆ. ಮುಖ್ಯಮಂತ್ರಿ ಇಡೀ ತಂಡದ 'ನಾಯಕ'.

ಯಾವುದೇ ಇಲಾಖೆಗೆ ಸಂಬಂಧಿಸಿದ ಕಡತವನ್ನು ತರಿಸಿಕೊಂಡು ಪರಿಶೀಲನೆ ನಡೆಸುವ, ನಿರ್ದೇಶನ, ಆದೇಶಗಳನ್ನು ನೀಡುವ ಅಧಿಕಾರ ಮುಖ್ಯಮಂತ್ರಿಗೆ ಇದೆ. ಅನುದಾನ ಬಿಡುಗಡೆಯೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ವಿಚಾರದಲ್ಲಿ ನೇರವಾಗಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿ ಹೊಂದಿದ್ದಾರೆ.

ಪ್ರೊ. ರವಿವರ್ಮಕುಮಾರ್, ಹಿರಿಯ ವಕೀಲ

ಬಿಎಸ್‌ವೈ ಬೆನ್ನಿಗೆ 'ಆಪ್ತ' ರ ದಂಡು

ಒಂದನೇ ಪುಟದಿಂದ

'ಈಶ್ವರಪ್ಪ ಮಾತುಕತೆಗೆ ಬಂದರೆ, ಅವರ ಜತೆ ಚರ್ಚಿಸಿ ಸಮಸ್ಯೆ ಇತ್ಯರ್ಥಗೊಳಿಸಲು ಸಿದ್ಧ. ಆದರೆ, ಅವರು ಮಾತುಕತೆಗೆ ಬಯಸುವುದಿಲ್ಲ. ಯಾವತ್ತೂ ಇಲಾಖೆ ಬಗ್ಗೆ ಚರ್ಚೆಗೆ ಬಂದೇ ಇಲ್ಲ ಎಂದು ಯಡಿಯೂರಪ್ಪ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ರಾಜ್ಯಪಾಲರಿಗೆ ದೂರು ಸರಿಯಲ್ಲ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಸವರಾಜ ಬೊಮ್ಮಾಯಿ, 'ಈಶ್ವರಪ್ಪ ಅವರಿಗೆ ಯಾವುದೇ ಅಸಮಾಧಾನ ಇದ್ದರೆ ರಾಜ್ಯಪಾಲರ ಅಂಗಳಕ್ಕೆ ದೂರು ಒಯ್ಯುವುದು ಸರಿಯಲ್ಲ' ಎಂದು ಹೇಳಿದರು.

'ನಮ್ಮದು ಶಿಸ್ತಿನ ಪಕ್ಷವಾಗಿದ್ದು, ಶಿಸ್ತಿನ ಉಲ್ಲಂಘನೆಯಾಗಬಾರದು. ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸರ್ಕಾರ ರಚನೆ ಆಗಿದೆ. ಅವರ ಮಾರ್ಗದರ್ಶನದಲ್ಲಿಯೇ ಕೆಲಸ ಮಾಡುತ್ತಿದ್ದೇವೆ. ಯಾವುದೇ ಸಮಸ್ಯೆ, ಸಂದೇಹಗಳಿದ್ದರೆ ಸಚಿವ ಸಂಪುಟ ಅಥವಾ ಸರ್ಕಾರದ ಇತರ ವೇದಿಕೆಗಳಲ್ಲಿ ಚರ್ಚೆ ಮಾಡಬಹುದು' ಎಂದರು.

'ಅನುದಾನ ಬಿಡುಗಡೆ ಆಗಿಲ್ಲ ಎಂದು ಶಾಸಕರಿಂದ ದೂರುಗಳು ಬಂದ ಕಾರಣ, ಅನುದಾನವನ್ನು ಬೇಗ ಮುಟ್ಟಿಸಲು ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿಯವರು ಅನುದಾನ ಬಿಡುಗಡೆ ಮಾಡಿದ್ದಾರೆ. ಅವರಿಗೆ ಆ ಪರಮಾಧಿಕಾರವಿದೆ' ಎಂದು ಪ್ರತಿಪಾದಿಸಿದರು.

'ಪ್ರವಾಹ ಮತ್ತು ಕೋವಿಡ್ ಕಾರಣದಿಂದ ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿ ಕೆಲಸಗಳು ನಿಂತು ಹೋಗಿವೆ. ಹಣಕಾಸು ಪರಿಸ್ಥಿತಿ ತುಂಬಾ ಕಷ್ಟವಿತ್ತು. 4-5 ತಿಂಗಳಲ್ಲಿ ಚೇತರಿಕೆ ಆಗಿದೆ. ಈ ಹಂತದಲ್ಲಿ ಬದ್ಧ ವೆಚ್ಚವನ್ನು ಪರಿಶೀಲಿಸಿ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿಯವರ ಹಣ ಬಿಡುಗಡೆ ಮಾಡಿದ್ದಾರೆ' ಎಂದು ಬೊಮ್ಮಾಯಿ ಸಮರ್ಥಿಸಿಕೊಂಡರು

ಡಿಸಿಎಂ ಕಾರಜೋಳ ಬೆಂಬಲ: ಪ್ರಜಾತಂತ್ರದಲ್ಲಿ ಯಾವುದೇ ಶಾಸಕರು, ಸಂಸದರು ಮತ್ತು ಜನಪ್ರತಿನಿಧಿಗಳು ಹೆಚ್ಚಿನ ಅನುದಾನ ಕೇಳುವುದು ಸಹಜ. ಸಚಿವರಿಗೆ ಹೆಚ್ಚಿನ ಅನುದಾನ ಕೊಡಲು ಸಾಧ್ಯವಾಗುವುದಿಲ್ಲ. ಮುಖ್ಯಮಂತ್ರಿಗೆ ಕೊಡಲು ಸಾಧ್ಯವಿದೆ ಎಂದು ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದ್ದಾರೆ.

ಮುಖ್ಯಮಂತ್ರಿ ಅನುದಾನ ಬಿಡುಗಡೆ ಮಾಡಿದ ಬಗ್ಗೆ ಪ್ರಶ್ನೆ ಮಾಡುವ ಅಧಿಕಾರ ಸಚಿವರಿಗೆ ಇಲ್ಲ. ನನ್ನ ಇಲಾಖೆಗೆ ಸಂಬಂಧಿಸಿದಂತೆ ಹೆಚ್ಚಿನ ಅನುದಾನ ನೀಡುವಂತೆ ಶಾಸಕರು ಮುಖ್ಯಮಂತ್ರಿ ಅವರನ್ನು ಕೇಳಿದ್ದಾರೆ. ಈ ರೀತಿ ಮುಖ್ಯಮಂತ್ರಿಯವರು ನೇರವಾಗಿ ಹೆಚ್ಚಿನ ಅನುದಾನ ಬಿಡುಗಡೆ ಮಾಡುವುದು ಇದೇ ಮೊದಲಲ್ಲ. ಹಿಂದೆ ಅನೇಕ ಮುಖ್ಯಮಂತ್ರಿಗಳ ಅವಧಿಯಲ್ಲೂ ಬಿಡುಗಡೆ ಆಗಿದೆ ಎಂದು ಕಾರಜೋಳ ಹೇಳಿದ್ದಾರೆ.

ಮುಖ್ಯಮಂತ್ರಿ ಬೆನ್ನಿಗೆ ನಿಂತವರು:
ಗೋವಿಂದ ಕಾರಜೋಳ
ಬಸವರಾಜ ಬೊಮ್ಮಾಯಿ
ಆರ್.ಅಶೋಕ
ಸಿ.ಸಿ.ಪಾಟೀಲ
ಬಿ.ಸಿ.ಪಾಟೀಲ
ಡಾ.ಕೆ.ಸುಧಾಕರ್

ಸರ್ಕಾರ ದುರ್ಬಲ ಆಗಬಾರದು: ಡಾ.ಸುಧಾಕರ್

ಅಭಿವೃದ್ಧಿ ವಿಚಾರದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಮುಖ್ಯಮಂತ್ರಿಯವರಿಗೆ ಅಧಿಕಾರವಿದೆ. ಅಗತ್ಯವಿದ್ದರೆ, ಯಾವುದೇ ಇಲಾಖೆಯ ಕಡತವನ್ನು ತರಿಸಿಕೊಂಡು ನೋಡಬಹುದು. ಮುಖ್ಯಮಂತ್ರಿಯವರ ಜತೆ ಕುಳಿತು ಐದು ನಿಮಿಷ ಮಾತನಾಡಿದರೆ ಸಮಸ್ಯೆ ಬಗೆಹರಿದು ಹೋಗುತ್ತದೆ. ಇದರಿಂದ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಆಗುವುದನ್ನೂ ತಪ್ಪಿಸಬಹುದಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಯಾವುದೇ ಹೆಜ್ಜೆ ಇಡಬೇಕಾದರೂ ಗಂಭೀರವಾಗಿ ಯೋಚನೆ ಮಾಡಬೇಕು. ಬಹಿರಂಗವಾಗಿ ಮಾತನಾಡಿ ಸರ್ಕಾರ ಮತ್ತು ಪಕ್ಷವನ್ನು ದುರ್ಬಲಗೊಳಿಸಬಾರದು ಎಂದಿದ್ದಾರೆ.

'ಶೋಭೆ ತರುವುದಿಲ್ಲ':

'ಸಂಪುಟ ಸಭೆಯಲ್ಲಿ ಯಾವುದೇ ವಿಷಯವನ್ನು ಈಶ್ವರಪ್ಪನವರು ಪ್ರಸ್ತಾಪ ಮಾಡದೆ ಈ ರೀತಿ ನೇರವಾಗಿ ಏಕಾಏಕಿ ರಾಜ್ಯಪಾಲರಿಗೆ ದೂರು ಸಲ್ಲಿಸುವುದು ಅವರಿಗೆ ಶೋಭೆ ತರುವಂತಹದ್ದಲ್ಲ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದ್ದಾರೆ.

'ಯಾವುದೇ ತಪ್ಪನ್ನು ಮಾಡದ ಬಿ.ಎಸ್. ಯಡಿಯೂರಪ್ಪ ಅವರು ತಪ್ಪು ಮಾಡಿದ್ದಾರೆ ಎಂದು ಆರೋಪಿಸಿ ರಾಜ್ಯಪಾಲರಿಗೆ ದೂರು ನೀಡಿರುವುದು ಎಷ್ಟು ಸರಿ' ಎಂದು ಅವರು ಪ್ರಶ್ನಿಸಿದ್ದಾರೆ.

ಸರ್ಕಾರದ ವರ್ಚಸ್ಸಿಗೆ ಧಕ್ಕೆ:

ಉಪಚುನಾವಣೆ ಸಂದರ್ಭದಲ್ಲಿ ಈ ರೀತಿ ಆದರೆ ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಆಗುತ್ತದೆ ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

'ನಾವು ಹಲವು ಶಾಸಕರು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಗ್ರಾಮೀಣಾಭಿವೃದ್ಧಿಗೆ ಅನುದಾನ ಬಿಡಬೇಕು ಎಂದು ಮನವಿ ಮಾಡಿದ್ದೆವು. ನಮ್ಮ ಒತ್ತಾಯಕ್ಕೆ ಮಣಿದು, ಅಭಿವೃದ್ಧಿ ಕೆಲಸಗಳು ಬೇಗನೆ ಆಗಬೇಕು ಎಂಬ ಕಾರಣಕ್ಕೆ ಅನುದಾನ ಬಿಡುಗಡೆ ಮಾಡಿದ್ದಾರೆ. ಯಡಿಯೂರಪ್ಪ ಅವರು ಈಶ್ವರಪ್ಪ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿಲ್ಲ' ಎಂದು ಅವರು ಹೇಳಿದರು.

ಸರ್ಕಾರ ವಜಾಕ್ಕೆ ಸಿದ್ದರಾಮಯ್ಯ ಆಗ್ರಹ

ಒಂದನೇ ಪುಟದಿಂದ

'ಬಿಜೆಪಿ ವರಿಷ್ಠರು ಈಶ್ವರಪ್ಪನವರ ಬಾಯಿ ಮುಚ್ಚಿಸಲು ಯತ್ನಿಸದೆ ಇತರ ಸಚಿವರೂ ಮುಕ್ತವಾಗಿ ಮಾತನಾಡಲು ಅವಕಾಶ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಈಶ್ವರಪ್ಪ ಅವರು ರಾಜ್ಯಪಾಲರಿಗೆ ನೀಡಿರುವ ಆರೋಪಪಟ್ಟಿಯನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೂ ಕಳುಹಿಸಿದ್ದಾರೆ. ನಮ್ಮ ಸರ್ಕಾರವನ್ನು ಶೇ 10 ಪರ್ಸೆಂಟ್ ಸರ್ಕಾರ ಎಂದು ಹೀಗಳೆದಿದ್ದ ಪ್ರಧಾನಿಯವರೇ, ನಿಮ್ಮದೇ ಸಚಿವರು ನಿಮ್ಮ ಸರ್ಕಾರದ ಜಾತಕ ಕಳಿಸಿದ್ದಾರೆ. ಪರಿಶೀಲಿಸಿ ನೀವೇ ರೇಟಿಂಗ್ ಕೊಟ್ಟುಬಿಡಿ. 'ನಾ ಖಾವೂಂಗಾ, ನಾ ಖಾನೆ ದೂಂಗಾ' ಎಂಬ ನಿಮ್ಮ ಜಗದ್ವಿಖ್ಯಾತ ಘೋಷಣೆಯನ್ನು 'ಮೈ ಬಿ ಖಾವೂಂಗಾ, ತುಮ್ ಬಿ ಖಾವೋ' ಎಂಬುದಾಗಿ ಬದಲಿಸಿಬಿಡಿ' ಎಂದು ಸಿದ್ದರಾಮಯ್ಯ ವ್ಯಂಗ್ಯವಾಡಿದ್ದಾರೆ.

ಸಿಎಂ ರಾಜೀನಾಮೆ ನೀಡಲಿ: 'ಸಚಿವ ಈಶ್ವರಪ್ಪ ಅವರೇ ಭ್ರಷ್ಟಾಚಾರದ ಆರೋಪ ಮಾಡಿರುವುದರಿಂದ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವಾದರೆ ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದಾರೆ.

'ರಾಜ್ಯದ ಇತಿಹಾಸದಲ್ಲಿ ಸಚಿವರೊಬ್ಬರು ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವುದು ಇದೇ ಮೊದಲು. ₹1,200 ಕೋಟಿ ಅನುದಾನ ಬಿಡುಗಡೆ ಕುರಿತು ಈಶ್ವರಪ್ಪ ಆರೋಪ ಮಾಡಿದ್ದಾರೆ. ಸರ್ಕಾರದ ಒಳಗಿರುವ ಹುಳುಕುಗಳು ಒಂದೊಂದಾಗಿ ಹೊರಬರುತ್ತಿವೆ' ಎಂದರು.

ಬಣ್ಣದೋಕುಳಿ... ರಂಗಪಂಚಮಿ ದಿನವಾದ ಗುರುವಾರ ಹುಬ್ಬಳ್ಳಿಯಲ್ಲಿ ರಂಗೇರಿದ ಬಣ್ಣದೋಕುಳಿಯ ದೃಶ್ಯ
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಭಾರತೀಯ ಸೇನೆಗೆ ಪ್ರಮೀಳಾ ಪಡೆ

ಒಂದನೇ ಪುಟದಿಂದ

ಸಮಾನ ಸಮರಾಭ್ಯಾಸ: ಪುರುಷ ಯೋಧರಿಗೆ ಸಮನಾದ ಸಮರಾಭ್ಯಾಸಗಳನ್ನು ಇವರು ಕಲಿತಿದ್ದಾರೆ. ಗುಂಪು ಘರ್ಷಣೆ, ಪ್ರಾಕೃತಿಕ ವಿಕೋಪ ನಿರ್ವಹಣೆ ಯಂತಹ ಕಾರ್ಯಗಳ ಜೊತೆಗೆ ಯಾವುದೇ ಗಡಿಯಲ್ಲಿ, ಯುದ್ಧಗಳಲ್ಲಿ ಕಾರ್ಯನಿರ್ವಹಿಸುವಲ್ಲಿ ಸಮರ್ಥರಾಗಿರುವಂತೆ ಇವರಿಗೆ ತರಬೇತಿ ಕೊಡಲಾಗಿದೆ. ದೈಹಿಕ ಕ್ಷಮತೆ ಕಾಯ್ದುಕೊಳ್ಳುವುದು, ಶಸ್ತ್ರಾಸ್ತ್ರ ಬಳಕೆ, ಸಮರಾಭ್ಯಾಸ, ಈಜು, ಚಾಲನಾ ತರಬೇತಿಯನ್ನೂ ನೀಡಲಾಗುತ್ತದೆ. ಅತ್ಯಾಚಾರ, ಆತ್ಮಹತ್ಯೆ, ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳ ತನಿಖೆ ನಡೆಸುವ, ತುರ್ತು ಸಂದರ್ಭದಲ್ಲಿ ಸರ್ಕಾರಿ ಸಂಸ್ಥೆಗಳ ನೆರವು ನೀಡುವ, ವಿಶಾಖ ಮಾರ್ಗದರ್ಶಿ ಸೂತ್ರಗಳ ಅನುಷ್ಠಾನದ ಕುರಿತೂ ಇವರು ತರಬೇತಿ ಪಡೆದಿದ್ದಾರೆ.

ಅಂಕಿ-ಅಂಶಗಳು

10 ಲಕ್ಷ	ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು
2 ಲಕ್ಷ	ನೇಮಕಾತಿ ರ‍್ಯಾಲಿಯಲ್ಲಿ ಭಾಗವಹಿಸಿದವರು
250	ಪರೀಕ್ಷೆ ಬರೆಯಲು ಅರ್ಹರಾದವರು
100	ಪರೀಕ್ಷೆಯಲ್ಲಿ ಉತ್ತೀರ್ಣರಾದವರು
08	ಕರ್ನಾಟಕದ ಮಹಿಳಾ ಯೋಧರ ಸಂಖ್ಯೆ

ಮಹಿಳಾ ಯೋಧರ ಕಾರ್ಯವೇನು?

ಯುದ್ಧದ ಸಂದರ್ಭ
- ಸರಿಯಾದ ಸ್ಥಳ ತಲುಪಲು ಶಸ್ತ್ರಾಸ್ತ್ರ ಪಡೆಗಳಿಗೆ ನೆರವು
- ಸೇನಾ ಸರಕು ವಾಹನಗಳ ಸಂಚಾರಕ್ಕೆ ಮಾರ್ಗದರ್ಶನ
- ಯುದ್ಧ ಕೈದಿಗಳ ನಿರ್ವಹಣೆ
- ಶಿಸ್ತು ಪರಿಪಾಲನೆ

ಸಾಮಾನ್ಯ ಕಾಲ
- ಶಿಸ್ತು ಪರಿಪಾಲನೆ
- ಅಪರಾಧ ತಡೆ ಮತ್ತು ಪತ್ತೆ
- ಅಪರಾಧಿಗಳ ಬಂಧನ ಅಥವಾ ವಶಕ್ಕೆ ಪಡೆಯುವುದು
- ಎಲ್ಲ ಮೇಲ್ದರ್ಜೆ ಅಧಿಕಾರಿಗಳಿಗೆ ಸಹಾಯಕರಾಗಿ ಕರ್ತವ್ಯ

ಸೈನ್ಯ ಸೇರಲು ತಂದೆಯೇ ಪ್ರೇರಣೆ

ನಮ್ಮದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ. ತಂದೆ ಸೈನ್ಯದಲ್ಲೇ ಇದ್ದರು. ಮಿಲಿಟರಿ ಸೇರಲು ಅವರೇ ನನಗೆ ಪ್ರೇರಣೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ 89ರಷ್ಟು ಅಂಕ ತೆಗೆದಿದ್ದೆ. ಎನ್‌ಸಿಸಿಗೂ ಸೇರಿದ್ದೆ. ಇಲ್ಲಿ ದೈಹಿಕ ಮತ್ತು ಲಿಖಿತ ಪರೀಕ್ಷೆಯಲ್ಲಿ ಉತ್ತಮ ಪ್ರದರ್ಶನ ತೋರಿದ್ದರಿಂದ ಆಯ್ಕೆಯಾಗಿದ್ದೇನೆ.

ಜ್ಯೋತಿ ಎಂ. ಹಂಚಿನಮನಿ

ಊರಿನವರ ಖುಷಿ ಕಂಡು ಹೆಮ್ಮೆ



ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಕಾಮಸಿನಕೊಪ್ಪ ನಮ್ಮೂರು. ಅಲ್ಲಿ ಪ್ರೌಢಶಾಲೆಯೂ ಇರಲಿಲ್ಲ. ದಿನಕ್ಕೆ 6 ಕಿ.ಮೀ. ನಡೆಯಬೇಕಿತ್ತು. ಎಸ್ಸೆಸ್ಸೆಲ್ಸಿಯಲ್ಲಿ ಶೇ 98 ಅಂಕ ತೆಗೆದುಕೊಂಡು ಉತ್ತೀರ್ಣಳಾದೆ. ಚಿಕ್ಕಪ್ಪ ಸೇನೆಯಲ್ಲಿದ್ದುದರಿಂದ ನನಗೂ ಸೇನೆ ಸೇರಬೇಕೆನಿಸಿತು. ಭಾರತೀಯ ಸೇನೆಯಲ್ಲಿಯೇ ನಮ್ಮದು ಮೊದಲ ತಂಡ ಎಂಬುದನ್ನು ಕೇಳಿದಾಗ ಹೆಮ್ಮೆ ಎನಿಸುತ್ತೆ. ನಿನ್ನಿಂದ ನಮ್ಮೂರಿಗೆ ಹೆಸರು ಬಂತು ಎಂದು ಊರಿನವರು ಹೇಳಿದಾಗಂತೂ ಖುಷಿ ಇಮ್ಮಡಿಯಾಗುತ್ತದೆ. ಈಗ ಬಿಎಸ್‌ಸಿ ನರ್ಸಿಂಗ್ ಓದುತ್ತಿದ್ದೇನೆ.

ಜ್ಯೋತಿ ಬಸಪ್ಪ ಚವಳಗಿ



ರಜನೀಕಾಂತ್

ಚಿತ್ರರಂಗದಲ್ಲಿರುವ ಎಲ್ಲ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ, ಅದರಿಂದ ಹೊರಬಂದ ರಜನೀಕಾಂತ್ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಇವರನ್ನು ಬಂಡಾಯ ನಟ ಎಂದೂ ಕರೆಯಬಹುದು. ಫಾಲ್ಕೆ ಪ್ರಶಸ್ತಿ ಸೂಕ್ತ ವ್ಯಕ್ತಿಗೆ ಸಂದ ಸೂಕ್ತ ಪ್ರಶಸ್ತಿ. ಆದರೆ ಪ್ರಶಸ್ತಿ ಬಂದ ಸಮಯ ಮಾತ್ರ ಸ್ವಲ್ಪ ಅನುಮಾನಕ್ಕೆ ಕಾರಣವಾಗಿದೆ...

ಶಕ್ತಿಯಾಗಿ ಬೆಳೆದ ಬಂಡಾಯ ನಟ

ಗಂಗಾಧರ ಮೊದಲಿಯಾರ್

ಶಿವಾಜಿರಾವ್ ಗಾಯಕವಾಡ್, ಸಿನಿಮಾಗೀಳು ಅಂಟಿಸಿಕೊಂಡ ಉತ್ಸಾಹಿ ಯುವಕ. ಬೆಂಗಳೂರಿನ ಹನುಮಂತನಗರ-ಶಿವಾಜಿನಗರ ಮಾರ್ಗದಲ್ಲಿ ಓಡಾಡುವ ಬಿಟಿಎಸ್ ಬಸ್‌ನಲ್ಲಿ ಟಿಕೆಟ್... ಟಿಕೆಟ್... ಎನ್ನುತ್ತಾ ಆಸಕ್ತಿಯೇ ಇಲ್ಲದ ಕೆಲಸದಲ್ಲಿ ಯಾಂತ್ರಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾಲ. ಬಿಡುವಾದಾಗಲೆಲ್ಲಾ ರಂಗಮಂದಿರದ ಮುಂದೆ, ಗಾಂಧೀನಗರದಲ್ಲಿ ನಿರ್ಮಾಪಕರ ಕಚೇರಿಗಳ ಮುಂದೆ ಎಡತಾಕುತ್ತಾ, ಅವಕಾಶಕ್ಕಾಗಿ ಅಂಗಲಾಚುತ್ತಾ, ತಾತ್ಸಾರ, ಅಪಮಾನಗಳನ್ನು ನುಂಗುತ್ತಾ ಸಿನಿಮಾದಲ್ಲಿ ಅಭಿನಯಿಸುವ ಕನಸನ್ನು ಕಾಣುತ್ತಾ ಓಡಾಡುತ್ತಿದ್ದ ಕಾಲ. ಒಮ್ಮೆ, ಬಿಟಿಎಸ್ ಬಸ್, ಕಾರ್ಪೊರೇಷನ್ ದಾಟಿ, ವಿಧಾನಸೌಧದತ್ತ ಬರುತ್ತಿರುವಾಗ ಕಡೆಯ ಸೀಟ್‌ನಲ್ಲಿ ಕುಳಿತಿದ್ದ ಅಜ್ಜನತ್ತ ಶಿವಾಜಿರಾವ್ ಗಮನ ಹೋಯಿತು. ಅರೆ, ಈ ಅಜ್ಜನನ್ನು ಬಿಟ್ಟೆನಲ್ಲಾ ಎಂದು ಅವರತ್ತ ಧಾವಿಸಿ, 'ಎಲ್ಲಿಗೆ ಅಜ್ಜ?' ಎಂದು ಕೇಳಿದರು.

ಅಜ್ಜನ ದೃಷ್ಟಿ ಶಿವಾಜಿರಾವ್ ಅವರತ್ತ ಹೊರಳಿತು. ಆಶೀರ್ವದಿಸುವಂತೆ ಕೈ ತೋರಿದರು. ಇವರನ್ನು ಎಲ್ಲೋ ನೋಡಿದಂತಿದೆಯಲ್ಲ ಎಂಬ ತಾಕಲಾಟದಲ್ಲಿ ಶಿವಾಜಿರಾವ್ ಅವರಿಗೆ ಏನಾಗುತ್ತಿದೆ ಎಂದು ಗೊತ್ತಾಗಲಿಲ್ಲ. ಅಲ್ಲಿಂದ ಮುಂದೆ ಬಂದು ಬಿಟ್ಟರು, ಟಿಕೆಟ್ ಕೊಡಲೇ ಇಲ್ಲವಲ್ಲ ಎಂದು ಮತ್ತೆ ಹಿಂದಕ್ಕೆ ಹೊರಳಿ ನೋಡಿದಾಗ ಅಚ್ಚರಿ ಕಾದಿತ್ತು. ಅಲ್ಲಿ ಅಜ್ಜ ಇರಲೇ ಇಲ್ಲ!

ವಾಸ್ತವ ಜಗತ್ತಿಗೆ ಮರಳಿದಾಗ, ಬಸ್‌ನಲ್ಲಿ ದರ್ಶನ ನೀಡಿದ್ದು, ಸಾಕ್ಷಾತ್ ಶ್ರೀ ರಾಘವೇಂದ್ರ ಸ್ವಾಮಿಗಳು ಎಂಬುದು ಶಿವಾಜಿರಾವ್ ಅವರಿಗೆ ಅರಿವಾಯಿತಂತೆ. ಇದನ್ನು 'ಪ್ರಜಾವಾಣಿ' ಸಂದರ್ಶನವೊಂದರಲ್ಲಿ ಅವರೇ ನೆನಪಿಸಿಕೊಂಡಿದ್ದಾರೆ.

ಮರುದಿನವೇ ತಮಿಳು ಚಿತ್ರರಂಗದ ಖ್ಯಾತ ನಿರ್ದೇಶಕ ಕೆ.ಬಾಲಚಂದರ್ ಅವರಿಂದ ಕರೆ ಬಂತು. ಮದ್ರಾಸಿಗೆ ತೆರಳಿ, ಅವರಿಂದಲೇ ರಜನೀಕಾಂತ್ ಎಂದು ನಾಮಕರಣಗೊಂಡು, 'ಅಪೂರ್ವ ರಾಗಂಗಳ್' ಸಿನಿಮಾದಲ್ಲಿ ಪ್ರಮುಖಪಾತ್ರಕ್ಕೆ ಆಯ್ಕೆಗೊಂಡು, ಖಳಛಾಯೆಯ ನಾಯಕ ಪಾತ್ರದಲ್ಲೇ ಯಶಸ್ಸು ಕಂಡರಲ್ಲದೆ, ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರರಾದರು. ಯಶಸ್ಸು ಅವರನ್ನು ಹಿಂಬಾಲಿಸಿತು. ಅದೇ ದಾರಿಯಲ್ಲಿ ಸೂಪರ್‌ಸ್ಟಾರ್ ಪಟ್ಟವೂ ಸಿಕ್ಕಿತು. ರಾಜಕೀಯವಾಗಿಯೂ ಬಲಾಢ್ಯರಾದರು. ಒಂದು ಶಕ್ತಿಯಾಗಿ ಬೆಳೆದರು. ಏಷ್ಯಾದಲ್ಲಿ ಜಾಕಿಚಾನ್ ನಂತರ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ನಟ ಎಂಬ ಶಿಖರ ತಲುಪಿದರು.

ತಮ್ಮ ಬೆಳವಣಿಗೆಗೆ ಅಂದು ಬಿಟಿಎಸ್‌ನಲ್ಲಿ ಕಂಡ ರಾಘವೇಂದ್ರರೇ ಕಾರಣ ಎಂದು ರಜನಿ ಭಾವಿಸಿದ್ದಾರೆ. ಅದಕ್ಕಾಗಿಯೇ ಅವರ ನೂರನೇ ಚಿತ್ರ 'ಶ್ರೀ ರಾಘವೇಂದ್ರರ್' ನಿರ್ಮಿಸಿ ಕಾಣಿಕೆ ಸಲ್ಲಿಸಿದ್ದಾರೆ.

> **ರಜನೀಕಾಂತ್ ಅಂದುಕೊಂಡಂತೆಯೇ ನಡೆದಿದ್ದರೆ ಅವರು ಇಷ್ಟೊತ್ತಿಗೆ ಚುನಾವಣಾ ಕಣದಲ್ಲಿ ದೂಳೆಬ್ಬಿಸಬೇಕಿತ್ತು**

ಭಾರತೀಯ ಚಿತ್ರರಂಗದಲ್ಲಿ ಅತ್ಯಂತ ವರ್ಣಮಯ ಪುಟಗಳನ್ನು ಹೊಂದಿರುವ ರಜನೀಕಾಂತ್ ಅವರಿಗೆ ಪ್ರತಿಷ್ಠಿತ 51ನೇ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಗೌರವ ಸಂದಿದೆ. ಇಡೀ ದೇಶದ ಎಲ್ಲಕಡೆಯಿಂದ ಅಭಿನಂದನೆಗಳ ಮಹಾಪೂರ ಹರಿದುಬಂದಿದೆ. ದೇಶವೇ ಸಂಭ್ರಮಿಸುವುದಕ್ಕೆ ಕಾರಣವಿದೆ. ಅವರನ್ನು ಎಲ್ಲರೂ ನಮ್ಮವರು ಎಂದೇ ಭಾವಿಸಿದ್ದಾರೆ. ಬೆಂಗಳೂರಿನಲ್ಲಿ ಹುಟ್ಟಿ (ಜನನ: 1950) ಬೆಳೆದು, ವೃತ್ತಿಯಲ್ಲಿದ್ದು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ ಈ ಕಾರಣದಿಂದ ಅವರು ನಮ್ಮವರು. ಪುಟ್ಟಣ್ಣ ಕಣಗಾಲ್ ಅವರ ನಿರ್ದೇಶನದ 'ಕಥಾಸಂಗಮ'ದಲ್ಲಿ (1975) ಗಮನಸೆಳೆಯುವ ಪಾತ್ರದಲ್ಲಿ ಕಾಣಿಸಿಕೊಂಡರು. ಸಹೋದರರ ಸವಾಲ್ (1977), ಗಲಾಟೆ ಸಂಸಾರ (1977), ಕಿಲಾಡಿ ಕಿಟ್ಟ (1978) ಚಿತ್ರಗಳಲ್ಲಿ ಸವಾಲು ಹಾಕುವ ಪಾತ್ರಗಳಲ್ಲಿ ನಟಿಸಿದರು. ಹೀಗಾಗಿ ಅವರಿಗೆ ಕನ್ನಡದ ನಂಟು. ಅವರದು ಮರಾಠಿ ಮಾತೃಭಾಷೆ ಆಗಿರುವುದರಿಂದ ಮರಾಠಿಗರಲ್ಲಿ ಸಂಭ್ರಮ. 'ಅಂಧಾ ಕಾನೂನ್' ಹಿಂದಿ ಚಿತ್ರದಲ್ಲಿ ಚಕಿತಗೊಳಿಸುವ ಅಭಿನಯದಿಂದಾಗಿ ಹಿಂದಿ ಪ್ರಾಂತ್ಯದಲ್ಲೂ ನೆಚ್ಚಿನ ನಟ. ರೋಬೊ, 2.0 ಸಿನಿಮಾ ಕೂಡ ತಾಂತ್ರಿಕ ವೈಭವದಿಂದ ಹಾಲಿವುಡ್ ಚಿತ್ರಗಳಿಗೆ ಸರಿಸಮನಾಗಿ ತಯಾರಾಗಿ ರಜನೀಕಾಂತ್ ಮನೆಮನೆ ಮಾತಾದರು. ಆಂಧ್ರದಲ್ಲೂ ಅವರಿಗೆ ಬೇಡಿಕೆ. ಮಲಯಾಳಂ ಪ್ರೇಕ್ಷಕರಿಗೂ ಪ್ರಿಯ. ಅಷ್ಟೇ ಏಕೆ ಜಪಾನಿಯರಿಗೂ ರಜನೀ ಎಂದರೆ ಅಚ್ಚುಮೆಚ್ಚು. 'ಮುತ್ತು' ಎಂಬ ರಜನೀ ಅಭಿನಯದ ಚಿತ್ರ ಜಪಾನ್‌ನಲ್ಲಿ ಅತ್ಯಧಿಕ ಕಲೆಕ್ಷನ್ ಮಾಡಿದ ಚಿತ್ರವಾಗಿ ದಾಖಲೆ ಸೃಷ್ಟಿಸಿದೆ. ಅಲ್ಲಿಗೆ ಫಾಲ್ಕೆ ಪ್ರಶಸ್ತಿ ಸೂಕ್ತ ವ್ಯಕ್ತಿಗೆ ಸಂದ ಸೂಕ್ತ ಪ್ರಶಸ್ತಿ. ಆದರೆ ಪ್ರಶಸ್ತಿ ಬಂದ ಸಮಯ ಮಾತ್ರ ಸ್ವಲ್ಪ ಅನುಮಾನಕ್ಕೆ ಕಾರಣವಾಗಿದೆ.

ರಾಜಕೀಯ ಲೆಕ್ಕಾಚಾರದ ಪ್ರಕಾರ, ರಜನೀಕಾಂತ್ ಅಂದುಕೊಂಡಂತೆಯೇ ನಡೆದಿದ್ದರೆ ಅವರು ಇಷ್ಟೊತ್ತಿಗೆ ಚುನಾವಣಾ ಕಣದಲ್ಲಿ ದೂಳೆಬ್ಬಿಸಬೇಕಿತ್ತು. ಡಿಎಂಕೆ ಮತ್ತು ಅಣ್ಣಾ ಡಿಎಂಕೆಗೆ ಪರ್ಯಾಯ ಶಕ್ತಿಯಾಗಿ ಪಕ್ಷ ಕಟ್ಟುವ ತರಾತುರಿಯಲ್ಲಿ ಡಿಸೆಂಬರ್‌ನಲ್ಲಿ ಪಕ್ಷ ಘೋಷಿಸುವ ಹೇಳಿಕೆ ನೀಡಿದ್ದ ರಜನಿ, ಆರೋಗ್ಯದ ಕಾರಣ ನೀಡಿ ಹಿಂದೆ ಸರಿದರು. ಮೋದಿ ಬಗ್ಗೆ ಒಲವು ಇರುವ ಲಕ್ಷಣಗಳನ್ನು ಆಗಾಗ ತೋರಿಸುತ್ತಿದ್ದ ರಜನೀ, ಯುದ್ಧರಂಗದಿಂದ ಹಿಂದೆ ಸರಿಯಲು ನಿಜವಾದ ಕಾರಣ ನಿಗೂಢ. ಆದರೆ ಮತದಾನಕ್ಕೆ ದಿನಗಳು ಸಮೀಪಿಸುತ್ತಿರುವಾಗ ಪ್ರಕಟವಾದ ಪ್ರಶಸ್ತಿ ಕಾಕತಾಳೀಯವೋ, ರಾಜಕೀಯ ದಾಳವೋ ಅರ್ಥವಾಗುವುದಿಲ್ಲ.

ಚಿತ್ರರಂಗದಲ್ಲಿರುವ ಎಲ್ಲ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ, ಅದರಿಂದ ಹೊರಬಂದು ರಜನೀಕಾಂತ್ ದಾಖಲೆ ಸೃಷ್ಟಿಸಿದ್ದಾರೆ. ಇವರನ್ನು ಬಂಡಾಯ ನಟ ಎಂದೂ ಕರೆಯಬಹುದು. ನಾಯಕ ನಟನೊಬ್ಬ ರಾಮನಂತೆಯೇ ಇರಬೇಕು ಎಂಬ ಚೌಕಟ್ಟನ್ನು ಒಡೆದು ಬಿಸಾಕಿದ ನಟ ರಜನೀಕಾಂತ್. ಕೆದರಿದ ತಲೆ, ಗುಂಡಿಹಾಕದ ಷರ್ಟು, ಸದಾ ಬಾಯಲ್ಲಿ ಸಿಗರೇಟು, ಸುರುಳಿಸುರುಳಿಯಾಗಿ ಬಿಡುವ ಹೊಗೆ, ಕೂಲಿಂಗ್‌ಗ್ಲಾಸ್, ಕುರುಚಲು ಗಡ್ಡ ಹೀಗೆ ಒರಟು ಪಾತ್ರದಲ್ಲೇ ಜನರನ್ನು ಸೆಳೆದ ನಟ. ಖಳ ಇಮೇಜನ್ನೇ ಜನ ಇವರಿಂದ ಬಯಸುತ್ತಿದ್ದರು. ಅದೇ ಇಮೇಜು ಅವರನ್ನು 'ಸ್ಟೈಲ್‌ಕಿಂಗ್' ಆಗಿ ಪರಿವರ್ತಿಸಿತು. ಸಿನಿಮಾದಲ್ಲಿ ಹೀಗೆ. ಇನ್ನು ಹೊರಜಗತ್ತಿನಲ್ಲೂ ಸರಳತೆ ಇವರದೇ ಶೈಲಿ. ಎಂಜಿಆರ್ ಮೇಕಪ್ ಇಲ್ಲದೆ ಹೊರಗೆ ಕಾಲಿಡುತ್ತಿರಲಿಲ್ಲ. ರಜನೀಕಾಂತ್ ಬೋಳುತಲೆಯಲ್ಲೇ ಓಡಾಡುತ್ತಿದ್ದಾರೆ. ಗಡ್ಡವನ್ನೂ ತೆಗೆಯುವುದಿಲ್ಲ. ಈ ಸರಳತೆಯೇ ಅವರನ್ನು ಸೂಪರ್ ಸ್ಟಾರ್ ಪಟ್ಟಕ್ಕೆ ಕರೆದೊಯ್ದಿದೆ.

ಇನ್ನು ನಿರ್ಮಾಪಕರಿಗೂ, ವಿತರಕರಿಗೂ ಅವರು ಮಹಾದಾನಿ. ಅವರದೇ ನಿರ್ಮಾಣದ 'ಬಾಬಾ' ಗಳಿಕೆಯಲ್ಲಿ ವಿಫಲವಾದಾಗ ವಿತರಕರಿಗೆ ಆದ ನಷ್ಟವನ್ನು ಭರಿಸಿದ್ದರು. ಶಿವಾಜಿಗಣೇಶನ್ ಅವರ ಮೇಲಿನ ಅಭಿಮಾನದಿಂದಾಗಿ ಅವರ ಪುತ್ರ ಶಿವಾಜಿ ಪ್ರಭು ನಿರ್ಮಿಸಿದ 'ಚಂದ್ರಮುಖಿ' ಚಿತ್ರಕ್ಕೆ ಒಂದು ರೂಪಾಯಿ ಸಂಭಾವನೆ ಪಡೆದು ಅಭಿನಯಿಸಿದರು. ಈ ಚಿತ್ರ ತಮಿಳು ಚಿತ್ರರಂಗದಲ್ಲಿ ದಾಖಲೆ ಪ್ರದರ್ಶನ ಕಂಡಿತು. 63 ವರ್ಷಗಳ ಹಿಂದೆ 'ಹರಿದಾಸ' ಎಂಬ ಚಲನಚಿತ್ರ ಸತತವಾಗಿ 112 ವಾರಗಳ ಕಾಲ ಪ್ರದರ್ಶನ ಕಂಡು ದಾಖಲೆ ಸೃಷ್ಟಿಸಿತು. ರಜನೀ ಅಭಿನಯದ 'ಚಂದ್ರಮುಖಿ' ಆ ದಾಖಲೆಯನ್ನು ಮುರಿಯಿತು. 70ನೇ ವಯಸ್ಸಿನಲ್ಲೂ ರಜನೀಕಾಂತ್ ಕ್ರಿಯಾಶೀಲ. ಕಬಾಲಿ, ಪೇಟಾ, ಕಾಲಾ ಮೊದಲಾದ ಚಿತ್ರಗಳು ಒಂದರ ಹಿಂದೆ ಒಂದರಂತೆ ಬಂದಿವೆ. ಬಸ್ ಕಂಡಕ್ಟರ್ ಒಬ್ಬ ಈ ರೀತಿ ಒಂದು ಶಕ್ತಿಯಾಗಿ ಬೆಳೆದದ್ದೇ ಸೋಜಿಗದ ಬೆಳವಣಿಗೆ. ❖

ಒಟಿಟಿಯಲ್ಲಿ 'ಲೆಗಸಿ ಆಫ್ ಲೈಸ್'

ಬೆಂಗಳೂರು ಮೂಲದ ಪ್ರೈಮ್ ಒರಿಜಿನಲ್ ಪ್ರೈವೇಟ್ ಲಿಮಿಟೆಡ್ (ನೆಟ್ 5), ತನ್ನ ಮೊದಲ ಚಲನಚಿತ್ರ 'ಲೆಗಸಿ ಆಫ್ ಲೈಸ್' ಅನ್ನು ಏಪ್ರಿಲ್ 2ರಂದು ಇಂಗ್ಲಿಷ್, ಹಿಂದಿ, ತಮಿಳು ತೆಲುಗು ಆವೃತ್ತಿಗಳಲ್ಲಿ ತನ್ನದೇ ನೆಟ್-5 ಒಟಿಟಿ ಮೂಲಕ ಪ್ರಸಾರ ಮಾಡಲು ಸಜ್ಜಾಗಿದೆ. ಚಿತ್ರ ಮಂದಿರಗಳಲ್ಲೂ ತೆರೆ ಕಾಣುತ್ತಿದೆ. ಉಕ್ರೇನಿಯನ್ ಪತ್ರಕರ್ತೆ ಸಶಾ ಸ್ಟೆಪನೆಂಕೊ ಅವರು ರಷ್ಯಾದ ರಹಸ್ಯ ಕಾರ್ಯಾಚರಣೆಗಳ ಬಗ್ಗೆ ಆಘಾತಕಾರಿ ಸತ್ಯವನ್ನು ಬಹಿರಂಗಪಡಿಸಲು ಏಜೆಂಟ್ (X- M16) ಮಾರ್ಟಿನ್ ಬ್ಯಾಕ್ಸ್ಟರ್ ಅವರ ಸಹಾಯವನ್ನು ಕೇಳುತ್ತಾರೆ. ಬೇಹುಗಾರಿಕೆ ಹಾಗೂ ಅದರ ಕುರಿತು ಹೆಚ್ಚಿನ ಮಾಹಿತಿ ಹೊರಜಗತ್ತಿಗೆ ತಿಳಿಯುವಂತಾಗುತ್ತದೆ. ರಾಜಕೀಯ, ಸಾಹಸ ಘಟನೆಗಳ ಸುತ್ತ ಸಿನಿಮಾ ಕಥೆ ಇದೆ.

ನಿರ್ದೇಶಕ: ಆಡ್ರಿಯನ್ ಬೋಲ್, **ಸಾಹಿತ್ಯ:** ಆಡ್ರಿಯಲ್ ಬೋಲ್. ತಾರಾಬಳಗ: ಸ್ಕಾಟ್ ಆಡ್ಕಿನ್ಸ್, ಅನ್ನಾ ಬಟ್ಕೆ ವಿಚ್, ಯುಲಿಯಾ ಸೊಬೋಲ್. ❖

'ಲೆಗಸಿ ಆಫ್ ಲೈಸ್' ಚಿತ್ರದ ಪೋಸ್ಟರ್

'ಅಮೃತಮತಿ' ಚಿತ್ರದಲ್ಲಿನ ನಟನೆಗಾಗಿ ಇತ್ತೀಚೆಗೆ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ಹರಿಪ್ರಿಯಾ ಈ ವರ್ಷ ಚಂದನವನದಲ್ಲೇ ಹಲವು ವಿಭಿನ್ನ ಪಾತ್ರಗಳಿಗೆ ಬಣ್ಣ ಹಚ್ಚುತ್ತಿದ್ದಾರೆ. ಉಪೇಂದ್ರ ಜೊತೆಗೂ ಮೊದಲ ಬಾರಿ ನಟಿಸಲು ಸಜ್ಜಾಗಿರುವ ಅವರು 'ಸಿನಿಮಾ ಪುರವಣಿ'ಯ ಸಂದರ್ಶನ ವೇಳೆ ತಮ್ಮ ಮುಂದಿನ ಪಯಣದ ಬಗ್ಗೆ ಮಾತಿಗಿಳಿದರು

ಫುಲ್ ಬ್ಯುಸಿ ಹರಿಪ್ರಿಯಾ!

ಅಭಿಲಾಷ್ ಪಿ.ಎಸ್.

• 2019ರಲ್ಲಿ ಸಾಲು ಸಾಲು ಚಿತ್ರ, ಸಣ್ಣ ಬಿಡುವಿನ ಬಳಿಕ ಮತ್ತೆ ಹರಿಪ್ರಿಯಾ ಬ್ಯುಸಿಯಾಗಿದ್ದಾರೆ?

2017ರಿಂದ ಹಿಡಿದು 2019ರವರೆಗೆ ಸತತವಾಗಿ ಚಿತ್ರೀಕರಣದಲ್ಲಿ ನಾನು ತಲ್ಲೀನಳಾಗಿದ್ದೆ. 2019ರಲ್ಲಿ ನನ್ನ ಏಳು ಸಿನಿಮಾಗಳು ತೆರೆ ಮೇಲೆ ಬಂದವು. ಪೊಲೀಸ್ ಅಧಿಕಾರಿ, ಕಾಲ್‌ಗರ್ಲ್, ರೆಟ್ರೊ, ಗೃಹಿಣಿ ಹೀಗೆ ಎಲ್ಲ ಚಿತ್ರಗಳೂ ವಿಭಿನ್ನ ಪಾತ್ರಗಳನ್ನು ಹೊಂದಿದ್ದವು. ಬೆಲ್‌ಬಾಟಂ ಚಿತ್ರವೂ ದೊಡ್ಡ ಯಶಸ್ಸು ಕಂಡ ವರ್ಷ 2019. ಮರುವರ್ಷ ಕುಟುಂಬಕ್ಕೆ ಸಮಯ ನೀಡುವ ಸಲುವಾಗಿ ಚಿತ್ರೀಕರಣದಿಂದ ಬಿಡುವು ಪಡೆದು ರಣ್ ಆಫ್ ಕಛ್‌ಗೆ ಹೋಗಿದ್ದೆ. ಪ್ರವಾಸ ನನಗೆ ಬಹಳ ಇಷ್ಟ. ಇದನ್ನು ಮುಗಿಸಿ ಇನ್ನೇನು ಚಿತ್ರೀಕರಣದಲ್ಲಿ ಭಾಗವಹಿಸಬೇಕು ಎನ್ನುವಷ್ಟರಲ್ಲಿ ಲಾಕ್‌ಡೌನ್ ಪ್ರಾರಂಭವಾಗಿತ್ತು. ಈ ಸಂದರ್ಭದಲ್ಲಿ ಬಹಳ ಬೇಜಾರಾಗಿತ್ತು. ಬಿಡುವು ಬೇಡ ಎಂದರೂ ಲಾಕ್‌ಡೌನ್‌ನಲ್ಲಿ ಮನೆಯಲ್ಲೇ ಇರುವುದು ಅನಿವಾರ್ಯವಾಗಿತ್ತು. ಸತತ 14 ವರ್ಷದಿಂದ ಕನ್ನಡ, ತಮಿಳು, ತೆಲುಗು, ಮಲಯಾಳಂ ಚಿತ್ರರಂಗದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಲೇ ಬಂದಿದ್ದೇನೆ. ನಾನಾಗಿ ನಾನೇ ಚಿತ್ರೀಕರಣದಿಂದ ಬಿಡುವು ಪಡೆದಿದ್ದೇನೇ ಹೊರತು ಅವಕಾಶಗಳು ಕೈತುಂಬಾ ಬರುತ್ತಲಿವೆ.

• ಹರಿಪ್ರಿಯಾ ಬರಹಗಾರ್ತಿಯಾಗಿದ್ದು ಹೇಗೆ?

ಲಾಕ್‌ಡೌನ್ ಸಮಯವನ್ನು ಒಳ್ಳೆಯ ಕೆಲಸಕ್ಕೆ ಉಪಯೋಗಿಸಿಕೊಂಡೆ. ಸುಮ್ಮನೆ ಕೂರದೆ ನನ್ನೊಳಗಿದ್ದ ಬರೆಯುವ ಹವ್ಯಾಸವನ್ನು ಮತ್ತೆ ಪ್ರಾರಂಭಿಸಿದೆ. ಬ್ಲಾಗ್ ಮೂಲಕ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ನನ್ನ ಜೀವನದ ಕಥೆ ಬರೆದೆ. ನಾನೇನು ಖ್ಯಾತ ಬರಹಗಾರ್ತಿ ಅಲ್ಲ. ನನ್ನ ಅನುಭವಗಳನ್ನು ಬರೆದೆ. ಕಲಾವಿದ ಎಂದ ಮೇಲೆ ಜನರಿಗೆ ಮನರಂಜನೆ ನೀಡುವುದು ನಮ್ಮ ಕರ್ತವ್ಯ. ಅವರಿಗೆ ಹೊಸ ಸಂದೇಶ ನೀಡುವುದು, ಯುವಜನತೆಗೆ ಕಿವಿಮಾತು, ಪ್ರೇಕ್ಷಕರ ಜೊತೆ ನಿರಂತರ ಸಂಪರ್ಕದಲ್ಲಿ ಇರುವುದು ಮುಖ್ಯ. ಲಾಕ್‌ಡೌನ್ ಸಂದರ್ಭದಲ್ಲಿ ಬರವಣಿಗೆ ಮುಖಾಂತರ ಹೊಸ ಪ್ರೇಕ್ಷಕರನ್ನು ಸೆಳೆದೆ, ಅವರಿಗೆ ಹತ್ತಿರವಾದೆ. ಹರಿಪ್ರಿಯಾ ಬರೆಯುತ್ತಾಳೆ ಎನ್ನುವುದು ಆವಾಗ ಜನರಿಗೆ ಗೊತ್ತಾಯಿತು. ಸಾಮಾನ್ಯ ದಿನಗಳಲ್ಲಿ ಶೂಟಿಂಗ್‌ಗೆ ಎಷ್ಟು ಸಮಯ ನೀಡುತ್ತಿದ್ದೆನೋ ಅಷ್ಟೇ ಸಮಯವನ್ನು ಬರವಣಿಗೆಗೆ ನೀಡುತ್ತಿದ್ದೆ. ಈಗ ಮತ್ತೆ ಚಿತ್ರೀಕರಣದಲ್ಲಿ ಭಾಗಿಯಾಗುತ್ತಿರುವ ಕಾರಣ ಬರೆಯಲು ಆಗುತ್ತಿಲ್ಲ.

• 'ಹೀರೋ'ಗೂ ನೀವೇ ಹೀರೊಯಿನ್ ಆಗ್ತಿದ್ರಂತೆ?

ರಿಷಬ್ ಶೆಟ್ಟಿ ಹಾಗೂ ನಾನು ಒಳ್ಳೆಯ ಸ್ನೇಹಿತರು. ಅವರ ಮೊದಲ ನಿರ್ದೇಶನದ ಚಿತ್ರ ರಿಕ್ಕಿಯಲ್ಲಿ ನಾನು ನಾಯಕಿಯಾಗಿದ್ದೆ. ಕಥಾಸಂಗಮದಲ್ಲೂ ಒಂದು ಕಥೆಗೆ ನಾನು ನಾಯಕಿ. ಅವರು ಹೀರೋ ಆಗಿ ನಟಿಸಿದ ಬೆಲ್‌ಬಾಟಂನಲ್ಲೂ ನಾನು ನಾಯಕಿಯಾಗಿದ್ದೆ. 'ವಿ ಬೋತ್ ಆರ್ ಲಕ್ಕಿ ಟು ಈಚ್ ಅದರ್'. ಇಬ್ಬರಿಗೂ ಸಿನಿಮಾದ ಕೆಲಸ ಇಷ್ಟ. ನಾನು ಕೆಲಸವನ್ನು ಎಷ್ಟು ಇಷ್ಟಪಡುತ್ತೇನೋ ಅದಕ್ಕಿಂತ ಹೆಚ್ಚು ಕೆಲಸ ಮಾಡುವವರು ರಿಷಬ್ ಶೆಟ್ಟಿ. ಬೆಲ್‌ಬಾಟಂ-2 ಮಾಡುತ್ತೇವೆ ಎಂದು ಮೊದಲೇ ನಿರ್ಧಾರವಾಗಿತ್ತು. ಹೀಗಾಗಿ ಸತತವಾಗಿ ಅವರ ಚಿತ್ರಗಳಿಗೆ ನಾನೇ ನಾಯಕಿಯಾಗಿದ್ದರೆ ಚೆನ್ನಾಗಿರುವುದಿಲ್ಲ. ಬೆಲ್‌ಬಾಟಂ-2 ಆದ ನಂತರ ನಾನು, ರಿಷಬ್ ಶೆಟ್ಟಿ ಅವರ ಮತ್ತಷ್ಟು ಸಿನಿಮಾ ಮಾಡಲಿದ್ದೇವೆ.

• ಅಮೃತಮತಿ ಚಿತ್ರಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಬಂದ ಅನುಭವ

ನಾನು ಯಾವತ್ತೂ ಪ್ರಶಸ್ತಿಗಾಗಿ ಕೆಲಸ ಮಾಡಿಲ್ಲ. ನಮ್ಮ ನಟನೆಯನ್ನು ಗುರುತಿಸಿ ನೀಡುವ ಪ್ರಶಸ್ತಿ ಖುಷಿಯ ವಿಚಾರ. ಹಲವು ದೇಶದ ಪ್ರತಿಸ್ಪರ್ಧಿಗಳ ನಡುವೆ ನಾವು ಗೆದ್ದಿದ್ದೇವೆ ಎನ್ನುವುದು ಹೆಮ್ಮೆ. ಆದರೆ, ವಿಭಿನ್ನ ಪಾತ್ರಗಳಿಗೆ ನಿರ್ದೇಶಕರು ನಮ್ಮನ್ನು ಆಯ್ಕೆ ಮಾಡುವುದೇ ಅದಕ್ಕಿಂತ ದೊಡ್ಡ ಪ್ರಶಸ್ತಿ. ಅವರು ನಮ್ಮ ಮೇಲೆ ಇಡುವ ನಂಬಿಕೆ ಹೆಚ್ಚಿನ ಖುಷಿ ನೀಡುತ್ತದೆ. ಪ್ರಸ್ತುತ ಚಂದನವನದಲ್ಲಿ ಇರುವ ನಟಿಯರಲ್ಲಿ ಇಷ್ಟು ವಿಭಿನ್ನವಾದ ಪಾತ್ರಗಳು ಸಿಕ್ಕಿರುವುದು ನನಗೆ. ಜನರೂ ವಿಭಿನ್ನ ಪಾತ್ರಗಳನ್ನು ಮೆಚ್ಚುತ್ತಿದ್ದಾರೆ.

• ಪ್ರಸ್ತುತ ಯಾವ ಚಿತ್ರದಲ್ಲಿ ತಲ್ಲೀನರಾಗಿದ್ದೀರಿ?

ಲಾಕ್‌ಡೌನ್ ಮುಗಿದ ಕೂಡಲೇ ನೀನಾಸಂ ಸತೀಶ್ ನಾಯಕರಾಗಿ ನಟಿಸುತ್ತಿರುವ, ವಿಜಯ್ ಪ್ರಸಾದ್ ನಿರ್ದೇಶನದ 'ಪೆಟ್ರೋಮ್ಯಾಕ್ಸ್' ಚಿತ್ರೀಕರಣ ಮುಗಿಸಿಯೇಬಿಟ್ಟೆವು. ತೆಲುಗಿನಲ್ಲಿ ಸೂಪರ್‌ಹಿಟ್ ಆದ ಕ್ರೈಮ್ ಥ್ರಿಲ್ಲರ್ 'ಎವರು' ರಿಮೇಕ್ ಚಿತ್ರೀಕರಣ ಪ್ರಸ್ತುತ ನಡೆಯುತ್ತಿದೆ. ತೆಲುಗಿನ ಚಿತ್ರತಂಡವೇ ಇದನ್ನು ರಿಮೇಕ್ ಮಾಡುತ್ತಿದೆ. ರಿಷಬ್ ಶೆಟ್ಟಿ ಅವರ ಬೆಲ್‌ಬಾಟಂ-2 ಮುಹೂರ್ತ ಆಗಿದೆ. ಇದು ಬಿಗ್‌ಬಜೆಟ್ ಹಾಗೂ ಹೆಚ್ಚಿನ ಕಲಾವಿದರು ಇರುವ ಚಿತ್ರ. ಉಪೇಂದ್ರ ಅವರ ಜೊತೆ ನಟಿಸುವ ಆಸೆ ಎಲ್ಲರಿಗೂ ಇರುತ್ತದೆ. ನಾನೂ ಕೂಡಾ ಬಹಳ ಕಾತುರದಿಂದ ಇದಕ್ಕಾಗಿ ಕಾಯುತ್ತಿದ್ದೇನೆ. ಶಶಾಂಕ್ ಅವರು ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾ ಕೂಡಾ ಶೀಘ್ರದಲ್ಲೇ ಸೆಟ್ಟೇರಲಿದೆ. ಮತ್ತಷ್ಟು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಶೀಘ್ರದಲ್ಲೇ ಅವುಗಳ ಮಾಹಿತಿಯನ್ನೂ ನೀಡುತ್ತೇನೆ.

• ಹಾಗಿದ್ದರೆ ಈ ವರ್ಷ ಹರಿಪ್ರಿಯಾ ಫುಲ್ ಬ್ಯುಸಿಯಾಗ್ತಿತಾರೆ?

ಲಾಕ್‌ಡೌನ್ ಮುಂಚಿತವಾಗಿ ಹಾಗೂ ನಂತರ ಒಪ್ಪಿಕೊಂಡ ಹಲವು ಸಿನಿಮಾಗಳು ಹಲವಾರಿವೆ. ಹೀಗಾಗಿ ನಿರ್ದಿಷ್ಟವಾಗಿ ಈ ವರ್ಷ ಇಷ್ಟೇ ಸಿನಿಮಾಗಳಲ್ಲಿ ನಟಿಸುತ್ತೇನೆ, ಇಷ್ಟು ಸಿನಿಮಾಗಳು ಬಿಡುಗಡೆಯಾಗಲಿವೆ ಎನ್ನುವುದು ಕಷ್ಟ. ಕೋವಿಡ್ ಎರಡನೇ ಅಲೆಯೂ ಪ್ರಾರಂಭವಾಗಿದ್ದು, ಮುಂದೆ ಏನಾಗುತ್ತದೆಯೋ ತಿಳಿದಿಲ್ಲ. ಕೋವಿಡ್ ನಮ್ಮನ್ನು ಸ್ವಲ್ಪ ತಡೆದಿತ್ತು, ಉಳಿದಂತೆ ಯಾವುದೂ ನನ್ನನ್ನು ತಡೆಯಲು ಸಾಧ್ಯವಿಲ್ಲ. ಹರಿಪ್ರಿಯಾ ಈ ವರ್ಷ ಫುಲ್ ಬ್ಯುಸಿಯಾಗಿರ್ತಾರೆ. ❖

ಹರಿಪ್ರಿಯಾ

ಸೆಟ್ಟೇರಿತು 'ಮನಸಾಗಿದೆ' ಚಿತ್ರ

ನಿರ್ಮಾಪಕ ಎಸ್.ಚಂದ್ರಶೇಖರ್ ಅವರು ತಮ್ಮ ಪುತ್ರ ಅಭಯ್ ಅವರನ್ನು 'ಮನಸಾಗಿದೆ' ಚಿತ್ರದ ಮುಖಾಂತರ ಚಂದನವನಕ್ಕೆ ಪರಿಚಯಿಸಲು ಸಜ್ಜಾಗಿದ್ದಾರೆ.

ಚಿತ್ರದ ಶೀರ್ಷಿಕೆ ಅನಾವರಣ ಇತ್ತೀಚೆಗೆ ನಡೆಯಿತು. ಚಿತ್ರದ ಚಿತ್ರೀಕರಣ ಏಪ್ರಿಲ್‌ನಲ್ಲಿ ಆರಂಭವಾಗಲಿದ್ದು, ಬೆಂಗಳೂರು ಹಾಗೂ ಮಡಿಕೇರಿಯಲ್ಲಿ ಚಿತ್ರೀಕರಣ ನಡೆಯಲಿದೆ. 'ಇದೊಂದು ಪ್ರೇಮಕಥೆಯಾಗಿದೆ. ಕೆಲವರು ಪ್ರೀತಿಯನ್ನು ಪಡೆಯಬೇಕು ಎಂದು ಹುಡುಕಿಕೊಂಡು ಹೋಗುತ್ತಾರೆ. ಮತ್ತೆ ಕೆಲವರಿಗೆ ಪ್ರೀತಿಯೇ ಹುಡುಕಿಕೊಂಡು ಬರುತ್ತದೆ. ನಮ್ಮ ಚಿತ್ರದಲ್ಲಿ ನಾಯಕನು ಮನಸಾರೆ ಬಯಸಿದ ಪ್ರೀತಿಯನ್ನು ಪಡೆಯಬೇಕು ಎಂದು ಹೊರಟಾಗ, ಇನ್ನೊಂದು ರೂಪದಲ್ಲಿ ಪ್ರೀತಿಯೇ ಅವನನ್ನು ಹುಡುಕಿಕೊಂಡು ಬರುತ್ತದೆ. ಈ ಸಂದರ್ಭದಲ್ಲಿ ನಾಯಕ ಯಾವುದನ್ನು ಪಡೆಯುತ್ತಾನೆ ಎನ್ನುವುದು ಕಥಾಹಂದರ' ಎನ್ನುತ್ತಾರೆ ಕಥೆ ರಚಿಸಿರುವ ಎಸ್.ಚಂದ್ರಶೇಖರ್.

ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಟಿಕ್‌ಟಾಕ್ ಸ್ಟಾರ್ ಅಥಿರ ಹಾಗೂ ಮೇಘಶ್ರೀ ಕ್ರಮವಾಗಿ 'ಸಿಂಚನ' ಮತ್ತು 'ಅಂಕಿತ' ಎಂಬ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. 'ಚಂದನವನದಲ್ಲಿ ಅದೆಷ್ಟೋ ಪ್ರೇಮಕಥೆಗಳು ಬಂದಿವೆ. ಆದರೆ ಇದೊಂದು ವಿಭಿನ್ನ ಚಿತ್ರ. ಪ್ರೀತಿ ಮತ್ತು ಮನುಷ್ಯತ್ವದ ನಡುವೆ ನಡೆಯುವ ಸಂಘರ್ಷದ ವಿಷಯ ಇಟ್ಟುಕೊಂಡು ಚಿತ್ರ ಮಾಡಿದ್ದೇವೆ' ಎಂದು ನಿರ್ದೇಶಕ ಶ್ರೀನಿವಾಸ್ ಶಿಡ್ಲಘಟ್ಟ ಹೇಳಿದರು. ಚಿತ್ರಕ್ಕೆ ಮಾನಸ ಹೊಳ್ಳ ಅವರು ಸಂಗೀತ ನೀಡಿದ್ದು, ಥ್ರಿಲ್ಲರ್ ಮಂಜು ಅವರು ಸಾಹಸ ನಿರ್ದೇಶನ ಮಾಡಿದ್ದಾರೆ. ❖

ಪೊಲೀಸ್ ಅಧಿಕಾರಿಯಾದ್ರು ಪ್ರಿಯಾಂಕ!

ಸೆಕೆಂಡ್ ಹಾಫ್ ಚಿತ್ರದಲ್ಲಿ ಪೊಲೀಸ್ ಪೇದೆಯಾಗಿ ಕಾಣಿಸಿಕೊಂಡಿದ್ದ ನಟಿ ಪ್ರಿಯಾಂಕ ಉಪೇಂದ್ರ ಇದೀಗ ಪೊಲೀಸ್ ಅಧಿಕಾರಿಯಾಗಿ ಬಡ್ತಿ ಪಡೆದಿದ್ದಾರೆ. ಗುರುಮೂರ್ತಿ ನಿರ್ದೇಶನದ ಪ್ರಿಯಾಂಕ ಉಪೇಂದ್ರ ನಟಿಸುತ್ತಿರುವ 'ಉಗ್ರಾವತಾರ' ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದ್ದು, ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಪ್ರಿಯಾಂಕ ಕಾಣಿಸಿಕೊಂಡಿದ್ದಾರೆ.

ರುಫ್ಪೀಸ್ ರೆಸಾರ್ಟ್‌ನಲ್ಲಿ ಚಿತ್ರೀಕರಣ ನಡೆಯುತ್ತಿದ್ದು, ಈ ವೇಳೆ ತಮ್ಮ ಪಾತ್ರದ ಕುರಿತು ವಿವರಣೆ ನೀಡಿದ ಪ್ರಿಯಾಂಕ, 'ಮೊದಲ ಬಾರಿ ಆ್ಯಕ್ಷನ್ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಚಿತ್ರದ ಕಥೆ ನನಗೆ ಇಷ್ಟವಾಯಿತು. ಕಳೆದ ವರ್ಷವೇ ಚಿತ್ರೀಕರಣ ಆರಂಭಿಸಿದ್ದೆವು, ಇದೀಗ ಚಿತ್ರೀಕರಣದ ಕೊನೆಯ ಹಂತದಲ್ಲಿದ್ದೇವೆ. ಆ್ಯಕ್ಷನ್ ಚಿತ್ರಕ್ಕಾಗಿ ಹೆಚ್ಚಿನ ವರ್ಕ್‌ಔಟ್ ಮಾಡಿದ್ದೇನೆ. ಮಹಿಳೆಯರ ಮೇಲಿನ ದೌರ್ಜನ್ಯ, ಪೊಲೀಸ್ ಇಲಾಖೆಯಲ್ಲಿ ಮಹಿಳೆ, ಮಹಿಳೆಯರ ಸಬಲೀಕರಣ ಹೀಗೆ ಹಲವು ವಿಷಯಗಳು ಚಿತ್ರದಲ್ಲಿದೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಹಲವು ಘಟನೆಗಳನ್ನು ಆಧರಿಸಿ ಕಥೆ ಹೆಣೆಯಲಾಗಿದೆ' ಎಂದರು.

'ಇದೊಂದು ಆ್ಯಕ್ಷನ್ ಚಿತ್ರ, ಹೀಗಾಗಿ ಸಾಹಸ ದೃಶ್ಯಗಳು ನನಗೆ ಬಹಳ ಕಷ್ಟವಾಯಿತು, ಸವಾಲಾಗಿ ಈ ಪಾತ್ರವನ್ನು ಸ್ವೀಕರಿಸಿದ್ದೇನೆ. ಚಿತ್ರಕ್ಕಾಗಿ ರೋಪ್ ಟ್ರೈನಿಂಗ್, ಬಾಕ್ಸಿಂಗ್ ಕಲಿತಿದ್ದೇನೆ. ಗನ್ ಬಳಸುವುದು, ಚೇಸಿಂಗ್ ಮುಂತಾದುವುಗಳನ್ನು ಸಾಹಸ ನಿರ್ದೇಶಕರು ಕಲಿಸಿದ್ದಾರೆ. ಪೊಲೀಸ್ ಇಲಾಖೆಯಲ್ಲಿನ ಮಹಿಳಾ ಪೊಲೀಸ್ ಅಧಿಕಾರಿಗಳ ಸ್ಫೂರ್ತಿ ಪಡೆದು, ಅವರ ಕಾರ್ಯವೈಖರಿಯ ವಿಡಿಯೊಗಳನ್ನು ನೋಡಿ ನಾನು ಈ ಪಾತ್ರದಲ್ಲಿ ನಟಿಸಿದ್ದೇನೆ' ಎಂದು ಹೇಳಿದರು. ❖

ಪ್ರಿಯಾಂಕ ಉಪೇಂದ್ರ



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಂತೋಷಕ್ಕೆ ಯಾವುದೇ ಕೀಲಿಕೈ ಇಲ್ಲ. ಅದರ ಬಾಗಿಲು ಯಾವಾಗಲೂ ತೆರೆದಿರುತ್ತದೆ.

–ಮದರ್ ತೆರೆಸಾ

ಬಡ್ಡಿದರ ಕಡಿತ ಆದೇಶ ವಾಪಸ್ ಕಣ್ತಪ್ಪಿನ ಕಾರಣ ನಂಬಬಹುದೇ?

ಭಾರತದಲ್ಲಿ ಚಿಲ್ಲರೆ ಹಣದುಬ್ಬರ ದರವು ತೀರಾ ಅಹಿತಕರ ಮಟ್ಟದಲ್ಲಿ ಇದೆ ಎಂದು ಮೂಡಿಸ್ ಅನಾಲಿಟಿಕ್ಸ್ ಮಂಗಳವಾರ ಹೇಳಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣಕ್ಕೂ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರಕ್ಕೂ ನೇರ ಸಂಬಂಧ ಇದೆ. ಬಡ್ಡಿಯ ಪ್ರಮಾಣವು ಚಿಲ್ಲರೆ ಹಣದುಬ್ಬರ ಪ್ರಮಾಣಕ್ಕಿಂತ ಕಡಿಮೆ ಆದಲ್ಲಿ, ಹಣವನ್ನು ಉಳಿಸುವುದೇ ನಿರರ್ಥಕವೆಂದು ಅನ್ನಿಸುವ ಅಪಾಯ ಇರುತ್ತದೆ. ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಫೆಬ್ರುವರಿಯಲ್ಲಿ ಶೇಕಡ 5ರ ಗಡಿ ದಾಟಿದೆ. ಇಂಧನ ದರ ತೀರಾ ದುಬಾರಿ ಆಗಿರುವ ಕಾರಣ, ಮುಂದಿನ ದಿನಗಳಲ್ಲಿ ಹಣದುಬ್ಬರ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದ್ದೇ ಇದೆ. ಇಂತಹ ಪರಿಸ್ಥಿತಿಯಲ್ಲಿ, ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿಯನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಿದ ಸುದ್ದಿಯು ಸಿಡಿಲಿನಂತೆ ಎರಗಿತು. ಬಡ್ಡಿ ಕಡಿತದ ತೀರ್ಮಾನವನ್ನು ಕೇಂದ್ರ ಹಣಕಾಸು ಸಚಿವಾಲಯವು ಬಹಿರಂಗಪಡಿಸಿದ್ದು ಬುಧವಾರ ಸಂಜೆ. ಆದರೆ, ಗುರುವಾರ ಬೆಳಿಗ್ಗೆ ಎಂಟು ಗಂಟೆಯ ಸುಮಾರಿಗೆ ಟ್ವೀಟ್ ಮಾಡಿದ ಸಚಿವೆ ನಿರ್ಮಲಾ ಸೀತಾರಾಮನ್, ಬಡ್ಡಿ ದರ ಕಡಿತದ ತೀರ್ಮಾನವನ್ನು ಹಿಂಪಡೆದಿರುವುದಾಗಿ ಹೇಳಿದರು. ಬಡ್ಡಿ ದರ ಕಡಿತದ ಆದೇಶವು 'ಕಣ್ತಪ್ಪಿನಿಂದಾಗಿ' ಆಗಿತ್ತು ಎಂದರು! ಕೋಟ್ಯಂತರ ಜನರ ಬದುಕಿನ ಮೇಲೆ ಈಗಿನ ಸಂದರ್ಭದಲ್ಲಿ ಕೆಟ್ಟ ಪರಿಣಾಮ ಬೀರುವ ಆದೇಶವೊಂದನ್ನು ಹಿಂದಕ್ಕೆ ಪಡೆಯಲಾಯಿತು ಎಂದು ಸಂಭ್ರಮಿಸಬೇಕೇ ಅಥವಾ ಕೇಂದ್ರದ ಅತ್ಯಂತ ಮಹತ್ವದ ಸಚಿವಾಲಯಗಳಲ್ಲಿ ಒಂದಾಗಿರುವ ಹಣಕಾಸು ಸಚಿವಾಲಯವು ಕಣ್ತಪ್ಪಿನಿಂದ ಹೀಗೆಲ್ಲಾ ಆದೇಶ ಹೊರಡಿಸುವ ಸ್ಥಿತಿ ತಲುಪಿದೆ ಎಂದು ವಿಷಾದಿಸಬೇಕೇ? ಕಣ್ತಪ್ಪಿನಿಂದಾಗಿ ಇಂತಹ ಆದೇಶ ಹೊರಡಿಸಲಾಗಿತ್ತು ಎಂಬುದು ನಿಜವೇ ಆದರೆ, ಆ ತಪ್ಪು ಆಗಿದ್ದು ಯಾರಿಂದ ಎಂಬುದನ್ನು ಗುರುತಿಸಿ, ಅವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆಯೇ? ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದೆ. ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಈ ಸಂದರ್ಭದಲ್ಲಿ ಭಾರಿ ಪ್ರಮಾಣದಲ್ಲಿ ತಗ್ಗಿಸಿದರೆ, ಅದು ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ತೊಡರುಗಾಲಾಗಿ ಪರಿಣಮಿಸಬಹುದು ಎಂಬ ರಾಜಕೀಯ ಲೆಕ್ಕಾಚಾರವು ಸಂಜೆ ನೀಡಿದ ಆದೇಶವನ್ನು ಕೆಲವೇ ತಾಸುಗಳಲ್ಲಿ ದಿಢೀರ್ ಎಂದು ಹಿಂದಕ್ಕೆ ಪಡೆದಿರುವುದರ ಹಿಂದೆ ಕೆಲಸ ಮಾಡಿರಬಹುದು ಎಂಬ ವಿಶ್ಲೇಷಣೆಗಳನ್ನು ಸಾರಾಸಗಟಾಗಿ ತಳ್ಳಿಹಾಕಲಾಗದಂತಹ ಸ್ಥಿತಿಯನ್ನು ಅಧಿಕಾರಸ್ಥರೇ ಸೃಷ್ಟಿಸಿಕೊಂಡಿದ್ದಾರೆ.

ಸಣ್ಣ ಉಳಿತಾಯ ಯೋಜನೆಗಳ ಜೊತೆ ಜನ ಭಾವನಾತ್ಮಕ ನಂಟನ್ನು ಬೆಳೆಸಿಕೊಂಡಿರುತ್ತಾರೆ, ಆ ಯೋಜನೆಗಳನ್ನು ನೆಚ್ಚಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡಿರುತ್ತಾರೆ ಎಂಬುದನ್ನು ಸರ್ಕಾರ ಮರೆಯಬಾರದು

ಈ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ, ಜುಲೈನಿಂದ ಆರಂಭವಾಗುವ ಮುಂದಿನ ತ್ರೈಮಾಸಿಕದಲ್ಲಿ ಇದೇ ಪ್ರಮಾಣದಲ್ಲಿ ಕೇಂದ್ರವು ಬಡ್ಡಿ ದರ ಕಡಿಮೆ ಮಾಡುವುದಿಲ್ಲ ಎಂದು ನಂಬಬಹುದೇ? ಸಣ್ಣ ಉಳಿತಾಯ ಯೋಜನೆಗಳಲ್ಲಿ ಮಾಡುವ ಹೂಡಿಕೆ ಅತ್ಯಂತ ಸುಭದ್ರ. ಹಾಗಾಗಿಯೇ ಕೋಟ್ಯಂತರ ಜನರಿಗೆ ಇಂತಹ ಯೋಜನೆಗಳು ಹೂಡಿಕೆಯ ಮೊದಲ ಆಯ್ಕೆ. ಇಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಲಾಭ ತಂದುಕೊಡಬಹುದಾದ ಈಕ್ವಿಟಿ ಆಧಾರಿತ ವ್ಯವಸ್ಥಿತ ಹೂಡಿಕೆ ಯೋಜನೆಗಳು (ಎಸ್‌ಐಪಿ) ದೇಶದಲ್ಲಿ ಇವೆ ಎಂಬುದು ನಿಜ. ಈಕ್ವಿಟಿ ಮಾರುಕಟ್ಟೆ ಮೇಲೆ ನೇರವಾಗಿ ಹೂಡಿಕೆ ಮಾಡಿದರೆ ಜನಸಾಮಾನ್ಯರು ದೊಡ್ಡ ಪ್ರಮಾಣದಲ್ಲಿ ಲಾಭ ಗಳಿಸಬಹುದಾದ ಅವಕಾಶ ಕೂಡ ಇದೆ. ಸಾಂಪ್ರದಾಯಿಕ ಉಳಿತಾಯ ಯೋಜನೆಗಳಿಗಿಂತ ಹೆಚ್ಚಿನ ಲಾಭ ತಂದುಕೊಡಬಹುದಾದ ಈಕ್ವಿಟಿ, ಸಾಲಪತ್ರ ಹಾಗೂ ಇವೆರಡನ್ನೂ ಒಳಗೊಂಡಿರುವ ಯೋಜನೆಗಳಲ್ಲಿ ಹೂಡಿಕೆ ಮಾಡುವ ಭಾರತೀಯರ ಸಂಖ್ಯೆ ನಗಣ್ಯ. 130 ಕೋಟಿಗೂ ಹೆಚ್ಚಿನ ಜನಸಂಖ್ಯೆಯ ದೇಶದಲ್ಲಿ ಇರುವ ಮ್ಯೂಚುವಲ್ ಫಂಡ್ ಖಾತೆಗಳ ಸಂಖ್ಯೆ 9.62 ಕೋಟಿ ಮಾತ್ರ (ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇ 7.4ರಷ್ಟು. ಒಬ್ಬರು ಒಂದಕ್ಕಿಂತ ಹೆಚ್ಚು ಖಾತೆ ಹೊಂದಬಹುದು. ಹಾಗಾಗಿ, 9.62 ಕೋಟಿ ಜನ ಹಣಕಾಸಿನ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ದಾರೆ ಎನ್ನಲಾಗದು). ಈಕ್ವಿಟಿ ಹೂಡಿಕೆಗೆ ಅಗತ್ಯವಿರುವ ಹಣಕಾಸಿನ ಸಾಕ್ಷರತೆ ನಮ್ಮಲ್ಲಿ ಕಡಿಮೆ, ಈ ಬಗೆಯ ಹೂಡಿಕೆಗಳ ಬಗ್ಗೆ ಸಕಾರಣಗಳ ಆತಂಕ ಜನರಲ್ಲಿ ಇದೆ. ಹೀಗಾಗಿಯೇ ಜನ ಸಣ್ಣ ಉಳಿತಾಯ ಯೋಜನೆಗಳ ಜೊತೆ ಭಾವನಾತ್ಮಕ ನಂಟೊಂದನ್ನು ಕೂಡ ಬೆಳೆಸಿಕೊಂಡಿದ್ದಾರೆ. ಆ ಯೋಜನೆಗಳನ್ನು ನೆಚ್ಚಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಇಂಥವುಗಳ ವಿಚಾರದಲ್ಲಿ 'ಕಣ್ತಪ್ಪಿನ ಆಟ'ವಾಡುವುದು ಎಳ್ಳಷ್ಟೂ ಸರಿಯಲ್ಲ. ಕೇಂದ್ರ ಸರ್ಕಾರಕ್ಕೆ ಬಡ್ಡಿ ದರಗಳನ್ನು ತಗ್ಗಿಸಬೇಕು ಎಂಬ ಹಂಬಲ ಇದೆ ಎಂಬುದು ಸ್ಪಷ್ಟ. ಆದರೆ, ಸರ್ಕಾರವು ಹಣದುಬ್ಬರ ದರವನ್ನು ತಾನೇ ನಿಗದಿ ಮಾಡಿಕೊಂಡಿರುವ ಶೇಕಡ 4ಕ್ಕಿಂತ ಕಡಿಮೆ ಮಟ್ಟಕ್ಕೆ ತಾರದೆಯೇ, ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಶೇಕಡ 4.4 ಅಥವಾ ಶೇಕಡ 5ರ ಮಟ್ಟಕ್ಕೆ ಇಳಿಸುವುದು ಉಳಿತಾಯ ಪ್ರವೃತ್ತಿಯೇ ತಪ್ಪು ಎಂಬ ಸಂದೇಶ ರವಾನಿಸಬಹುದು.

ದಿನದ ಟ್ವೀಟ್

ಪಾಕಿಸ್ತಾನದ ಲಾಬಿ

ನಮ್ಮ ಸಕ್ಕರೆ ಮತ್ತು ಹತ್ತಿಯನ್ನು ಖರೀದಿಸುವ ಪಾಕಿಸ್ತಾನೀಯರು ಅದಕ್ಕೆ ಪ್ರತಿಯಾಗಿ ವಿನಿಮಯದ ರೂಪದಲ್ಲಿ, ತಮ್ಮಲ್ಲಿ ಉತ್ಪಾದನೆಯಾಗುವ ಬೃಹತ್ ಪ್ರಮಾಣದ ಸಿಮೆಂಟ್ ಅನ್ನು ಕಳುಹಿಸಲು ಬಯಸುತ್ತಾರೆ. ಉತ್ತರ ಭಾರತದಲ್ಲಿ ಸಿಮೆಂಟ್‌ನ ಕೊರತೆಯಿದೆ. ಆದರೆ, ದಕ್ಷಿಣ ಭಾರತದಲ್ಲಿ ಹೆಚ್ಚುವರಿ ಉತ್ಪಾದನೆ ಇದೆ. ರೈಲ್ವೆಯು ಸರಕು ಸಾಗಣೆ ದರವನ್ನು ತಗ್ಗಿಸಿದರೆ ಈ ವಿಷಯದಲ್ಲಿ ಭಾರತ ಸ್ವಾವಲಂಬಿಯಾಗಬಹುದು. ಆದರೆ ಭಾರತದಲ್ಲಿ ಪಾಕಿಸ್ತಾನದ ಲಾಬಿಯು ಇದಕ್ಕೆ ಅನುವು ಮಾಡಿಕೊಡುವುದಿಲ್ಲ.

ಸುಬ್ರಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 2-4-1996

● **ನಾಮಪತ್ರ ಸಲ್ಲಿಸಲು ರಾಜ್ಯದ ಏಳು ಸಚಿವರಿಗೆ ದಳ ಆದೇಶ**

ಬೆಂಗಳೂರು, ಏ. 1– ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸುವಂತೆ ಹಿರಿಯ ಸಚಿವರಾದ ಆರ್.ಎಲ್.ಜಾಲಪ್ಪ, ಪಿ.ಜಿ.ಆರ್.ಸಿಂಧ್ಯ, ವೈಜನಾಥ್ ಪಾಟೀಲ್ ಮತ್ತು ಶಿವಾನಂದ ಕೌಜಲಗಿ ಅವರೂ ಸೇರಿದಂತೆ ಒಟ್ಟು ಏಳು ಜನ ಸಚಿವರಿಗೆ ರಾಜ್ಯ ಜನತಾ ದಳದ ಸಂಸದೀಯ ಮಂಡಲಿ ಆದೇಶ ನೀಡಿದೆ.

ಚುನಾವಣೆಯಲ್ಲಿ ಸ್ಪರ್ಧಿಸಲು ಬಹುತೇಕ ಸಚಿವರು ಹಿಂದೇಟು ಹಾಕುತ್ತಿರುವಾಗಲೇ ಸಚಿವರಿಗೆ ಮಂಡಲಿ ಈ ಆದೇಶ ನೀಡಿರುವುದು ದಳದಲ್ಲಿ ಹೊಸ ರಾಜಕೀಯ ಬೆಳವಣಿಗೆಗೆ ಕಾರಣವಾಗಿದೆ.

● **ಹವಾಲ: 7 ಮಾಜಿ ಸಚಿವರಿಗೆ ಟಿಕೆಟ್ ಇಲ್ಲ**

ನವದೆಹಲಿ, ಏ. 1 (ಪಿಟಿಐ)– ಹವಾಲ ಹಗರಣದ ಆರೋಪಿಗಳಾದ ಏಳು ಮಾಜಿ ಸಚಿವರಿಗೆ ಲೋಕಸಭಾ ಚುನಾವಣೆಗೆ ಕಾಂಗ್ರೆ ಟಿಕೆಟ್ ನಿರಾಕರಿಸಿದೆ. ಇವರಲ್ಲಿ ಬಲರಾಂ ಜಾಖಡ್, ಆರ್.ಕೆ.ಧವನ್, ಮಾಧವರಾವ್ ಸಿಂಧಿಯಾ, ವಿ.ಸಿ.ಶುಕ್ಲಾ, ಬೂಟಾ ಸಿಂಗ್, ಕಮಲನಾಥ್, ಅರವಿಂದ ನೇತಂ ಸೇರಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 2-4-1971

● **ಭಾರತದಿಂದ ಹಸ್ತಕ್ಷೇಪ: ಪಾಕ್**

ನವದೆಹಲಿ, ಏ. 1– ಬಾಂಗ್ಲಾ ಸ್ವಾತಂತ್ರ್ಯಾಕಾಂಕ್ಷಿಗಳಿಂದ ಬಿಗಿ ಹೋರಾಟ ಎದುರಿಸುತ್ತಿರುವ ಪಾಕಿಸ್ತಾನಿ ಆಡಳಿತವು ಈಗ ಆಪಾದನೆಗಳನ್ನೆಲ್ಲ ಭಾರತದ ಮೇಲೆ ಹೊರಿಸಲು ಆರಂಭಿಸಿದೆ.

ಬಾಂಗ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾನುಭೂತಿ ಮತ್ತು ಬೆಂಬಲ ವ್ಯಕ್ತಪಡಿಸಿರುವ ಭಾರತ ಪಾರ್ಲಿಮೆಂಟ್‌ನ ಅವಿರೋಧ ನಿರ್ಣಯವು 'ಪಾಕ್ ವ್ಯವಹಾರದಲ್ಲಿ ಹಸ್ತಕ್ಷೇಪ' ಮಾಡಿದೆಯೆಂದು ಪಾಕ್ ರೇಡಿಯೊ ಬಿತ್ತರಿಸಿದೆ.

● **ಮುಜೀಬುರ್ ಬಂಧನ ವರದಿ ಶುದ್ಧ ಸುಳ್ಳು: ನಿಕಟವರ್ತಿ ಸ್ಪಷ್ಟನೆ**

ಕಲ್ಕತ್ತ, ಏ. 1– ಸ್ವತಂತ್ರ ಬಾಂಗ್ಲಾದೇಶ ಚಳವಳಿ ನಾಯಕ ಷೇಖ್ ಮುಜೀಬುರ್ ರಹಮಾನ್ ಅವರನ್ನು ಬಂಧಿಸಿ ಲಾಹೋರಿಗೆ ಒಯ್ಯಲಾಗಿದೆಯೆಂಬ ಲಂಡನ್ ವರದಿಗಳನ್ನು 'ಆಧಾರ ರಹಿತ'ವೆಂದು ರಹಮಾನ್‌ರವರ ನಿಕಟವರ್ತಿ ಅಮಿ ಅಹ್ಮದ್ ಅಬ್ದುಲುರ್ ರಷೀದ್ ಕರೆದಿದ್ದಾರೆ.

ಹೊಸ ಸವಾಲುಗಳಿಗೆ ಸಹಕಾರಿ ತತ್ವದ ಒಕ್ಕೂಟ ವ್ಯವಸ್ಥೆ ಬಲಪಡಿಸುವುದರಲ್ಲೇ ಪರಿಹಾರ ಹುದುಗಿದೆ

ಈಗ ಎಂಥ ರಾಷ್ಟ್ರೀಯತೆ ಬೇಕು?

ವಿಶ್ಲೇಷಣೆ

ವಸಂತ್ ಶೆಟ್ಟಿ

ಪ್ರಪಂಚದ ಕೆಲವು ದೇಶಗಳಲ್ಲಿ ಉಗ್ರ ರಾಷ್ಟ್ರೀಯತೆಯ ವಾದ ಮತ್ತು ಸರ್ವಾಧಿಕಾರಿ ಧೋರಣೆಯ ನಾಯಕತ್ವಕ್ಕೆ ಬೆಂಬಲ ಅನ್ನುವುದು ಒಮ್ಮೆಲೆ ಮುನ್ನೆಲೆಗೆ ಬರತೊಡಗಿದೆ. ಎರಡು ವಿಶ್ವಯುದ್ಧಗಳು ತಂದ ಎಣಿಸಲಾಗದ ಸಾವು, ನೋವು ಕಂಡ ಮೇಲೆ ವಿಶ್ವಸಂಸ್ಥೆಯಡಿ ದೇಶಗಳೆಲ್ಲವನ್ನೂ ಒಂದು ವೇದಿಕೆಯಡಿ ತಂದು ಜಾಗತಿಕ ರಾಜಕಾರಣದ ಬಿಕ್ಕಟ್ಟುಗಳನ್ನು ಸಾಧ್ಯವಾದಷ್ಟು ಮಾತುಕತೆಯ ಮೂಲಕವೇ ಬಗೆಹರಿಸುವ ಪರಿಹಾರ ಸೂತ್ರವೊಂದನ್ನು ರೂಪಿಸಿಕೊಳ್ಳಲಾಯಿತು. ಹಲವು ಕೊರತೆಗಳಿದ್ದರೂ 'ಪ್ರಜಾಪ್ರಭುತ್ವವೇ ದೇಶವೊಂದರ ಸಮಸ್ಯೆಗಳಿಗೆ ನ್ಯಾಯಯುತವಾದ ಪರಿಹಾರ ಒದಗಿಸಬಲ್ಲದು' ಅನ್ನುವ ನಂಬಿಕೆ ಆಳವಾಗಿ ಬೇರೂರುತ್ತಿದೆ ಅಂದುಕೊಳ್ಳುವಾಗಲೇ ಅದಕ್ಕೆ ವಿರುದ್ಧವಾದ ಚಲನೆಯಂತೆ ಹಲವು ದೇಶಗಳಲ್ಲಿ ಉಗ್ರ ರಾಷ್ಟ್ರೀಯತೆಯ ವಾದ ಮತ್ತೆ ತಲೆ ಎತ್ತುತ್ತಿದೆ.

ಕಳೆದ ಮೂವತ್ತು-ನಲವತ್ತು ವರ್ಷಗಳ ಆರ್ಥಿಕ ನೆಲೆಯ ಜಾಗತೀಕರಣವು ದೇಶಗಳ ಗಡಿಗಳನ್ನು ಬಹುಮಟ್ಟಿಗೆ ಅಪ್ರಸ್ತುತಗೊಳಿಸುತ್ತಿದೆ. ಅಭಿವೃದ್ಧಿಯ ವೇಗದಲ್ಲೇ ಪರಿಸರ ನಾಶವೂ ಜಗದೆಲ್ಲೆಡೆ ಆಗುತ್ತಿದೆ. ಅದರ ಪರಿಣಾಮವಾಗಿ ಜಾಗತಿಕ ತಾಪಮಾನ ಏರಿಕೆಯು ಆಹಾರ ಭದ್ರತೆಗೆ ಸವಾಲು ಒಡ್ಡುತ್ತಿದೆ. ಇನ್ನೊಂದೆಡೆ ತಂತ್ರಜ್ಞಾನದಲ್ಲಾಗುತ್ತಿರುವ ನಾಗಾಲೋಟದ ಬದಲಾವಣೆಗಳು ಮನುಷ್ಯನ ಜೀವನವನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಮರುರೂಪಿಸುವ ಕಾಲಘಟ್ಟ ಬರುತ್ತಿದೆ. ಮನುಕುಲದ ಮುಂದೆ ಇಂತಹ ಶತಮಾನದ ಬಿಕ್ಕಟ್ಟುಗಳು ಎದುರಾಗುತ್ತಿರುವಾಗ ಇವುಗಳಿಗೆ ಪರಿಹಾರ ಸೂಚಿಸುವ ಶಕ್ತಿ 'ನನ್ನ ದೇಶವೇ ಶ್ರೇಷ್ಠ' ಅನ್ನುವ ಇಂದಿನ ರಾಷ್ಟ್ರೀಯತೆಯ ಪರಿಕಲ್ಪನೆಗೆ ಇದೆಯೇ? ಹಾಗಿದ್ದರೆ 21ನೇ ಶತಮಾನದ ರಾಷ್ಟ್ರೀಯತೆ ಹೇಗಿರಬೇಕಿದೆ?

ರಾಷ್ಟ್ರೀಯತೆಯ ಹುಟ್ಟು, ಬೆಳವಣಿಗೆ ಬಗ್ಗೆ ಓದುವಾಗ ಇತಿಹಾಸತಜ್ಞ ಹಾಗೂ ರಾಜಕೀಯ ವಿಜ್ಞಾನಿ ಬೆನೆಡಿಕ್ಟ್ ಆಂಡರ್ಸನ್ ಪ್ರತಿಪಾದಿಸಿದ 'ಇಮ್ಯಾಜಿನ್ಡ್ ಕಮ್ಯೂನಿಟೀಸ್' ಅನ್ನುವ ವಾದವನ್ನು ಮತ್ತೊಮ್ಮೆ ನೆನಪಿಸಿಕೊಳ್ಳಬೇಕಾಗುತ್ತದೆ. ಆತನ ಪ್ರಕಾರ ರಾಷ್ಟ್ರ ಅನ್ನುವುದು ಒಂದು ಕಲ್ಪಿತ ಸಮುದಾಯ. ಎಷ್ಟು ಪುಟ್ಟ ದೇಶವಾದರೂ ಅಲ್ಲಿನ ಒಬ್ಬನಿಗೆ ಉಳಿದ ಎಲ್ಲ ಸದಸ್ಯರ ವೈಯಕ್ತಿಕ ಪರಿಚಯ ಇರುವುದು ಸಾಧ್ಯವಿಲ್ಲ. ಹೀಗಿದ್ದಾಗಲೂ ಆ ದೇಶದವರೆಲ್ಲ ಒಂದೇ ಅಂದುಕೊಳ್ಳಬೇಕೆಂದರೆ ಅದು ಕಲ್ಪನೆಯಿಂದಷ್ಟೇ ಸಾಧ್ಯ. ಪುರಾಣ ಇಲ್ಲವೇ ಇತಿಹಾಸದ ಯಾವುದೋ ಒಂದು ನೆಲೆಯಲ್ಲಿ ಒಂದು ಭೌತಿಕ ಗಡಿಯಿರುವ ರಾಷ್ಟ್ರ ಅನ್ನುವ ಕಲ್ಪನೆಯನ್ನು ಕಟ್ಟಿ, ಮುದ್ರಣ ಮತ್ತು ಸಮೂಹ ಮಾಧ್ಯಮಗಳ ಮೂಲಕ ಅದನ್ನು ಪಸರಿಸಿ, ಜನಸಾಮಾನ್ಯರಲ್ಲಿ ಈ ಗಡಿಯೊಳಗಿನವರೆಲ್ಲ ನಮ್ಮವರು, ಅದರಾಚೆಯವರೆಲ್ಲ ಹೊರಗಿನವರು ಎಂದು ನಂಬಿಸುತ್ತ, ಯುರೋಪಿನಲ್ಲಿ ಹುಟ್ಟಿ ಅಲ್ಲಿಂದ ಜಗತ್ತಿಗೆಲ್ಲ ಹರಡಿದ್ದು ಇಂದಿರುವ 'ರಾಷ್ಟ್ರ' ಅನ್ನುವ ಪರಿಕಲ್ಪನೆ.

ಈ ಪರಿಕಲ್ಪನೆಯು 18ನೆಯ ಶತಮಾನದಿಂದ ಈಚೆಗೆ ವ್ಯಾಪಕವಾಗಿ ಎಲ್ಲೆಡೆ ಹರಡಲು ಬಹಳ ದೊಡ್ಡ ಕೊಡುಗೆ ಕೊಟ್ಟದ್ದು ಮುದ್ರಣ ತಂತ್ರಜ್ಞಾನ. ಕಲ್ಪಿತ ಸಮುದಾಯವಾದ ರಾಷ್ಟ್ರವೊಂದರಲ್ಲಿ ಆ ಕಲ್ಪನೆಯನ್ನು ವ್ಯಾಪಕವಾಗಿ ಬಿತ್ತಿ, ಬೆಳೆಸುವಲ್ಲಿ ಮುದ್ರಣ ಮಾಧ್ಯಮದ ಪಾತ್ರ ಜಗತ್ತಿನೆಲ್ಲೆಡೆ ಕಾಣಬಹುದು. ಹೀಗೆ ಹುಟ್ಟಿದ ರಾಷ್ಟ್ರ ಅನ್ನುವ ಪರಿಕಲ್ಪನೆಯು ಪ್ರಜಾಪ್ರಭುತ್ವದಡಿ ಗಟ್ಟಿಗೊಂಡಲ್ಲೆಲ್ಲ ಅದು ಜನರ ನಡುವೆ ಸಹಕಾರ ಹೆಚ್ಚಿಸಿ, ಏಳಿಗೆ ಸಾಧಿಸಲು ದಾರಿ ಮಾಡಿಕೊಟ್ಟರೆ, ಸರ್ವಾಧಿಕಾರಿ ಧೋರಣೆಯ ನಾಯಕತ್ವದ ದೇಶಗಳಲ್ಲಿ ಜನರನ್ನು ಶೋಷಿಸುವ ಒಂದು ಸಾಧನವೂ ಆಯಿತು.

ರಾಷ್ಟ್ರೀಯತೆಯ ವಾದ ಎಲ್ಲೆ ಮೀರಿದಾಗ ಏನಾಗುತ್ತದೆ ಅನ್ನುವುದನ್ನು ನಾವು 20ನೆಯ ಶತಮಾನದ ಮೊದಲ ಭಾಗದಲ್ಲಿ ಎರಡು ವಿಶ್ವಯುದ್ಧಗಳು ಮತ್ತು ಅವು ತಂದ ಅಪಾರ ಸಾವು, ನೋವಿನಲ್ಲಿ ಕಂಡಿದ್ದೇವೆ. ಅವು ಕಲಿಸಿದ ಪಾಠ ಕಳೆದ ಏಳು ದಶಕಗಳ ಅವಧಿಯುದ್ದಕ್ಕೂ ನಮ್ಮನ್ನು ಎಚ್ಚರಿಸುತ್ತಲೇ ಇದೆ. ಈ ಅವಧಿಯಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ ಹೆಚ್ಚಿರುವುದು, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ ಮತ್ತು ಶಿಕ್ಷಣದ ವಿಷಯಗಳಲ್ಲಿ ಅಪಾರ ಪ್ರಗತಿಯಾಗಿರುವುದನ್ನು ಕಾಣಬಹುದು. ಇವೆಲ್ಲದರ ನಡುವೆಯೇ ಈಗ ಮತ್ತೆ ಉಗ್ರ ರಾಷ್ಟ್ರೀಯತೆಯ ವಾದ ಪ್ರಪಂಚದ ಹಲವೆಡೆ ಮುನ್ನೆಲೆಗೆ ಬರುತ್ತಿದೆ. ಜಾಗತೀಕರಣದ ಕಾರಣದಿಂದ ಆಗುತ್ತಿರುವ ಅನಿಯಂತ್ರಿತ ವಲಸೆ, ಪರಿಸರದಲ್ಲಿನ ವ್ಯಾಪಕ ಬದಲಾವಣೆ ತರುತ್ತಿರುವ ಅನಿಶ್ಚಿತತೆ ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸಿ ಕಟ್ಟಲಾಗುತ್ತಿರುವ ಸತ್ಯೋತ್ತರ ಜಗತ್ತು ಇತ್ಯಾದಿಗಳು ಇವುಗಳಿಗೆ ಕಾರಣಗಳಾಗಿರಬಹುದು. ಕಾರಣಗಳೇನೇ ಇದ್ದರೂ 21ನೆಯ ಶತಮಾನಕ್ಕೆ ಯಾವ ಮಾದರಿಯ ರಾಷ್ಟ್ರೀಯತೆ ಬೇಕು ಅನ್ನುವ ಕುರಿತು ಮನುಕುಲ ಈಗ ಚಿಂತಿಸಬೇಕಿದೆ.

ಈ ಕುರಿತು ಚಿಂತಿಸುತ್ತಿರುವ ಇತಿಹಾಸ ತಜ್ಞರಲ್ಲಿ ಪ್ರಮುಖರು ಇಸ್ರೇಲಿನ ಯುವಲ್ ನೋವಾ ಹರಾರಿ. 20-21-22ನೇ ಶತಮಾನದ ಕುರಿತು ಹಲವು ಒಳನೋಟಗಳುಳ್ಳ ಪುಸ್ತಕಗಳನ್ನು ಬರೆದಿರುವ ಅವರ ಪ್ರಕಾರ ದೇಶ-ದೇಶಗಳ ನಡುವೆ ಸಹಕಾರದ ಹಾದಿಯನ್ನೇ ಕೇಂದ್ರವಾಗಿರಿಸಿಕೊಳ್ಳುವ ಹೊಸತೊಂದು ರಾಷ್ಟ್ರೀಯತೆಯತ್ತ ಹೊರಳದೇ ಈ ಹೊತ್ತಿನ ಜಾಗತಿಕ ಸ್ವರೂಪದ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಪರಿಹಾರ ಕಟ್ಟುವುದು ಅಸಾಧ್ಯ. ಇನ್ನೊಂದು ಅಣು ಯುದ್ಧವಾದರೆ ಅದು ಇಡೀ ಜಗತ್ತಿನ ಆಹಾರ ಭದ್ರತೆಯನ್ನು ನಾಶ ಮಾಡಬಹುದು. ಪರಿಸರದಲ್ಲಿ ಆಗುತ್ತಿರುವ ಬದಲಾವಣೆಯಿಂದ ಪ್ರಪಂಚದೆಲ್ಲೆಡೆ ಹೊತ್ತಲ್ಲದ ಹೊತ್ತಲ್ಲಿ ಬರ ಮತ್ತು ನೆರೆ ಸಾಮಾನ್ಯವಾಗುತ್ತಿವೆ. ಭೂಮಿಯ ತಾಪಮಾನ ಒಂದು ಡಿಗ್ರಿ ಏರಿದರೆ ಕಡಲ ದಂಡೆಯ ಹಲವು ಮಹಾನಗರಗಳು ಸಮುದ್ರದಡಿ ಜಾರಲಿವೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಭಿವೃದ್ಧಿಯಾಗುತ್ತ ಹೋದಂತೆ ಆಟೊಮೇಷನ್ ಅನ್ನುವುದು ಜಗತ್ತಿನಲ್ಲಿ ಈಗಿರುವ ಕೋಟಿಗಟ್ಟಲೆ ಉದ್ಯೋಗಗಳನ್ನು ಇನ್ನಿಲ್ಲವಾಗಿಸಬಹುದು, ಅವು ಹಲವು ದೇಶಗಳಲ್ಲಿ ಅರಾಜಕತೆಗೂ, ಅಲ್ಲಿಂದ ಸಿರಿವಂತ ದೇಶಗಳಿಗೆ ತಡೆಯಿಲ್ಲದ ವಲಸೆಗೂ ಕಾರಣವಾಗಬಹುದು. ಯುದ್ಧ ಸಾಧನವಾಗಿ ಕಿಲ್ಲರ್ ರೋಬಾಟ್ಸ್ ತರದ ಸರಿ-ತಪ್ಪಿನ ವಿವೇಕ ಇಲ್ಲದ ರೋಬೊ ಯೋಧರು ಮುಂದಿನ ದಿನಗಳಲ್ಲಿ ಹೊಸ ಸಾಮ್ರಾಜ್ಯಶಾಹಿಯ ಸ್ಥಾಪನೆಗೆ ಕಾರಣವಾಗಬಹುದು. ಇವೆಲ್ಲ ಒಂದು ತೂಕವಾದರೆ ಬಯೊಟೆಕ್ನಾಲಜಿಯಲ್ಲಿ ಆಗುತ್ತಿರುವ ಬದಲಾವಣೆಗಳು ಮನುಷ್ಯನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನು ಹಿಂದೆಂದೂ ಇಲ್ಲದ ರೀತಿಯಲ್ಲಿ ಬದಲಾಯಿಸಿ ನೈಸರ್ಗಿಕ ಆಯ್ಕೆಯ ಜಾಗದಲ್ಲಿ ಬುದ್ಧಿವಂತಿಕೆ ವಿನ್ಯಾಸ ಬಂದು ಕೂರುವಂತಹ ಬದಲಾವಣೆಗಳು ನಡೆಯಬಹುದು. ಇಂತಹ ಹಲವು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಬಿಕ್ಕಟ್ಟುಗಳನ್ನು ಮನುಕುಲ ನಿಭಾಯಿಸಲು ಈ ಹೊತ್ತಿನ ರಾಷ್ಟ್ರೀಯತೆಯ ವಾದದ ಕೈಯಲ್ಲಿ ಸಾಧ್ಯವಿಲ್ಲ, ಅದಕ್ಕೆ ಜಾಗತಿಕ ಸಹಕಾರದ ಸುತ್ತ ಹೆಣೆಯಲಾದ ಹೊಸ ರಾಷ್ಟ್ರೀಯತೆಯ ವಾದದ ಅಗತ್ಯವಿದೆ ಅನ್ನುವುದು ಅವರ ಅನಿಸಿಕೆ.

ತೆರೆದ ಮನದಿಂದ ನೋಡುವುದಾದರೆ ಅವರ ಮಾತುಗಳಲ್ಲಿ ಆಳವಾದ ವಿವೇಕವಿದೆ. ಅವರು ಜಾಗತಿಕ ಸಹಕಾರವನ್ನು ದೇಶ-ದೇಶಗಳ ನಡುವಿನ ವಿಚಾರವಾಗಿ ಪ್ರತಿಪಾದಿಸಿದ್ದರೂ ಅವು ದೇಶದೊಳಗಿನ ವಿಚಾರಗಳಿಗೂ ಅನ್ವಯವಾಗುತ್ತವೆ ಅನ್ನಲು ಅಡ್ಡಿಯಿಲ್ಲ. ಯಾಕೆಂದರೆ ಈ ಬಿಕ್ಕಟ್ಟುಗಳು ಕೇವಲ ದೇಶ-ದೇಶಗಳ ಗಡಿಯ ಸಾರ್ವಭೌಮತ್ವದ ಸುತ್ತಲಿನದ್ದಲ್ಲ. ಇವು ಅದಕ್ಕೂ ಮಿಗಿಲಾದದ್ದು. ಇಲ್ಲಿ ಪರಿಹಾರ ರೂಪಿಸುವ ಕೆಲಸದಲ್ಲಿ ಒಳಗೊಳ್ಳುವಿಕೆಯೆನ್ನುವುದನ್ನು ಹಲವು ಮಟ್ಟಗಳಲ್ಲಿ ಸಾಧ್ಯವಾಗಿಸಬೇಕಿದೆ. ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಜಗತ್ತಿನ ಆರರಲ್ಲಿ ಒಂದು ಭಾಗ ಜನಸಂಖ್ಯೆ ನೆಲೆಗೊಂಡಿದೆ. ಮೇಲೆ ಚರ್ಚಿಸಿದ ಶತಮಾನದ ಕೆಲ ಹೊಸ ಸವಾಲುಗಳು ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ತನ್ನ ಪರಿಣಾಮ ತೋರಬಹುದು. ಬೇರೆ ಬೇರೆ ರಾಜ್ಯಗಳು ಇದಕ್ಕೆ ಬೇರೆ ಬೇರೆಯಾದ ರೀತಿಯಲ್ಲಿ ಸ್ಪಂದಿಸಬೇಕಾಗಬಹುದು. ಹಾಗೆ ಸ್ಪಂದಿಸಲು ಅವುಗಳಿಗೆ ಒಂದು ಮಟ್ಟಿಗಿನ ಆರ್ಥಿಕ ಮತ್ತು ರಾಜಕೀಯವಾದ ಸ್ವಾಯತ್ತೆ ಇರಬೇಕಾಗುತ್ತದೆ. ಇದನ್ನು ಸಹಕಾರದ ಹಾದಿಯಲ್ಲಿ ಪರಿಣಾಮಕಾರಿಯಾಗಿ ಸಾಧ್ಯವಾಗಿಸಬೇಕೆಂದರೆ ಸಹಕಾರಿ ತತ್ವದ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವುದೇ ದಾರಿ. ರಾಜ್ಯಗಳನ್ನು ಹಾಗೆ ಸಬಲಗೊಳಿಸಿದಷ್ಟೂ ದೇಶವೂ ಬಲಗೊಳ್ಳುವುದು. ಎಲ್ಲವನ್ನೂ ದೆಹಲಿಯಿಂದಲೇ ನಿರ್ಧರಿಸುತ್ತೇವೆ ಅಂತ ಹೊರಡುವ ಮನಃಸ್ಥಿತಿಯಿಂದಂತೂ ಈ ಹೊಸ ಸವಾಲುಗಳಿಗೆ ಪರಿಹಾರ ಕಲ್ಪಿಸುವುದು ಸಾಧ್ಯವಾಗದು. ಅದೇ ಈ ಹೊತ್ತಿನ ತಿಳಿವಾಗಬೇಕು.

ಚುರುಮುರಿ

ದಿವ್ಯ ದೃಷ್ಟಿ!

● ಬಿ.ಎನ್.ಮಲ್ಲೇಶ್

'ಹಲೋ... ಬ್ರೇಕಿಂಗ್ ನ್ಯೂಸ್ ಟೀವಿ ರಿಪೋರ್ಟ್ರು ತೆಪರೇಸಿ ಸಾಹೇಬ್ರಾ?'

'ಹೌದು, ಯಾರು ಮಾತಾಡೋದು?'

'ನಾನು ಹೊಸಳ್ಳಿ ಬಾಬಣ್ಣ ಸಾ, ನಂದೊಂದು ಎಮ್ಮೆ ಕಳೆದಿತ್ತು. ಹುಡುಕಿ ಕೊಡ್ತೀರೇನೋ ಅಂತ ಕೇಳಾಕೆ ಫೋನ್ ಮಾಡ್ದೆ...'

'ರೀ...ನಾವು ಟೀವಿಯೋರು, ಎಮ್ಮೆ ಹುಡುಕಿ ಕೊಡೋರಲ್ಲ. ಪೊಲೀಸರಿಗೆ ಕಂಪ್ಲೇಂಟ್ ಕೊಡಿ, ಹುಡುಕಿ ಕೊಡ್ತಾರೆ'.

'ಸರಿ ಹೋತು, ಅಲ್ಲ ಸಾ ದಿನಕ್ಕೊಂದು ವಿಡಿಯೊ ಬಿಡ್ತಿರೋ ಆ ಸೀಡಿ ಹುಡುಗೀನೇ ಹುಡುಕೋಕೆ ಆಗ್ಲಿಲ್ಲ ಅವರಿಗೆ. ಇನ್ನು ಕಳೆದೋಗಿರೋ ನನ್ನ ಎಮ್ಮೆ ಹುಡುಕಿ ಕೊಡ್ತಾರಾ?'

'ಅದೆಲ್ಲ ಗೊತ್ತಿಲ್ಲ, ನನ್ನ ನಂಬರ್ ಯಾರು ಕೊಟ್ರು ನಿಮಗೆ?'

'ನೀವು, ನಿಮ್ಮ ಟೀವಿಯೋರ ದಿವ್ಯದೃಷ್ಟಿಗೆ ಎಲ್ಲ ಗೊತ್ತಾಗುತ್ತೆ ಅಂತ ಯಾರೋ ಹೇಳಿದ್ರು, ಅದ್ಕೇ ಕೇಳಿದೆ. ದಿನಕ್ಕೆ ಆರು ಲೀಟರು ಹಾಲು ಕರೆಯೋ ಎಮ್ಮೆ ಸಾರ್ ಅದು...'

'ರೀ ಇಡ್ರಿ ಫೋನು... ಅದು ಎಷ್ಟ್ ಲೀಟರಾದ್ರು ಕರೀಲಿ, ನಮಗೆ ದಿವ್ಯದೃಷ್ಟಿ ಇದೆ ಅಂತ ನಿಮಗ್ಯಾರು ಹೇಳಿದ್ರು?'

'ಅಲ್ಲ ಸಾ, ಆ ಯುವತಿ ಜಡ್ಜ್ ಮುಂದೆ ಹೇಳಿಕೆ ಕೊಡುವಾಗ ಅಲ್ಲಿ ಯಾರ್ಯಾರಿದ್ರು?'

'ಜಡ್ಜ್ ಸಾಹೇಬ್ರು, ಯುವತಿ, ಆಮೇಲೆ ಟೈಪಿಸ್ಟು ಮೂರೇ ಜನ...'

'ಅಲ್ವ ಸಾ? ಆದ್ರೆ ನಿಮ್ ಟೀವಿಯಲ್ಲಿ ಜಡ್ಜ್ ಮುಂದೆ ಆ ಹುಡುಗಿ ಏನೇನ್ ಹೇಳಿಕೆ ಕೊಟ್ರು ಅನ್ನೋದನ್ನ ಅಕ್ಷರಕ್ಷರ ಬಿಡಿಸಿ ತೋರಿಸಿದ್ರಲ್ಲ, ಹೆಂಗೆ ಸಾ? ದಿವ್ಯದೃಷ್ಟಿ ತಾನೇ?'

ತೆಪರೇಸಿಗೆ ಇದು ಯಾರೋ ಕಿತಾಪತಿ ಮಾಡ್ತಿದಾರೆ ಅನ್ನಿಸಿತು. 'ಯಾರು ಮಾತಾಡ್ತಿರೋದು? ಗುಡ್ಡೆನಾ?' ಎಂದ.

'ಲೇ ತೆಪರ, ನಾನು ದುಬ್ಬೀರ, ಇದು ನನ್ ಹೊಸ ನಂಬರು. ಈಗೇನು ಎಮ್ಮೆ ಹುಡುಕಿ ಕೊಡ್ತೀಯೋ ಇಲ್ವೊ?' ಅಂದ. ಇಬ್ಬರೂ ಗೊಳ್ಳಂತ ನಕ್ಕರು.

ಸಂಗತ

ವಿವೇಕ ಹಕ್ಕಿಯ ವಿಶೇಷ ಸಂತಾನ

ಈ ಹಕ್ಕಿಯ ದೀರ್ಘಾಯುಷ್ಯ ಮತ್ತು ಸಂತಾನಾಭಿವೃದ್ಧಿ ಸಾಮರ್ಥ್ಯಗಳು ಅಧ್ಯಯನಕಾರರಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿವೆ

● ಶ್ರೀಗುರು

ಎರ್ರಮಟ್ಟಿ ಮಂಗ್ಯಮ್ಮ ಮತ್ತು ದಲ್ಜೀಂದರ್ ಕೌರ್ ಇಬ್ಬರೂ ತಮ್ಮ 70ರ ವಯಸ್ಸಿನಲ್ಲಿ ತಾಯಂದಿರಾದಾಗ ಇಡೀ ಜಗತ್ತೇ ಅಚ್ಚರಿಪಟ್ಟಿತ್ತು. ವೈದ್ಯಲೋಕ ತನ್ನ ಅಪರೂಪದ ಸಾಧನೆಯ ಬಗ್ಗೆ ಪುಟಗಟ್ಟಲೆ ಹೇಳಿಕೆ ನೀಡಿತ್ತು. ಅಂಥ ಇಳಿವಯಸ್ಸಿನಲ್ಲಿ ತಾಯಿಯಾಗುವುದು ಮೂರ್ಖತನದ ಪರಮಾವಧಿ ಎಂದು ಆತಂಕ ಪಟ್ಟವರೂ ಇದ್ದರು. ಆದರೆ ಇಲ್ಲೊಬ್ಬಳು ತನ್ನ 70ರ ಹರೆಯದಲ್ಲಿ 35ನೇ ಬಾರಿ ತಾಯಿಯಾದದ್ದಕ್ಕೆ ಇಡೀ ಜಗತ್ತೇ ಅವಳನ್ನು ಕೊಂಡಾಡುತ್ತಿದೆ.

ದೇಶ– ವಿದೇಶಗಳ ಜನ ಅವಳ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಅಂಟಿಸಿ, ಯೋಗಕ್ಷೇಮ ವಿಚಾರಿಸಿ ಶುಭಾಶಯ ಹೇಳುತ್ತಿದ್ದಾರೆ. ಅಂದ ಹಾಗೆ ಹವಾಯ್ ದ್ವೀಪ ನಿವಾಸಿಯಾದ ಅವಳ ಹೆಸರು 'ವಿಸ್ಡಂ ಲಯಸನ್ ಅಲ್‌ಬಟ್ರಾಸ್'.

ಫೊಬಾಸ್ಟ್ರಿಯ ಇಮ್ಯುಟಾಬಿಲಿಸ್ ಎಂಬ ವೈಜ್ಞಾನಿಕ ಹೆಸರಿನ, 80 ಸೆಂಟಿಮೀಟರ್ ಉದ್ದ, 2.5 ಕೆ.ಜಿ. ತೂಕ, ಬಿಳಿ ದೇಹ, ಕಂದುಬಣ್ಣದ ವಿಶಾಲ ರೆಕ್ಕೆಯ ಈ ಸಮುದ್ರ ಪಕ್ಷಿ, ಹವಾಯ್ ದ್ವೀಪದ ಲಯಸನ್ ಭಾಗದಲ್ಲಿ ಹೆಚ್ಚಾಗಿರುವುದರಿಂದ ಇದನ್ನು ಲಯಸನ್ ಅಲ್‌ಬಟ್ರಾಸ್ ಎಂದು ಕರೆಯುತ್ತಾರೆ.

ಇದು ಪೆಸಿಫಿಕ್ ಸಾಗರದ ಉತ್ತರದವರೆಗೂ ತನ್ನ ಆವಾಸ ಹೊಂದಿದೆ. ಇದುವರೆಗಿನ ತನ್ನ ಜೀವಿತಾವಧಿಯಲ್ಲಿ 35ಕ್ಕೂ ಹೆಚ್ಚು ಸಲ ಮೊಟ್ಟೆ ಇಟ್ಟಿರುವ ವಿಸ್ಡಂ, ಜಗತ್ತಿನಲ್ಲಿ ಜೀವಂತವಿರುವ ವನ್ಯ ಪಕ್ಷಿಗಳಲ್ಲೇ ಅತ್ಯಂತ ಹಿರಿದು ಎಂಬ ಖ್ಯಾತಿ ಪಡೆದಿದೆ. ಹಕ್ಕಿಯನ್ನು ಹವಾಯ್ ಬುಡಕಟ್ಟು ಜನರ ಆರಾಧ್ಯದೈವ 'ಲೋನೊ'ದ ಜೀವಂತ ರೂಪ ಎಂದೇ ನಂಬಲಾಗಿದೆ.

ಇಟ್ಟ ಮೊಟ್ಟೆಯನ್ನು ಫೆಬ್ರುವರಿ 1ರಂದು ಮರಿ ಮಾಡಿರುವ ಅಲ್‌ಬಟ್ರಾಸ್ ಹಕ್ಕಿ ಸದ್ಯಕ್ಕೆ ಪೆಸಿಫಿಕ್ ತೀರದ ಉತ್ತರದಲ್ಲಿರುವ ಮಿಡ್‌ವೇ ಅಟಾಲ್ ವನ್ಯಪಕ್ಷಿ ಪುನರ್ವಸತಿ ಕೇಂದ್ರದಲ್ಲಿದ್ದು ಎಲ್ಲರ ಗಮನ ಸೆಳೆದಿದೆ. ಕಳೆದ ಹತ್ತು ವರ್ಷಗಳಿಂದ ಜೊತೆಗಿರುವ ತನ್ನ ಸಂಗಾತಿ ಅಕೆಯಕಮಾಯ್ ಜೊತೆಗೂಡಿ ಮೊಟ್ಟೆಗೆ ಕಾವು ಕೊಟ್ಟು ಮರಿಮಾಡಿರುವ ವಿಸ್ಡಂ, ತನ್ನ ಓರಗೆಯ ಅನೇಕ ಪಕ್ಷಿಗಳ ಹೊಟ್ಟೆ ಉರಿಸುತ್ತಿದೆ. ವಿಶೇಷವೆಂದರೆ, 1956ರಲ್ಲಿ ಇದನ್ನು ಗುರುತಿಸಿ ಕೊರಳಿಗೆ ಪಟ್ಟಿ ಕಟ್ಟಿದ್ದ ಜೀವವಿಜ್ಞಾನಿ ಚನ್‌ಡ್ಲರ್ ರಾಬಿನ್ಸ್ ಈಗ ಬದುಕಿಲ್ಲ. ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಒಂದು ಮೊಟ್ಟೆ ಇಟ್ಟು, ಗೂಡು ಕಟ್ಟಿ ಸಂತಾನಾಭಿವೃದ್ಧಿ ಕೈಗೊಳ್ಳುವ ಅಲ್‌ಬಟ್ರಾಸ್‌ಗಳು 65 ದಿನಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ. ಸದಾ ಗುಂಪು ಗುಂಪಾಗಿ ವಾಸಿಸುವ ಇವುಗಳು ತಾವಿರುವ ಜಾಗದಲ್ಲೇ ವಿವಿಧ ಆಕಾರ, ಮಾದರಿಯ ಗೂಡುಗಳನ್ನು ನಿರ್ಮಿಸುತ್ತವೆ. ಸಮರ್ಥವಾಗಿ ಹಾರುವುದನ್ನು ಕಲಿತಾದ ಮೇಲೆ ಕಾಲೊನಿಗೆ ಬರುವ ಹಕ್ಕಿಗಳು ಎಂಟು-ಒಂಬತ್ತು ವರ್ಷಗಳವರೆಗೆ ಸಂತಾನಾಭಿವೃದ್ಧಿ ಕೆಲಸದಲ್ಲಿ ತೊಡಗುವುದಿಲ್ಲ. ಆದರೆ ಅಷ್ಟೂ ವರ್ಷಗಳ ಕಾಲ ಸಂಗಾತಿಯೊಂದಿಗೆ ಡೇಟಿಂಗ್ ಮಾಡುತ್ತಿರುತ್ತವೆ!

ಅಲ್‌ಬಟ್ರಾಸ್‌ಗಳ ಸುರಕ್ಷಿತ ಸಂತಾನಾಭಿವೃದ್ಧಿ ತಾಣವೆನಿಸಿರುವ ಮಿಡ್‌ವೇ ಅಟಾಲ್ ನ್ಯಾಷನಲ್ ವೈಲ್ಡ್‌ಲೈಫ್ ರೆಫ್ಯೂಜ್‌ಗೆ ಬಂದ ವಿಸ್ಡಂ, ನವೆಂಬರ್ 29ರಂದು ಮೊಟ್ಟೆ ಇಟ್ಟಿದ್ದನ್ನು ಉಸ್ತುವಾರಿ ತಜ್ಞರು ಗಮನಿಸಿದ್ದರು. ಅಲ್ಲಿನ ಸಂಸ್ಕೃತಿಯ ಪ್ರಕಾರ, ಈ ಹಕ್ಕಿಗಳು ಹವಾಯಿಯ ಶ್ರಾವಣಮಾಸ ಎಂದೇ ನಂಬಲಾಗಿರುವ 'ಮಹಾಹಿಕಿ' ವೇಳೆಗೆ ಸಂತಾನಾಭಿವೃದ್ಧಿಗೆ ಹಕ್ಕಿ ತಂಗುದಾಣಕ್ಕೆ ಬರುತ್ತವೆ. ಈಗ ಇಳಿವಯಸ್ಸಿನಲ್ಲಿ ಮೊಟ್ಟೆ ಇಟ್ಟು ಮರಿ ಮಾಡಿ ಸುದ್ದಿಯಾಗಿರುವ ವಿಸ್ಡಂನ ಕಾಲಿಗೆ Z 333 ಎಂಬ ಸಂಕೇತದ ಕೆಂಪು ಪಟ್ಟಿಯನ್ನು ಕಟ್ಟಲಾಗಿದೆ. ಅಮೆರಿಕದ ಮೀನು ಮತ್ತು ವನ್ಯಜೀವಿ ಸಂರಕ್ಷಣಾ ತಜ್ಞ ಜಾನ್ ಪ್ಲಿಸ್ನರ್ 'ವಿಸ್ಡಂ ಅನ್ನು ಕಳೆದ 30 ವರ್ಷಗಳಿಂದ ಅಭ್ಯಸಿಸುತ್ತಿದ್ದು ಅದು ಪ್ರತೀ ವರ್ಷ ಮಿಡ್‌ವೇ ಅಟಾಲ್‌ಗೆ ಬರುವುದನ್ನೇ ಕಾಯುತ್ತಿರುತ್ತೇನೆ. ಅದು ಬಂದ ದಿನ ನನ್ನ ಜೀವನದ ಅತ್ಯಂತ ಸಂತಸದ ದಿನವಾಗಿರುತ್ತದೆ' ಎನ್ನುತ್ತಾರೆ. ವಿಸ್ಡಂ, ಕಳೆದ 15 ವರ್ಷಗಳಿಂದ ಮಿಡ್‌ವೇಗೆ ಬಂದು ಒಂದೊಂದು ಮರಿಗೆ ಜನ್ಮ ನೀಡಿ ಪಕ್ಷಿ ತಜ್ಞರ ಮೆಚ್ಚುಗೆ ಮತ್ತು ಅಚ್ಚರಿಗಳೆರಡಕ್ಕೂ ಕಾರಣವಾಗಿದೆ.

ಕಳೆದ 85 ವರ್ಷಗಳಿಂದ ಈ ಹಕ್ಕಿಗಳ ಅಧ್ಯಯನ ಕೈಗೊಳ್ಳಲಾಗಿದೆ. 'ವಿಸ್ಡಂನ ದೀರ್ಘಾಯುಷ್ಯ ಮತ್ತು ಸಂತಾನಾಭಿವೃದ್ಧಿ ಸಾಮರ್ಥ್ಯಗಳು ಅಧ್ಯಯನಕಾರರಿಗೆ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿರುವುದರ ಜೊತೆಗೆ ಅವುಗಳನ್ನು ಸಮರ್ಥವಾಗಿ ಹೇಗೆ ರಕ್ಷಿಸಬಹುದೆಂಬ ಸುಳಿವನ್ನೂ ನೀಡುತ್ತಿವೆ' ಎಂದಿದ್ದಾರೆ ಅಮೆರಿಕನ್ ಬರ್ಡ್ ಕನ್ಸರ್ವೇಷನ್‌ನ ತಜ್ಞ ಫ್ಲೆಂಟ್. ಕಳೆದ ಎಪ್ಪತ್ತು ವರ್ಷಗಳ ಜೀವಿತಾವಧಿಯಲ್ಲಿ ತನ್ನ ಓರಗೆಯ ಹಕ್ಕಿಗಳಿಗಿಂತ ಎರಡು ಪಟ್ಟು ಹೆಚ್ಚು ಜೀವನ ನಡೆಸಿ 45 ಲಕ್ಷ ಕಿಲೊ ಮೀಟರ್ ಹಾರಾಟ ನಡೆಸಿರುವ ವಿಸ್ಡಂ, ಭೂಮಿಯನ್ನು 120 ಸಾರಿ ಪ್ರದಕ್ಷಿಣೆ ಹಾಕುವಷ್ಟು ದೂರ ಹಾರಾಟ ನಡೆಸಿದ ದಾಖಲೆ ಮಾಡಿದೆ. 2011ರ ತೋಹೋಕು ಸುನಾಮಿ ಮತ್ತು ಭೂಕಂಪಗಳೆರಡನ್ನೂ ಮೆಟ್ಟಿನಿಂತು ಸದೃಢ ಜೀವನ ಸಾಗಿಸುತ್ತಿರುವ ಈ ಹಕ್ಕಿಯ ಕಾಲಿನ ಸಂಕೇತ ಪಟ್ಟಿಯನ್ನು ಈವರೆಗೆ ಆರು ಸಲ ಬದಲಾಯಿಸಲಾಗಿದೆ. ವಾಯುಗುಣ ಬದಲಾವಣೆಯಿಂದ ಅಪಾಯದಲ್ಲಿರುವ ಹಕ್ಕಿಯ ಸಂತತಿಯನ್ನು ಉಳಿಸುವ ವಿಶ್ವಮಟ್ಟದ ಅನೇಕ ಪ್ರಯತ್ನಗಳು ನಡೆಯುತ್ತಿವೆ.

ವಾಚಕರ ವಾಣಿ

ಕನ್ನಡ– ತಮಿಳಿನ ಸವಿ ಸೇತು

ಕಂಡಕ್ಟರ್ ಆಗಿ ನೀವು ಮೊದಲು ನಡೆಸಿದ್ದು ಬಸ್ಸನ್ನೇ ಆದರೂ... ರಸ್ತೆ ಬಿಟ್ಟು ನಿಮ್ಮ ಬಸ್ಸು ಪರದೆಯೇರಿದಾಗ ಕನ್ನಡಿಗ- ತಮಿಳು ಪಯಣಿಗರೆಲ್ಲಾ ಪ್ರೇಕ್ಷಕರಾಗಿಬಿಟ್ಟರಲ್ಲಾ! ನೀವು ಟಿಕೆಟ್ ಕೊಡುವುದ ನಿಲ್ಲಿಸಿದರೂ ಕೋಟಿ ಕೋಟಿ ಅಭಿಮಾನಿಗಳು ಈಗಲೂ ನಿಮ್ಮ ಸಿನಿಮಾ ಟಿಕೆಟ್‌ಗಾಗಿ ಥಿಯೇಟರ್‌ನಲ್ಲಿ ನಿಲ್ಲುತ್ತಲೇ ಇದ್ದಾರಲ್ಲಾ!

ಅದೆಷ್ಟು ವರ್ಷವಾಯಿತೋ ನೀವು ಸೀಟಿ ಊದುವುದು ನಿಲ್ಲಿಸಿ, ಅಭಿಮಾನದ ಸೀಟಿಯ ಅಬ್ಬರ ಮಾತ್ರ ಪ್ರತಿಧ್ವನಿಸುತ್ತಲೇ ಇದೆಯಲ್ಲಾ ರಜನಿ ಸರ್... ತೃಪ್ತಿಪಟ್ಟಿದ್ದೀರಿ, ಕೃತಜ್ಞರಾಗಿದ್ದೀರಿ, ಅದಕ್ಕಾಗಿ ಈಗ ಫಾಲ್ಕೆ ಪಟ್ಟವ ಮುಡಿಗೇರಿಸಿಕೊಂಡಿದ್ದೀರಿ. ಸದಾ ಹೀಗೇ ಇರಿ, ಕನ್ನಡ– ತಮಿಳಿಗೆ ಸವಿ ಸೇತುವೆಯಾಗಿರಿ.

ಜೆ.ಬಿ.ಮಂಜುನಾಥ, ಪಾಂಡವಪುರ

ಶಾಲಾ ಮಕ್ಕಳಿಗೂ ಲಸಿಕೆ ಲಭ್ಯವಾಗಲಿ

ಕೊರೊನಾ ಸೋಂಕಿನ ಎರಡನೇ ಅಲೆಯ ಅರ್ಭಟ ಹೆಚ್ಚಾಗಿದ್ದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ವಯಸ್ಸಿನ ಅಂತರವಿಲ್ಲದೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಸೋಂಕು ತಗಲುತ್ತಿದೆ. ಇನ್ನು ಮೂರು ತಿಂಗಳಲ್ಲಿ ಹೊಸ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಅದರಂತೆ ಶಾಲಾ-ಕಾಲೇಜುಗಳು ಪುನರಾರಂಭವಾಗುವ ನಿರೀಕ್ಷೆ ಇದೆ.

ಈಗ 45 ವರ್ಷ ಮೇಲ್ಪಟ್ಟವರು ಲಸಿಕೆ ಪಡೆದು ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಲಸಿಕೆಯ ಬಗ್ಗೆ ಪ್ರಚಾರ ಉತ್ತಮವಾಗಿದೆ. ಸಾರ್ವಜನಿಕರು ಪ್ರಜ್ಞಾವಂತರಾಗುತ್ತಿದ್ದಾರೆ. ಕೆಲ ವಿದ್ಯಾರ್ಥಿಗಳು ಅಪೌಷ್ಟಿಕತೆಯಿಂದ ಕೂಡಿದ್ದು, ಕೊರೊನಾ ಸೋಂಕಿನ ಭೀತಿ ಎದುರಿಸುತ್ತಿದ್ದಾರೆ. ಆದ್ದರಿಂದ ಅಗತ್ಯವಿರುವ ವಿದ್ಯಾರ್ಥಿಗಳಿಗೂ ಸರ್ಕಾರವು ಶೀಘ್ರವಾಗಿ ಲಸಿಕೆಯನ್ನು ನೀಡುವಂತಾಗಲಿ. ಇದರಿಂದ ಮುಂದೆ ಹೊಸ ಶೈಕ್ಷಣಿಕ ವರ್ಷದಲ್ಲಿ ಶಾಲಾ ಕಾಲೇಜು ಪ್ರಾರಂಭವಾದಾಗಲೂ ವಿದ್ಯಾರ್ಥಿಗಳು ನಿರ್ಭಯರಾಗಿ ತೆರಳಬಹುದು. ಪೋಷಕರಿಗೂ ನೆಮ್ಮದಿ ಇರುತ್ತದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಪೊಲೀಸರು ಚಾಣಾಕ್ಷತನ ಮೆರೆದದ್ದು...

'ಸಿ.ಡಿ. ಸುತ್ತ ಘಟಿಂಗರ ಆಟ' ಲೇಖನದಲ್ಲಿ (ಪ್ರ.ವಾ., ಮಾರ್ಚ್ 31) ರವೀಂದ್ರ ಭಟ್ಟ ಅವರು ಪೊಲೀಸರ ವೈಫಲ್ಯವನ್ನು ಬೆಟ್ಟುಮಾಡುತ್ತ 'ಡಾ. ಎಂ.ಎಂ.ಕಲಬುರ್ಗಿ ಹತ್ಯಾ ಪ್ರಕರಣದಲ್ಲಿ ಚಾಣಾಕ್ಷತನ ಮೆರೆದವರು...' ಎಂದು ಬರೆಯುತ್ತಾರೆ. ಅಸಲಿಗೆ, ಡಾ. ಕಲಬುರ್ಗಿ ಅವರ ಹತ್ಯೆಯಾಗಿ ವರ್ಷ ಕಳೆದಿದ್ದರೂ ಆ ಪ್ರಕರಣವನ್ನು ಭೇದಿಸಲು ಪೊಲೀಸರಿಗೆ ಸಾಧ್ಯವೇ ಆಗಿರಲಿಲ್ಲ (ಅದು ಸಾಧ್ಯವಾಗುತ್ತಿದ್ದರೆ ಗೌರಿ ಲಂಕೇಶ್ ಸಾಯುತ್ತಿರಲಿಲ್ಲ).

ಕರ್ನಾಟಕ ಪೊಲೀಸರು ಇತ್ತೀಚಿನ ದಿನಗಳಲ್ಲಿ ನಿಜಕ್ಕೂ ಚಾಣಾಕ್ಷತನ ಮೆರೆದುದು ಗೌರಿ ಲಂಕೇಶ್ ಹತ್ಯಾ ಪ್ರಕರಣದ ರಹಸ್ಯ ಭೇದಿಸುವಲ್ಲಿ. ಗೌರಿ ಹತ್ಯೆಯ ಪ್ರಕರಣ ಭೇದಿಸುತ್ತಿದ್ದಂತೆ ಕಲಬುರ್ಗಿ ಹಂತಕರು ಯಾರು ಎಂಬುದು ಸ್ಪಷ್ಟವಾಯಿತು. ಗೌರಿ ಹತ್ಯಾ ಪ್ರಕರಣ ಭೇದಿಸಿದ ಪರಿ ಅತ್ಯಂತ ರೋಚಕವಾದುದು ಮತ್ತು ಕರ್ನಾಟಕ ಪೊಲೀಸರ ಕ್ಷಮತೆಯ ಕಿರೀಟಕ್ಕೆ ಗರಿ ಮೂಡಿಸಿದ ಸಾಧನೆಯದು. ಆದರೆ ಲೇಖನದಲ್ಲಿ ಗೌರಿ ಹತ್ಯೆ ಪ್ರಕರಣ ಉಲ್ಲೇಖವಾಗಿಲ್ಲ.

ಶ್ರೀನಿವಾಸ ಕಾರ್ಕಳ, ಮಂಗಳೂರು

ಕೆರೆ ಹೂಳೆತ್ತುವುದರಿಂದ ನಾನಾ ಲಾಭ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇತ್ತೀಚೆಗೆ ಕೆರೆಗಳ ಹೂಳೆತ್ತಲು ಮುಂದಾಗುತ್ತಿರುವುದು ಸ್ವಾಗತಾರ್ಹ ಕ್ರಮ. ಕೆರೆಗಳು ಬೇಸಿಗೆಯಲ್ಲಿ ಬತ್ತಿ ಹೋಗಿ ಪಶು-ಪಕ್ಷಿಗಳಿಗೆ ಕುಡಿಯಲು ನೀರಿಲ್ಲದೆ ಪರಿತಪಿಸುವುದು ಸರ್ವೇ ಸಾಮಾನ್ಯ. ಬೇಸಿಗೆಯಲ್ಲಿ ಬತ್ತಿ ಹೋಗುವುದನ್ನು ತಪ್ಪಿಸಲು ಕೆರೆ ತುಂಬಿಸುವ ಯೋಜನೆ ತುಂಬಾ ಅನುಕೂಲಕರವಾಗಿದೆ. ಇದರಿಂದ ಕೆರೆಯ ಸುತ್ತಮುತ್ತಲಿನ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದಂತಾಗುತ್ತದೆ. ಬೋರ್‌ವೆಲ್‌ಗಳ ಮರುಪೂರಣ ಆಗುತ್ತದೆ. ಪಶು-ಪಕ್ಷಿಗಳ ದಾಹ ತಣಿಸಬಹುದು. ಗಿಡ-ಮರಗಳು ಬೆಳೆದು ಹಚ್ಚ ಹಸಿರಿನ ವಾತಾವರಣ ನಿರ್ಮಾಣವಾಗುವುದರ ಜೊತೆಗೆ ಮೀನುಗಾರಿಕೆಗೂ ಸಹಕಾರಿ.

ಶ್ರೀಧರ ಎಸ್. ವಾಣಿ, ಕಲ್ಲತಾವರಗೇರಿ, ಕೊಪ್ಪಳ

ಸಫಾರಿ ಹೆಸರಲ್ಲಿ ಸ್ವಾತಂತ್ರ್ಯಹರಣ

ವನ್ಯಪ್ರಾಣಿಗಳ ವಾಸಕ್ಕೆ ಅಳಿದುಳಿದಿರುವ ಕಾಡುಗಳನ್ನು ಸರ್ಕಾರಗಳು ಹೇಗೋ ರಕ್ಷಣೆ ಮಾಡುತ್ತಿವೆ. ಈ ದಿಸೆಯಲ್ಲಿ ಹಲವಾರು ನೀತಿ, ನಿಯಮಗಳನ್ನು ತಂದರೂ ಪರೋಕ್ಷವಾಗಿ 'ಪ್ರವಾಸೋದ್ಯಮ'ದ ಬೆಳವಣಿಗೆಗಾಗಿ 'ಸಫಾರಿ'ಯನ್ನು ಜಾರಿಗೊಳಿಸಿ ವನ್ಯಪ್ರಾಣಿಗಳ ಬದುಕಿನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿವೆ. ಕಾಡುಪ್ರಾಣಿಗಳು ಮತ್ತು ಮಾನವರ ನಡುವಿನ ಸಂಘರ್ಷ ಹೆಚ್ಚುತ್ತಿದ್ದರೂ ವನ್ಯಪ್ರಾಣಿಗಳ ಜೀವಿಸುವ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟುಮಾಡುವುದು ಯಾವ ನ್ಯಾಯ?

ರಾಜ್ಯದಲ್ಲಿ ಸಂರಕ್ಷಿತ ಅರಣ್ಯ, ರಾಷ್ಟ್ರೀಯ ಉದ್ಯಾನ, ಹುಲಿ ಸಂರಕ್ಷಿತ ಪ್ರದೇಶಗಳಿಗೆ ನಗರವಾಸಿಗಳು ತಮ್ಮ ಪ್ರತಿಷ್ಠೆಗಾಗಿ ಭೇಟಿ ನೀಡುತ್ತಾರೆ. ಈ ಸ್ಥಳಗಳಿಗೆ ಸಮೀಪದಲ್ಲಿ ನಾಯಿಕೊಡೆಗಳಂತೆ ತಲೆಎತ್ತಿರುವ ರೆಸಾರ್ಟ್‌ಗಳ ಆರ್ಥಿಕಾಭಿವೃದ್ಧಿಗೆ ಈ ವನ್ಯಮೃಗಗಳೇ ಬಂಡವಾಳವಾಗಿವೆ. ಅನತಿ ದೂರದಲ್ಲಿ ನಿಂತುಕೊಂಡು ಕಾಡುಪ್ರಾಣಿಗಳ, ಅವುಗಳ ಆಹಾರ ಸರಪಳಿಯ ಫೋಟೊಗಳನ್ನು ತೆಗೆಯುವುದು, ಅವುಗಳೊಂದಿಗೆ ಸೆಲ್ಫಿ ತೆಗೆದುಕೊಳ್ಳುವುದು, ನಂತರ ಆ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್‌ನಂತಹವುಗಳಲ್ಲಿ ಹಾಕಿಕೊಳ್ಳುತ್ತಿರುವುದು ಎಷ್ಟು ಸರಿ? ಇದರಿಂದ ಅರಣ್ಯ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗದೇ?

ಸಫಾರಿಗಾಗಿ ತೆರಳಿದವರು ಹಲವು ಸಂದರ್ಭಗಳಲ್ಲಿ ಕೂದಲೆಳೆಯ ಅಂತರದಲ್ಲಿ ಪ್ರಾಣಿಗಳ ದಾಳಿಯಿಂದ ತಪ್ಪಿಸಿಕೊಂಡರೆಂಬ ಸುದ್ದಿಗಳೂ ಮಾಧ್ಯಮಗಳಲ್ಲಿ ಕಂಡುಬರುತ್ತಿವೆ. ಕಾಡುಗಳಲ್ಲಿ ಸ್ವಚ್ಛಂದವಾಗಿ ವಿಹರಿಸುವ ಅಮೂಲ್ಯ ಪ್ರಾಣಿಗಳ ನಿರ್ಭೀತಿಯ ಓಡಾಟಕ್ಕೆ ಇಂತಹ ರೆಸಾರ್ಟ್ ಮೋಹಿತರು ಅಡ್ಡಿಪಡಿಸುವುದು ಎಷ್ಟು ಸರಿ? ಇನ್ನಾದರೂ ನಾಡಿನ ಸಂರಕ್ಷಿತ ಅರಣ್ಯಗಳು, ರಾಷ್ಟ್ರೀಯ ಉದ್ಯಾವನಗಳು, ಹುಲಿ ಸಂರಕ್ಷಿತ ಪ್ರದೇಶಗಳಿಗೆ 'ಸಫಾರಿ' ಹೆಸರಿನಲ್ಲಿ ಜನರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸುವ ಕಡೆ ಗಮನಹರಿಸಬೇಕು. ಮೃಗಾಲಯಗಳಲ್ಲಿ ದೇಶ ವಿದೇಶಗಳ ವಿವಿಧ ಪ್ರಭೇದಗಳ ವನ್ಯಮೃಗಗಳನ್ನು ತಂದು ಸಂರಕ್ಷಿಸುವ ಜೊತೆಗೆ ಜನರಿಗೆ ಅವುಗಳನ್ನು ನೋಡಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಜನ ಅಲ್ಲಿಯೇ ಪ್ರಾಣಿಗಳನ್ನು ನೋಡಿ ಸಂತೋಷಪಡಲಿ. ಅದು ಬಿಟ್ಟು ಯಾರೋ ಕೆಲವರ ಆರ್ಥಿಕ ಏಳ್ಗೆಗಾಗಿ ಸರ್ಕಾರಗಳು ತಲೆಬಾಗಬಾರದು.

ಮಹದೇವಪ್ಪ ಪಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2011ರ ವಿಶ್ವಕಪ್ ವಿಜಯಕ್ಕೆ ದಶಕದ ಸಂಭ್ರಮ

ಗೆಲುವಿನ ಮುನ್ನ ಮತ್ತು ನಂತರ...


ಮಹೇಂದ್ರಸಿಂಗ್ ಧೋನಿ

• ಗಿರೀಶ ದೊಡ್ಡಮನಿ

2011ರ ಏಪ್ರಿಲ್ 2ರ ರಾತ್ರಿ...

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಮಹೇಂದ್ರಸಿಂಗ್ ಧೋನಿ ಎತ್ತಿದ ಆ ಸಿಕ್ಸರ್ ಮರೆಯಲು ಸಾಧ್ಯವೇ?

ತವರಿನಂಗಳದಲ್ಲಿ ಐಸಿಸಿ ಏಕದಿನ ವಿಶ್ವಕಪ್ ಗೆದ್ದ ಮೊದಲ ತಂಡ ಭಾರತ ಎಂಬ ಹೆಗ್ಗಳಿಕೆಗೆ ಆ ಸಿಕ್ಸರ್ ಮುದ್ರೆಯೊತ್ತಿತ್ತು. ಆ ಅವಿಸ್ಮರಣೀಯ ಕ್ಷಣಕ್ಕೀಗ ದಶಕದ ಸಂಭ್ರಮ.

1983ರಲ್ಲಿ ಕಪಿಲ್ ದೇವ್ ನಾಯಕತ್ವದ ಭಾರತ ತಂಡದ ವಿಶ್ವಕಪ್ ಗೆಲುವು ಭಾರತದ ಕ್ರಿಕೆಟ್ ಬೆಳವಣಿಗೆಗೆ ಹೊಸ ಆಯಾಮವನ್ನೇ ನೀಡಿತ್ತು. ಅದೇ ರೀತಿ ಧೋನಿ ಬಳಗದ ಸಾಧನೆಯು ಭಾರತದ ಕ್ರಿಕೆಟ್‌ಗೆ ಹೊಸ ದೆಸೆ ತೋರಿಸಿತು. ಈ ಶತಮಾನದ ಎರಡು ದಶಕಗಳ ಭಾರತ ಕ್ರಿಕೆಟ್ ಸಾಧನೆಗೆ ಶಿಖರಪ್ರಾಯವಾದ ಜಯ ಎಂದು 2011ರ ಗೆಲುವನ್ನು ಪರಿಗಣಿಸಬಹುದು. ಈ ವಿಜಯದ ಮುನ್ನ ಮತ್ತು ನಂತರದಲ್ಲಿ ಕ್ರಿಕೆಟ್ ಅಂಗಣದಲ್ಲಿ ಆಗಿರುವ ಬದಲಾವಣೆಗಳನ್ನು ವಿಶ್ಲೇಷಿಸಿದರೆ ಹಲವು ಮಹತ್ವದ ಅಂಶಗಳು ಗಮನ ಸೆಳೆಯುತ್ತವೆ.

ವಿಜಯಕ್ಕೂ ಹಿಂದಿನ ದಶಕ

1999–2000ರಲ್ಲಿ ಮ್ಯಾಚ್ ಫಿಕ್ಸಿಂಗ್ ಹಗರಣದ ಹೊಡೆತಕ್ಕೆ ಇಡೀ ಕ್ರಿಕೆಟ್ ಲೋಕವೇ ತಲೆತಗ್ಗಿಸಿ ನಿಂತಿತ್ತು. ದಕ್ಷಿಣ ಆಫ್ರಿಕಾದ ಹ್ಯಾನ್ಸಿ ಕ್ರೊನಿಯೆ, ಭಾರತದ ಮೊಹಮ್ಮದ್ ಅಜರುದ್ದೀನ್, ಅಜಯ ಜಡೇಜ, ಮನೋಜ್ ಪ್ರಭಾಕರ್ ಮತ್ತು ಅಜಯ್ ಶರ್ಮಾ ಅವರಂತಹ ಪ್ರಮುಖರು ಆರೋಪಕ್ಕೆ ಸಿಲುಕಿ, ಆಟದಿಂದ ಹೊರನಡೆದಿದ್ದರು. ಕ್ರಿಕೆಟ್ ಅಭಿಮಾನಿಗಳ ಮನಸು ಮುರಿದಿತ್ತು. ಸಚಿನ್, ಅಲ್ಪಕಾಲದ ನಾಯಕತ್ವದ ಹೊಣೆ ನಿಭಾಯಿಸಿದರು. ಆದರೆ, ಅಟದತ್ತ ಮಾತ್ರ ಗಮನ ಕೊಡುವುದಾಗಿ ಹೇಳಿ ನಾಯಕನ ಪಟ್ಟ ಬಿಟ್ಟರು. ಈ ಸಂದರ್ಭದಲ್ಲಿ 'ದಾದಾ' ಸೌರವ್ ಗಂಗೂಲಿಗೆ ನಾಯಕತ್ವದ ಹೊಣೆ ವಹಿಸಲಾಯಿತು.

ಆಕ್ರಮಣಶೀಲ ವ್ಯಕ್ತಿತ್ವದ ಗಂಗೂಲಿಗೆ ಹಲವು ಪ್ರತಿಭಾನ್ವಿತರ ಬೆಂಬಲ ಲಭಿಸಿತು. ಸಚಿನ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ವಿವಿಎಸ್ ಲಕ್ಷ್ಮಣ್, ಜಹೀರ್ ಖಾನ್, ಯುವರಾಜ್ ಸಿಂಗ್, ಜಾವಗಲ್ ಶ್ರೀನಾಥ್, ಹರಭಜನ್ ಸಿಂಗ್ ಅವರಂತಹ ಪ್ರತಿಭಾವಂತರ ಬಳಗ ಸಿದ್ಧವಾಯಿತು. ದೇಶ, ವಿದೇಶಗಳಲ್ಲಿ ನಡೆದ ಪಂದ್ಯಗಳಲ್ಲಿ ಗೆಲುವಿನ ರುಚಿ ಕಂಡಿತು.

ಅದರ ಫಲಿತಾಂಶ 2003ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕಾಣಿಸಿಕೊಂಡಿತು. ಆ ಟೂರ್ನಿಯಲ್ಲಿ ಗಂಗೂಲಿ ಪಡೆಯು ರನ್ನರ್ಸ್ ಅಪ್ ಆಯಿತು. ಅಭಿಮಾನಿಗಳ ವಲಯದಲ್ಲಿ ಕಳೆದುಹೋಗಿದ್ದ ವಿಶ್ವಾಸವನ್ನು ಮತ್ತೆ ಗಳಿಸಿಕೊಂಡಿತು. ಆಗಿನ್ನೂ ಮಹೇಂದ್ರಸಿಂಗ್ ಧೋನಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಿರಲಿಲ್ಲ.

ಅಲ್ಲಿಂದ ಭಾರತ ತಂಡದ ಸಾಧನೆಯು ಏರುಗತಿಯಲ್ಲಿ ಸಾಗಿತು. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ನಲ್ಲಿ ಗೆಲುವಿನ ಹೆಜ್ಜೆಗುರುತುಗಳು ಮೂಡಿದವು. ಆದರೆ 2005ರಲ್ಲಿ ಕೋಚ್ ಗ್ರೆಗ್ ಚಾಪೆಲ್ ಮತ್ತು ಗಂಗೂಲಿ ನಡುವಣ ವಿವಾದವು ತಂಡದ ಮೇಲೆ ಕೆಟ್ಟ ಪರಿಣಾಮ ಬೀರತೊಡಗಿತ್ತು. ಏಕದಿನ ಮತ್ತು 2006ರಲ್ಲಿ ಟೆಸ್ಟ್ ತಂಡದ ನಾಯಕತ್ವವನ್ನು ಗಂಗೂಲಿ ಬಿಡಬೇಕಾಯಿತು.

ಉಪನಾಯಕರಾಗಿದ್ದ ಕರ್ನಾಟಕದ ರಾಹುಲ್ ದ್ರಾವಿಡ್ ಅವರಿಗೆ ನಾಯಕನ ಪಟ್ಟ ಒಲಿಯಿತು. ಆದರೆ, 2007ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಪ್ರಪಾತಕ್ಕೆ ಕುಸಿಯಿತು. 2004ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದ, ಧೋನಿ ಕೂಡ ಆಗ ತಂಡದಲ್ಲಿದ್ದರು. ಆಟಗಾರರ ವಿರುದ್ಧ ಅಭಿಮಾನಿಗಳು ದೇಶಾದ್ಯಂತ ಪ್ರತಿಭಟನೆ ಮಾಡಿದರು. ಕ್ರಿಕೆಟಿಗರ ಬಗ್ಗೆ ಮತ್ತೊಮ್ಮೆ ಜನರ ವಿಶ್ವಾಸ ಅಲುಗಾಡಿತ್ತು.

ಅದೇ ವರ್ಷ ನಡೆದ ಚೊಚ್ಚಲ ಟಿ20 ವಿಶ್ವಕಪ್ ಟೂರ್ನಿಯಿಂದ ಪ್ರಮುಖ ಆಟಗಾರರು ಹಿಂದೆ ಸರಿದರು. ಹೊಸ ಹುಡುಗರ ಪಡೆಗೆ ಧೋನಿಯನ್ನು ನಾಯಕರನ್ನಾಗಿ ಮಾಡಿ ದಕ್ಷಿಣ ಆಫ್ರಿಕಾಕ್ಕೆ ಕಳಿಸಲಾಯಿತು. ಅಲ್ಲಿ ಚಾಂಪಿಯನ್ ಆದ ಭಾರತ ತಂಡವು ಇತಿಹಾಸ ಸೃಷ್ಟಿಸಿತು. ಮುಂದೆ ಕೆಲವೇ ದಿನಗಳಲ್ಲಿ ಧೋನಿ ಎಲ್ಲ ಮಾದರಿಗಳ ತಂಡಕ್ಕೆ ನಾಯಕರಾದರು. ತಂಡದಲ್ಲಿ ಧೋನಿಗಿಂತ ಹೆಚ್ಚು ಅನುಭವಿ ಆಟಗಾರರು ಇದ್ದರು. ಹೊಸ ಆಟಗಾರರು ಮತ್ತು ಅನುಭವಿಗಳ ಮಧ್ಯ ಸಮನ್ವಯ ಸಾಧಿಸುವ ಕಾರ್ಯದಲ್ಲಿ ಧೋನಿ ಹಲವು ಬಾರಿ ಮಾಧ್ಯಮಗಳ ಟೀಕೆಗೂ ಗುರಿಯಾದರು. ಆದರೆ ಆ ಟೀಕೆಗಳಿಗೆ 2011ರ ವಿಶ್ವಕಪ್ ವಿಜಯವೇ ಉತ್ತರವಾಯಿತು.

ಗ್ರೆಗ್ ಚಾಪೆಲ್ ಮತ್ತು ಸೌರವ್ ಗಂಗೂಲಿ

ಯುವರಾಜ್ ಸಿಂಗ್

ನಂತರದ ಹಾದಿ...

2003ರ ವಿಶ್ವಕಪ್‌ನಲ್ಲಿ ಆಡಿದ್ದ ಆರು ಮಂದಿ 2011ರಲ್ಲಿಯೂ ಇದ್ದರು. ಅದರಲ್ಲಿ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ವೃತ್ತಿಜೀವನದ ಕೊನೆಯ ವಿಶ್ವಕಪ್ ಕೂಡ ಇದಾಗಿತ್ತು.

'ಸಚಿನ್‌ಗೆ ವಿಶ್ವಕಪ್ ಕಾಣಿಕೆ ಕೊಡುವುದೇ ನನ್ನ ಗುರಿಯಾಗಿತ್ತು. ಅದೇ ನನ್ನ ಆಟಕ್ಕೂ ಸ್ಫೂರ್ತಿಯಾಗಿತ್ತು' ಎಂದು ಟೂರ್ನಿಯಲ್ಲಿ ಸರಣಿಶ್ರೇಷ್ಠ ಗೌರವ ಗಳಿಸಿದ ಯುವರಾಜ್ ಸಿಂಗ್ ಹೇಳಿದ್ದರು. 2013ರಲ್ಲಿ ಧೋನಿ ಬಳಗವು ಚಾಂಪಿಯನ್ಸ್ ಟ್ರೋಫಿ ಜಯಿಸಿತು. ಟೆಸ್ಟ್ ಶ್ರೇಯಾಂಕದಲ್ಲಿಯೂ ಉತ್ತಮ ಸಾಧನೆ ಮಾಡಿತು. ಆದರೆ 2013–14ರಲ್ಲಿ ಐಪಿಎಲ್‌ನಲ್ಲಿ ನಡೆದ ಸ್ಪಾಟ್ ಫಿಕ್ಸಿಂಗ್ ಹಗರಣವು ಮತ್ತೊಮ್ಮೆ ಕ್ರಿಕೆಟ್ ಬೇರುಗಳನ್ನು ಅಲುಗಾಡಿಸಿತು. ಈ ಸಲ ಬಿಸಿಸಿಐನ ಆಡಳಿತ ಸುಧಾರಣೆಗೆ ಸುಪ್ರೀಂ ಕೋರ್ಟ್ ಹೆಜ್ಜೆಯಿಟ್ಟಿತು. ಇದು ಹಲವು ಆಡಳಿತಾತ್ಮಕ ಬದಲಾವಣೆಗಳಿಗೆ ಕಾರಣವಾಯಿತು.

ಇದೇ ಸಂದರ್ಭದಲ್ಲಿ ದಿಗ್ಗಜ ಆಟಗಾರರ ಸ್ಥಾನಗಳನ್ನು ತುಂಬುವವರು ಯಾರು? ಭಾರತ ಕ್ರಿಕೆಟ್ ಬೆಳೆಯುವುದು ಹೇಗೆ? ಎಂಬ ಪ್ರಶ್ನೆಗಳೂ ಸುಳಿದಾಡಿದ್ದವು. ಇದೀಗ ಅವುಗಳಿಗೆ ಉತ್ತರಗಳು ಲಭಿಸಿವೆ. 2015 ಮತ್ತು 2019ರಲ್ಲಿ ಭಾರತವು ವಿಶ್ವಕಪ್ ಗೆಲ್ಲುವಲ್ಲಿ ಎಡವಿದೆ. ಟಿ20 ವಿಶ್ವಕಪ್ ಕೂಡ ಜಯಿಸಿಲ್ಲ. ಆದರೂ ಇವತ್ತು ಕ್ರಿಕೆಟ್ ಜಗತ್ತಿನ 'ಸೂಪರ್ ಪವರ್' ಆಗಿ ಬೆಳೆದಿದೆ. ಅದಕ್ಕೆ ಕಾರಣ ಭಾರತದ ಬೆಂಚ್ ಶಕ್ತಿ.

ಧೋನಿಯ ನಂತರ ನಾಯಕತ್ವ ವಹಿಸಿಕೊಂಡ ವಿರಾಟ್ ಕೊಹ್ಲಿ ಸ್ವತಃ ಬಹುಕೋಟಿ ಮೌಲ್ಯದ ಬ್ರ್ಯಾಂಡ್ ಆಗಿ ಬೆಳೆದಿದ್ದಾರೆ. ಸಚಿನ್ ಬ್ಯಾಟಿಂಗಿನ ಮತ್ತು ಧೋನಿಯ ನಾಯಕತ್ವದ ದಾಖಲೆಗಳನ್ನು ಹಿಂದಿಕ್ಕುತ್ತಿದ್ದಾರೆ. ರಿಷಭ್ ಪಂತ್, ಇಶಾನ್ ಕಿಶನ್, ಸಂಜು ಸ್ಯಾಮ್ಸನ್, ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸುವ ಸಮರ್ಥರಾಗಿ ಹೊರಹೊಮ್ಮಿದ್ದಾರೆ. ದ್ರಾವಿಡ್ ಸ್ಥಾನವನ್ನು ಪೂಜಾರ ತುಂಬುವ ಭರವಸೆ ಮೂಡಿಸಿದ್ದಾರೆ. ಜಹೀರ್ ಖಾನ್ ನಂತರ ಯಾರು ಎಂಬ ಪ್ರಶ್ನೆ ಈಗ ಉಳಿದಿಲ್ಲ. ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಉಮೇಶ್ ಯಾದವ್, ನವದೀಪ್ ಸೈನಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್ ಅವಂತಹ ಮ್ಯಾಚ್ ವಿನ್ನರ್‌ಗಳ ದಂಡು ಸಿದ್ಧವಾಗಿದೆ. ರವೀಂದ್ರ ಜಡೇಜ, ಆರ್. ಅಶ್ವಿನ್, ವಾಷಿಂಗ್ಟನ್ ಸುಂದರ್ ಅವರು ಆಲ್‌ರೌಂಡರ್ ಯುವಿಯ ಸ್ಥಾನ ತುಂಬಬಲ್ಲರು. ರೋಹಿತ್ ಶರ್ಮಾ, ಶಿಖರ್ ಧವನ್, ಮಯಂಕ್ ಅಗರವಾಲ್ ಬ್ಯಾಟಿಂಗ್‌ನ ಶಕ್ತಿಯಾಗಿದ್ದಾರೆ.

ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಈ ಹೊಸ ಹುಡುಗರೇ ಐತಿಹಾಸಿಕ ಜಯಕ್ಕೆ ಕಾರಣರಾದರು. ಇಂಗ್ಲೆಂಡ್ ಎದುರಿನ ಸರಣಿಗಳಲ್ಲಿಯೂ ಇಶಾನ್ ಕಿಶನ್, ಅಕ್ಷರ್ ಪಟೇಲ್, ಸೂರ್ಯಕುಮಾರ್ ಯಾದವ್ ಅವರಂತಹ ಹೊಸ ಪ್ರತಿಭೆಗಳ ಆಟವೇ ರಂಗೇರಿತು. ಈಗ ಭಾರತವು ಕೇವಲ ಒಬ್ಬಿಬ್ಬರು ಆಟಗಾರರ ಮೇಲೆ ಅವಲಂಬಿತವಾಗಿಲ್ಲ. ಯಾವುದೇ ಹಂತದಲ್ಲಿಯೂ ಪಂದ್ಯಕ್ಕೆ ತಿರುವು ಕೊಡಬಲ್ಲ ಸಮರ್ಥರು ಇದ್ದಾರೆ. ಧೋನಿ ಮತ್ತು ವಿರಾಟ್ ಪ್ರಭಾವದಿಂದಾಗಿ ಫಿಟ್‌ನೆಸ್‌ಗೆ ಅಪಾರ ಮಹತ್ವ ದೊರೆತಿದೆ. ಇದೇ ವರ್ಷ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಭಾರತದಲ್ಲಿಯೇ ನಡೆಯಲಿರುವ ಟಿ20 ವಿಶ್ವಕಪ್ ವಿಜಯಗಳ ಮೇಲೆ ತಂಡ ಕಣ್ಣಿಟ್ಟಿದೆ. ಅಂದು ವಾಂಖೆಡೆ ಮೈದಾನದಲ್ಲಿ ಸಚಿನ್ ಅವರನ್ನು ಹೆಗಲ ಮೇಲೆ ಕೂರಿಸಿಕೊಂಡು ಮೆರವಣಿಗೆ ಮಾಡಿದ್ದವರ ಪೈಕಿ ವಿರಾಟ್ ಕೂಡ ಒಬ್ಬರು. ಅವರ ನಾಯಕತ್ವದಲ್ಲಿ ಭಾರತಕ್ಕೆ ಮತ್ತೊಂದು ವಿಶ್ವಕಪ್ ಒಲಿಯುವುದೇ?

ವಿರಾಟ್ ಕೊಹ್ಲಿ

ಪ್ರಮುಖ ಸಾಧಕರು

ಸಚಿನ್ ತೆಂಡೂಲ್ಕರ್	482 ರನ್
ಗೌತಮ್ ಗಂಭೀರ್	393 ರನ್
ವೀರೇಂದ್ರ ಸೆಹ್ವಾಗ್	380 ರನ್, 175 ವೈಯಕ್ತಿಕ ಶ್ರೇಷ್ಠ ಸ್ಕೋರ್
ಯುವರಾಜ್ ಸಿಂಗ್	362 ರನ್, 15 ವಿಕೆಟ್, ಸರಣಿಶ್ರೇಷ್ಠ
ವಿರಾಟ್ ಕೊಹ್ಲಿ	282 ರನ್
ಜಹೀರ್ ಖಾನ್	21 ವಿಕೆಟ್
ಮಹೇಂದ್ರಸಿಂಗ್ ಧೋನಿ	241 ರನ್, ಕ್ಯಾಚ್ 7, ಸ್ಟಂಪಿಂಗ್ 3

ಫೈನಲ್ ಪಂದ್ಯದಲ್ಲಿ ಮಿಂಚಿದವರು

ಗೌತಮ್ ಗಂಭೀರ್	97 (122ಎಸೆತ)
ಮಹೇಂದ್ರಸಿಂಗ್ ಧೋನಿ	ಅಜೇಯ 91 (79ಎಸೆತ) ಪಂದ್ಯಶ್ರೇಷ್ಠ
ಜಹೀರ್ ಖಾನ್	60ಕ್ಕೆ2
ಯುವರಾಜ್ ಸಿಂಗ್	49ಕ್ಕೆ2
ಮಹೇಲ ಜಯವರ್ಧನೆ (ಶ್ರೀಲಂಕಾ)	103*

ವಿಶ್ವಕಪ್ ಗೆದ್ದು ನಾವೇನೂ ಅಸಾಧಾರಣವಾದ ಸಾಧನೆ ಮಾಡಿಲ್ಲ. ಅಂದು ದೇಶ ಮತ್ತು ಜನರು ಹೆಮ್ಮೆಪಟ್ಟರು. ಆ ಗುಂಗಿನಿಂದ ಹೊರಬಂದು ಮತ್ತೊಂದು ವಿಶ್ವಕಪ್ ಗೆಲ್ಲಬೇಕಾದ ಸಮಯ ಇದು
ಗೌತಮ್ ಗಂಭೀರ್, ಭಾರತ ತಂಡದ ಮಾಜಿ ಆಟಗಾರ

ಸಚಿನ್ ತೆಂಡೂಲ್ಕರ್ ಮತ್ತು ಯೂಸುಫ್ ಪಠಾಣ್

ಶಾಲಾರಂಭದ ಬಗ್ಗೆ ಸಮೀಕ್ಷೆ

ಸ್ನೇಹಿತರ ಭೇಟಿಗೆ ಮಕ್ಕಳು ಉತ್ಸುಕ

• ಶೆಮಿನ್ ಜಾಯ್

ನವದೆಹಲಿ: ದೇಶದಾದ್ಯಂತ ಆವರಿಸಿರುವ ಕೊರೊನಾ ವೈರಸ್‌ನ ಕಾರಣ, ಮಕ್ಕಳು ಹಲವು ತಿಂಗಳುಗಳಿಂದ ಶಾಲೆಗಳಿಗೆ ಹೋಗಿಲ್ಲ. ನಾಲ್ವರ ಪೈಕಿ ಮೂವರು ವಿದ್ಯಾರ್ಥಿಗಳು ತರಗತಿಗಳಿಗೆ ಹೋಗಿ, ಸ್ನೇಹಿತರನ್ನು ಭೇಟಿಯಾಗಲು ಉತ್ಸುಕರಾಗಿದ್ದಾರೆ. ಆದರೆ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಶಾಲೆ ಪುನರಾರಂಭ ಮಾರ್ಗಸೂಚಿಯ ಸಂಪೂರ್ಣ ಜ್ಞಾನ ಹೊಂದಿಲ್ಲ ಎಂದು ಹೊಸ ಸಮೀಕ್ಷೆಯೊಂದು ಹೇಳಿದೆ.

ಶಾಲೆಗಳನ್ನು ಪುನಃ ತೆರೆಯುವ ನಿರೀಕ್ಷೆಯಿಂದ ಶೇ 78ರಷ್ಟು ವಿದ್ಯಾರ್ಥಿಗಳು ಅತೀವ ಸಂತೋಷದಲ್ಲಿದ್ದಾರೆ. ಆದರೆ ಶೇ 22ರಷ್ಟು ವಿದ್ಯಾರ್ಥಿಗಳು ತಮ್ಮ ಶಾಲಾ ಸ್ನೇಹಿತರನ್ನು ಭೇಟಿಯಾಗಲು ಮತ್ತು ಅವರೊಂದಿಗೆ ಸಂವಹನ ನಡೆಸಲು ಭೀತಿ ವ್ಯಕ್ತಪಡಿಸಿದ್ದಾರೆ ಎಂದು ಸ್ಮೈಲ್ ಫೌಂಡೇಶನ್ ನಡೆಸಿದ ಸಮೀಕ್ಷೆ ತಿಳಿಸಿದೆ.

ಫೆಬ್ರುವರಿ ಹಾಗೂ ಮಾರ್ಚ್ ತಿಂಗಳಲ್ಲಿ ಸಮೀಕ್ಷೆ ಕೈಗೊಳ್ಳಲಾಗಿತ್ತು. 8ರಿಂದ 18 ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳು ಸಮೀಕ್ಷೆಯಲ್ಲಿ ಭಾಗವಹಿಸಿದ್ದರು. ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವ ಕಾರಣ, ಶಾಲೆಯಲ್ಲಿ ತರಗತಿ ಶಿಕ್ಷಣದ ಜೊತೆಗೆ ಆನ್‌ಲೈನ್ ಶಿಕ್ಷಣವೂ ಬೇಕು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಶೇ 39ರಷ್ಟು ವಿದ್ಯಾರ್ಥಿಗಳಿಗೆ ಶಾಲೆ ಪುನರಾರಂಭದ ಮಾರ್ಗಸೂಚಿಗಳ ಬಗ್ಗೆ ಸಂಪೂರ್ಣ ಅರಿವು ಇಲ್ಲ. ಶೇ 41ರಷ್ಟು ವಿದ್ಯಾರ್ಥಿಗಳು ಶಾಲೆಗಳಲ್ಲಿ ಕೋವಿಡ್ -19 ನಿಯಮಾವಳಿಗಳನ್ನು ಸಂಪೂರ್ಣವಾಗಿ ಪಾಲಿಸಲು ಕಷ್ಟ ಎಂದಿದ್ದಾರೆ.

ಕಳೆದ ವರ್ಷವಿಡೀ ವಿವಿಧ ಆನ್‌ಲೈನ್ ಮತ್ತು ಆಫ್‌ಲೈನ್ ವಿಧಾನದ ಮೂಲಕ ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದಾರೆ. ಆದಾಗ್ಯೂ ಕಲಿಕೆಯಲ್ಲಿ ಗಮನಾರ್ಹ ಅಂತರ ಕಂಡುಬಂದಿದೆ. ಹೀಗಾಗಿ ಶಾಲೆಗಳಿಗೆ ಮರಳುವಲ್ಲಿ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಾಕಷ್ಟು ಶ್ರಮ ವಹಿಸಬೇಕಿದೆ ಎಂದು ಸ್ಮೈಲ್ ಪ್ರತಿಷ್ಠಾನದ ಸಹ ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ಟ್ರಸ್ಟಿ ಶಂತನು ಮಿಶ್ರಾ ಹೇಳಿದ್ದಾರೆ.

ಕನಿಷ್ಠ ಶೇ 83ರಷ್ಟು ವಿದ್ಯಾರ್ಥಿಗಳು ತಮ್ಮ ಸ್ನೇಹಿತರನ್ನು ಭೇಟಿಯಾಗುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ. ಶಾಲೆಗಳು ಮತ್ತೆ ತೆರೆದಾಗ ಮಧ್ಯಾಹ್ನದ ಬಿಸಿಯೂಟ ಸೇವಿಸುವ ಬಗ್ಗೆ ಶೇ 52ರಷ್ಟು ವಿದ್ಯಾರ್ಥಿಗಳು ಕಳವಳ ವ್ಯಕ್ತಪಡಿಸಿದ್ದಾರೆ ಎಂದು ವರದಿ ತಿಳಿಸಿದೆ.

ಸಮೀಕ್ಷೆಯ ವಿವರ

26,860
ಸಮೀಕ್ಷೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

12
ರಾಜ್ಯಗಳಲ್ಲಿ ಸಮೀಕ್ಷೆ

ಶಿಕ್ಷಕರಿಗೂ ಸಮೀಕ್ಷೆ

ಸ್ಮೈಲ್ ಫೌಂಡೇಶನ್ ನಡೆಸಿದ ಸಮೀಕ್ಷೆಯಲ್ಲಿ 12 ರಾಜ್ಯಗಳ ಸುಮಾರು 75 ಶಿಕ್ಷಕರೂ ಪಾಲ್ಗೊಂಡು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ವಿದ್ಯಾರ್ಥಿಗಳು ಶಾಲೆಗಳಿಗೆ ಹಿಂದಿರುಗಿದಾಗ ಈ ಹಿಂದಿನ ಸಾಂಪ್ರದಾಯಿಕ ಶ್ರೇಣಿಗಳ ಮಾನದಂಡದ ಪ್ರಕಾರ ಕಲಿಯಲು ಸಾಧ್ಯವಾಗುವುದಿಲ್ಲ ಎಂದು ಶೇ 44ರಷ್ಟು ಶಿಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಶಾಲೆಗಳು ಪುನರಾರಂಭವಾದಾಗ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವುದು ಮತ್ತೊಂದು ದೊಡ್ಡ ಸವಾಲು ಎಂದು ಶೇ 42ರಷ್ಟು ಬೋಧಕರು ಹೇಳಿದ್ದಾರೆ.

ಕಲಿಕಾ ಮಾಧ್ಯಮ: ಮಕ್ಕಳ ಚಿತ್ತ ಎತ್ತ?



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ತೀವ್ರ ಜಿದ್ದಾಜಿದ್ದಿಯಿಂದ ಕೂಡಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಯಾರಿಗೆ ಜಯ ದೊರೆಯಲಿದೆ ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಎಂಟು ಹಂತಗಳ ಮತದಾನದಲ್ಲಿ ಈಗ ಎರಡು ಹಂತಗಳು ಮುಗಿದಿವೆ. ಪ್ರಶಾಂತ್ ಕಿಶೋರ್ ಅವರ ಐಪ್ಯಾಕ್ ಸಂಸ್ಥೆಯು ನಡೆಸಿದೆ ಎನ್ನಲಾದ ಸಮೀಕ್ಷೆಯ ವಿವರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಪ್ರಶಾಂತ್ ಅವರು ಮಮತಾ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಸಮೀಕ್ಷೆಯ ಪ್ರಕಾರ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ಬಾರಿ ಸೋಲೊಪ್ಪಲಿದ್ದಾರೆ. ಈ ವಿವರಗಳನ್ನು ಹಲವರು ಹಂಚಿಕೊಂಡಿದ್ದಾರೆ. 'ಕಿಶೋರ್ ಅವರ ಆಂತರಿಕ ಸಮೀಕ್ಷೆ ಸೋರಿಕೆಯಾಗಿದ್ದು, ಮಮತಾ ಸೋಲಲಿದ್ದಾರೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ಟ್ವೀಟ್ ಮಾಡಿದ್ದಾರೆ.

ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ಪರಿಶೀಲನೆ ನಡೆಸಿದಾಗ, ಸಮೀಕ್ಷೆಯು ನಕಲಿ ಎಂಬುದು ಕಂಡುಬಂದಿದೆ. ತೃಣಮೂಲ ಕಾಂಗ್ರೆಸ್ ಪಕ್ಷವು ಹೆಚ್ಚಾಗಿ ಟಿಎಂಸಿ ಎಂದು ಉಲ್ಲೇಖಿಸುತ್ತದೆ. ಆದರೆ ಸಮೀಕ್ಷೆಯಲ್ಲಿ ಎಐಟಿಸಿ ಎಂದು ಉಲ್ಲೇಖಿಸಲಾಗಿದೆ. ಐಪ್ಯಾಕ್ ಸಂಸ್ಥೆ ಸಹ ಸಮೀಕ್ಷೆಯನ್ನು ನಕಲಿ ಎಂದು ಖಚಿತಪಡಿಸಿದೆ. ಹತಾಶೆಯಲ್ಲಿರುವ ಬಿಜೆಪಿಯು ನಕಲಿ ಸಮೀಕ್ಷೆ ಮೂಲಕ ಜನರ ದಾರಿ ತಪ್ಪಿಸುತ್ತಿದೆ ಎಂದು ಆರೋಪಿಸಿದೆ. ಇದು ಬಿಜೆಪಿಯ ವ್ಯವಸ್ಥಿತ ಷಡ್ಯಂತ್ರ ಎಂದು ಟಿಎಂಸಿ ಖಂಡಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಿಯವಾದ ದೃಶ್ಯ

ರಾಜ ವಿದೇಹನ ಆಜ್ಞೆಗೆ ಹೆದರಿ ನಾಲ್ಕು ಜನ ಅಮಾತ್ಯರು ತಮ್ಮ ರಥಗಳನ್ನು ತೆಗೆದುಕೊಂಡು ನಾಲ್ಕು ದಿಕ್ಕಿಗೆ ಮಹೋಷಧಕುಮಾರನನ್ನು ಹುಡುಕಿಕೊಂಡು ಬರಲು ಹೊರಟರು. ರಾಜ ಸ್ಪಷ್ಟ ಆಜ್ಞೆ ಮಾಡಿದ್ದ. 'ನನ್ನ ಮಗ ಮಹೋಷಧನನ್ನು ಯಾರು, ಎಲ್ಲಿ ಕಂಡರೂ, ಅಲ್ಲಿಂದಲೇ ಸತ್ಕಾರ ಮಾಡಿ ಕರೆದುಕೊಂಡು ಬನ್ನಿ'. ಇವರಲ್ಲಿ ಮೂವರು ಪಂಡಿತರಿಗೆ ಕುಮಾರ ಕಾಣಲಿಲ್ಲ. ಆದರೆ ದಕ್ಷಿಣದ ದ್ವಾರದಿಂದ ಹೋದ ಪಂಡಿತನಿಗೆ ದೂರದ ಒಂದು ಗ್ರಾಮದಲ್ಲಿ ಒಬ್ಬ ಮನುಷ್ಯ ಹದವಾದ ಮಣ್ಣು ತಂದು ಚಕ್ರದ ಮೇಲೆ ತಿರುಗಿಸಿ ಮಡಕೆ ಮಾಡುವುದನ್ನು ಕಂಡ. ಮೈಯೆಲ್ಲ ಮಣ್ಣು ಮೆತ್ತಿದ್ದ ತರುಣನನ್ನು ನೋಡಿದಾಗ ಅವನೇ ಮಹೋಷಧಕುಮಾರನಿರಬೇಕೆಂದು ತಿಳಿದ. ದೂರದಿಂದಲೇ ಗಮನವಿಟ್ಟು ನೋಡಿದ. ಮೈತುಂಬ ಮಣ್ಣು ಮೆತ್ತಿದ್ದರೂ, ಅವನ ಕಣ್ಣುಗಳಲ್ಲಿಯ ಕಾಂತಿ, ಅವನ ಕಾರ್ಯದಲ್ಲಿರುವ ಚಾಕಚಕ್ಯತೆಯನ್ನು ಗುರುತಿಸಿದ. ಮಧ್ಯಾಹ್ನ ಮಹೋಷಧಕುಮಾರ ಹುಲ್ಲಿನ ಮೇಲೆ ಕುಳಿತು ಊಟ ಮಾಡುತ್ತಿದ್ದಾಗ ಈ ಪಂಡಿತ ಅವನ ಬಳಿ ಹೋಗಿ ಹೇಳಿದ, 'ನಮ್ಮ ಪಂಡಿತ ಸೇನಕ ಸರಿಯಾಗಿಯೇ ಹೇಳಿದ್ದ. ನಿನ್ನಂಥ ಐಶ್ವರ್ಯ, ಸಂಪತ್ತು, ರೂಪವಿದ್ದವನಿಗೂ ಅಭಾವ ಸಮಯದಲ್ಲಿ ಬುದ್ಧಿವಂತಿಕೆ ಪ್ರಯೋಜನವಾಗುವುದಿಲ್ಲ. ನೋಡು, ಹೇಗೆ ಐಶ್ವರ್ಯ ಹೋದ ಮೇಲೆ ನೀನು ದೀನವಾಗಿ ಮೈಗೆ ಮಣ್ಣು ಬಳಿದುಕೊಂಡು ಹುಲ್ಲಿನ ಹಾಸಿಗೆಯ ಮೇಲೆ ಕುಳಿತು ಈ ದರಿದ್ರನ ಊಟ ಮಾಡುತ್ತಿದ್ದೀ'. ಕುಮಾರ ಹೇಳಿದ 'ಮೂರ್ಖ, ನಾನು ಇದನ್ನು ಬುದ್ಧಿವಂತಿಕೆಯಿಂದಲೇ ಮಾಡುತ್ತಿದ್ದೇನೆ. ನೋಡು, ಅದರಿಂದಲೇ ಎಲ್ಲ ಐಶ್ವರ್ಯವನ್ನು ಪುನಃ ಪಡೆಯುತ್ತೇನೆ. ಅದು ಸರಿ, ನನ್ನನ್ನು ಹುಡುಕಿಕೊಂಡು ಬಂದದ್ದೇಕೆ?'.

'ಛತ್ರದ ದೇವತೆ ರಾಜನಿಗೆ ಪ್ರಶ್ನೆ ಕೇಳಿದಳು. ಆತ ಪಂಡಿತರಿಗೆ ಕೇಳಿದ. ನಮಗಾರಿಗೂ ಅದರ ಉತ್ತರ ಹೊಳೆಯಲಿಲ್ಲವಾದ್ದರಿಂದ ನಿನ್ನನ್ನು ಕರೆತರಲು ಕಳುಹಿಸಿದ್ದಾನೆ. ಇಗೋ, ಈ ಸಾವಿರ ನಾಣ್ಯಗಳು ಮತ್ತು ಜೋಡಿಶಾಲು. ರಾಜ ನಿನ್ನನ್ನು ಸತ್ಕಾರ ಮಾಡಿ ಕರೆತರಲು ಆಜ್ಞೆ ಮಾಡಿದ್ದಾನೆ' ಎಂದ ಪಂಡಿತ. ಆಗ ಮಹೋಷಧಕುಮಾರ ಸ್ನಾನವನ್ನು ಮಾಡದೆ ಹಾಗೆಯೇ ಮೈಗೆ ಮಣ್ಣು ಅಂಟಿದಂತೆಯೇ, ರಥದಲ್ಲಿ ಕುಳಿತು ರಾಜನ ಬಳಿಗೆ ಹೋದ. ರಾಜ ಅವನನ್ನು ಗಮನಿಸಿದ. ಅವನು ತನ್ನ ಶತ್ರುವೇ ಆಗಿದ್ದರೆ ಶ್ರೀಮಂತಿಕೆಯಿಂದ ಬದುಕುತ್ತಿದ್ದ. ಹೀಗೆ ಮಣ್ಣು ಬಳಿದುಕೊಂಡು ಕರ್ಮ ಮಾಡುತ್ತಿದ್ದರೆ, ನನಗೆ ದ್ರೋಹ ಮಾಡುವವನಂತೆ ಕಾಣುವುದಿಲ್ಲ. ಹೀಗೆ ಚಿಂತಿಸಿ, 'ಈಗ ಮನೆಗೆ ಹೋಗಿ ಸ್ನಾನ ಮಾಡಿ ಅಲಂಕೃತನಾಗಿ ಬಾ' ಎಂದು ಅಪ್ಪಣೆ ಮಾಡಿದ.

ಅದರಂತೆ ಅಲಂಕೃತನಾಗಿ ಬಂದ ಮಹೋಷಧಕುಮಾರ ರಾಜನಿಗೆ ತಿಳಿ ಹೇಳಿದ. 'ರಾಜಾ, ನಾನು ನಿಮ್ಮ ಮಗನಿದ್ದಂತೆ. ನಿಮಗೆ ದ್ರೋಹ ಮಾಡಲಾರೆ. ನೀವೇ ನನ್ನನ್ನು ಈ ಮಹದೈಶ್ವರ್ಯದಲ್ಲಿ ಪ್ರತಿಷ್ಠಾಪಿಸಿದ್ದೀರಿ ಮತ್ತು ಕೃಪಾವರ್ಷವನ್ನು ಕರೆದಿದ್ದೀರಿ. ನಾನು ಕುಳಿತ ಮರದ ಕೊಂಬೆಯನ್ನು ಮುರಿಯುವವನಲ್ಲ. ದಯವಿಟ್ಟು ತಮ್ಮ ಪ್ರಶ್ನೆಯನ್ನು ಹೇಳಿ' ಎಂದ. ರಾಜ ಹೇಳಿದ, 'ಕೈಕಾಲುಗಳಿಂದ ಹೊಡೆಯುತ್ತದೆ, ಮುಖಕ್ಕೂ ಹೊಡೆಯುತ್ತದೆ, ಆದರೂ ಅದು ಪ್ರಿಯವಾಗಿರುತ್ತದೆ. ಅಂಥ ದೃಶ್ಯ ಯಾವುದು?' ಒಂದು ಕ್ಷಣ ಯೋಚಿಸಿದ ಕುಮಾರ ಮಂದಸ್ಮಿತನಾಗಿ ಹೇಳಿದ, 'ಪ್ರಭೂ, ತಾಯಿಯ ತೊಡೆಯಲ್ಲಿ ಮಲಗಿದ್ದ ಮಗು ಆಡುತ್ತ ಕೈಕಾಲುಗಳಿಂದ ಆಕೆಗೆ ಹೊಡೆಯುತ್ತದೆ, ಕೂದಲು ಎಳೆಯುತ್ತದೆ, ಮುಖಕ್ಕೂ ಹೊಡೆಯುತ್ತದೆ. ಅದು ತಾಯಿಗೆ ಅತ್ಯಂತ ಪ್ರಿಯವಾಗಿರುತ್ತದೆ. ಅದೇ ಆ ಸುಂದರ ದೃಶ್ಯ'.

ತಕ್ಷಣ ದೇವಿ ತನ್ನ ನಿಪಾತದಿಂದ ಹೊರಬಂದು ಮಧುರಸ್ವರದಲ್ಲಿ 'ಉತ್ತರ ಸರಿಯಾಗಿದೆ' ಎಂದು ಹೇಳಿ ಮರೆಯಾದಳು. ರಾಜ ಮತ್ತು ಸಭಿಕರು ಕುಮಾರನ ಪ್ರಜ್ಞೆಗೆ ಬೆರಗಾದರು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 2 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಪಂಚಮಿ ಗಂ. 17-36 (ಹ. 1-25) ಶುಕ್ರವಾರ ನಿತ್ಯ ನಕ್ಷತ್ರ ಅನುರಾಧಾ ಗಂ. 9-35 (ಹ. 10-13) ಸಿದ್ಧಿ ನಾಮ ಯೋಗ ಗಂ 2-35 ಉಪರಿ ವ್ಯತೀಪಾತ ನಾಮ ಯೋಗ ಗಂ. 52-34 ತೈತಲ ಕರಣ ಗಂ. 17-36 ವಿಷ ಗಂ. 22-42 ಅಮೃತ ಗಂ. 45-10 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-19 **ಸೂರ್ಯಾಸ್ತ:** 6-28 ಅದೃಷ್ಟ ಸಂಖ್ಯೆ 2, 4

ಮೇಷ: ನಿಮ್ಮ ಸಾತ್ವಿಕ ನಡತೆಯಿಂದ ಜನಪ್ರಿಯತೆ ಹೆಚ್ಚಿಸಿಕೊಳ್ಳುವಿರಿ. ಸಮಾಜಸೇವೆಯಲ್ಲಿ ತೊಡಗಿಕೊಂಡಿರುವವರಿಗೆ ಹೆಚ್ಚಿನ ಕೆಲಸ–ಕಾರ್ಯಗಳೊಂದಿಗೆ ಗೌರವವನ್ನು ತಂದುಕೊಡಲಿದೆ. ಆರೋಗ್ಯದ ಬಗ್ಗೆ ಗಮನವಿರಲಿ.

ವೃಷಭ: ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗಿಕೊಂಡಿರುವವರಿಗೆ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ಉನ್ನತ ಅಧಿಕಾರಿಗಳಿಗೆ ಅಚ್ಚರಿ ಮೂಡಿಸುವ ಕಾರ್ಯ ಮಾಡಲಿದ್ದೀರಿ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ.

ಮಿಥುನ: ನಿಮ್ಮ ವ್ಯಾಪಾರದಲ್ಲಿ ಈ ದಿನದಿಂದ ಹಣದ ಹರಿವು ಸುಗಮವಾಗಿ ವ್ಯವಹಾರದಲ್ಲಿ ಉನ್ನತಿಯತ್ತ ಸಾಗಲಿದ್ದೀರಿ. ಯಾಂತ್ರೀಕೃತ ವಾಹನ, ಯಂತ್ರೋಪಕರಣಗಳ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರದಿಂದಾಗಿ ಉತ್ತಮ ಲಾಭ.

ಕರ್ಕಾಟಕ: ಸ್ವತ್ತು ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದ ಮಾತುಕತೆಯಿಂದ ಲಾಭಕರವಾದ ನಿರ್ಧಾರಗಳು ಹೊರಬರಲಿವೆ. ಪಿತ್ರಾರ್ಜಿತವಾದ ಆಸ್ತಿ ನಿಮ್ಮ ಪಾಲಿಗೆ ದೊರಕುವುದು.

ಸಿಂಹ: ಹೊಸ ಉದ್ಯಮಕ್ಕೆ ಕಾಲಿಡುವ ಧಾವಂತದಿಂದ ಕೆಲಸ–ಕಾರ್ಯಗಳನ್ನು ಮಾಡಲಿದ್ದೀರಿ. ಗುರಿ ತಲುಪುವ ಹಾದಿಯಲ್ಲಿ ಸ್ನೇಹಿತರ ಸಹಾಯ ಸಹಕಾರ ದೊರಕಲಿದೆ. ಯಶಸ್ಸಿನ ದಿನ ಪ್ರಾರಂಭವಾಗಲಿದೆ. ಸಂಗಾತಿಯಿಂದ ಸಂತಸ.

ಕನ್ಯಾ: ಮನೆಗೆ ಸೋದರ ಸಂಬಂಧಿಗಳ ಆಗಮನದಿಂದ ಹಬ್ಬದ ವಾತಾವರಣ. ಮಕ್ಕಳ ಮದುವೆ ಕಾರ್ಯಕ್ಕೆ ಹೊಸ ತಿರುವು ಉಂಟಾಗಲಿದೆ. ಅಚ್ಚರಿಯಿಂದ ಕೂಡಿದ ದಿನವಾಗಿ ಪರಿಣಮಿಸುವುದು. ಉದ್ವೇಗದ ನಡೆ ತರವಲ್ಲ.

ತುಲಾ: ಪಾಲುದಾರಿಕೆಯಿಂದ ಅಪೂರ್ಣವಾಗಿದ್ದ ನಿಮ್ಮ ವ್ಯಾಪಾರ ಈ ದಿನ ಪ್ರಾಧಾನ್ಯತೆಯನ್ನು ಪಡೆದುಕೊಳ್ಳಲಿದ್ದು, ಲಾಭಾಂಶದಲ್ಲಿ ಹೆಚ್ಚಿನ ಭಾಗ ನಿಮ್ಮದಾಗಲಿದೆ. ವ್ಯವಹಾರಗಳ ವಿಚಾರದಲ್ಲಿ ಸ್ಪಷ್ಟ ಚಿತ್ರಣ ಮೂಡಿಬರಲಿದೆ.

ವೃಶ್ಚಿಕ: ಸತ್ಕಾರ್ಯಗಳಿಗೆ ಸಹಾಯ ಕೋರಿ ಬರುವವರಿಗೆ ಸಾಧ್ಯವಾದ ಸಹಾಯ ಹಸ್ತ ಚಾಚುವಿರಿ. ವೈಯಕ್ತಿಕ ವ್ಯವಹಾರದಲ್ಲಿ ಉಂಟಾದ ಹಿನ್ನಡೆಯ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಹಿತೈಷಿಗಳ ಸಹಕಾರದ ಭರವಸೆ.

ಧನು: ವೈಯಕ್ತಿಕ ಜೀವನದಲ್ಲಿನ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವ ದಿಕ್ಕಿನಲ್ಲಿ ಗಣ್ಯರೊಂದಿಗೆ ಮುಖಾಮುಖಿ ಸಂಭಾಷಣೆ. ದುಡುಕು ಸ್ವಭಾವದಿಂದಾಗಿ ತೊಂದರೆ. ವಾತಸಂಬಂಧಿ ಕಾಯಿಲೆ ಉಲ್ಬಣವಾದೀತು.

ಮಕರ: ವ್ಯವಹಾರದಲ್ಲಿ ಕೌಶಲದಿಂದಾಗಿ ಹೆಚ್ಚಿನ ಲಾಭ ದೊರಕುವುದು. ಭೂ ವ್ಯವಹಾರದಲ್ಲಿ ನಿಮ್ಮ ಹಟಮಾರಿತನಕ್ಕೆ ಜಯವಾಗುವುದರಲ್ಲಿ ಅನುಮಾನವಿಲ್ಲ. ಇಚ್ಛೆಯಂತೆ ಭೂಮಿ ಅಥವಾ ಮನೆ ಖರೀದಿ ಭಾಗ್ಯ.

ಕುಂಭ: ಬೃಹತ್ ಯೋಜನೆಗಳಿಗೆ ಎಲ್ಲ ಸನ್ನಿವೇಶಗಳು ಅನುಕೂಲಕರವಾಗಿ ಪರಿಣಮಿಸಲಿವೆ. ಹೊಸ ಹೊಸ ಅವಕಾಶಗಳು ನಿಮ್ಮನ್ನು ಅರಸಿ ಬರಲಿವೆ. ವಿವಾಹಾಕಾಂಕ್ಷಿಗಳಿಗೆ ವೈವಾಹಿಕ ಮಾತುಕತೆಯಿಂದ ತೃಪ್ತಿಕರ ಸಮಾಚಾರ.

ಮೀನ: ಕುಶಲಕರ್ಮಿಗಳಿಗೆ ಪ್ರತಿಭಾ ಪ್ರದರ್ಶನದ ಅವಕಾಶದೊಂದಿಗೆ ಮಾರಾಟದಿಂದ ಉತ್ತಮ ಲಾಭ. ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ. ಪ್ರಯಾಣದಲ್ಲಿ ಸುಖಾನುಭವ. ಆರೋಗ್ಯ ಉತ್ತಮವಾಗಿರುವುದು.

ನಿಮ್ಮ ಜನ್ಮದಿನ 2-ಏಪ್ರಿಲ್: ಈ ದಿನ ಅತ್ಯಂತ ಶುಭಕರ. ಕೃಷಿ ಮತ್ತು ಹೈನೋದ್ಯಮಗಳಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ವ್ಯಾಪಾರಗಳಿಂದ ಹೇರಳ ಲಾಭ. ದೈವಬಲದಿಂದ ಕೈಗೊಂಡ ಕೆಲಸಕಾರ್ಯಗಳಲ್ಲಿ ಜಯ. ಹೊಸ ಕೆಲಸಗಳನ್ನು ಆರಂಭಿಸಲು ಹುಮ್ಮಸ್ಸು ಹೆಚ್ಚಾಗಲಿದೆ.

ಪದಬಂಧ 4555

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ನಿರಂತರ ಎಂದು ಹೀಗೆನ್ನಿ (3)
7.ನವರತ್ನಗಳಲ್ಲಿ ಒಂದಾಗಿರುವ ಹವಳ (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ಪದ್ಯಗಳ ಸಾಲು (3)
14.ಬೈದಾಟಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಯಂತ್ರ (3)

ಮೇಲಿಂದ ಕೆಳಕ್ಕೆ
1.ಆ ಸಭಾಸದ ಚರ್ಚಿಸಿದ್ದು ಭ್ರಾಂತಿಯ ವಿಷಯ (3)
2.ನಿರ್ಣಯ ಮಾಡಲ್ಪಟ್ಟದ್ದು (3)
3.ಕಶ್ಯಪನ ಹೆಂಡತಿ (2)
5.ಈತ ಶಿರವನ್ನು ಕಡಿಯುವವನು (5)
6.ಸಂವತ್ಸರದ ಹೆಸರೂ ಆಗಿರುವ ಬೇನೆ (2)
7.ಕೂದಲಿರದೆ ಬೋಳಾದವ (3)
8.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
9.ಪಾಕದ ನಂತರ ಸೇವಿಸಿದ ಷರಬತ್ತು (3)
10.ಯುದ್ಧಕ್ಕೆ ಸನ್ನದ್ಧವಾದ ಸೇನೆ (3)
13.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವುದು (2)
15.ಹೆಜ್ಜೆ ಹೆಜ್ಜೆಗೂ ಇಷ್ಟೊಂದು ನಾಚಿಕೆಯೇ? (2)
16.ಹೆಬ್ಬೆರಳಿನ ಪಕ್ಕದ ಬೆರಳಿದು (3)
17.ಲೀಲಾಜಾಲವಾಗಿ ನಡೆದ ಹರಾಜು (3)



4554ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಚ್ಛ್ವಾಸ 3.ಗಾಣಿಗ 5.ಭಿನ್ನಾಭಿಪ್ರಾಯ 7.ಕ್ಷುಲ್ಲಕ 8.ಕಹಳೆ 9.ಓರಿಗೆ 11.ಗರತಿ 13.ಪ್ರಧಾನ 15.ಶುಕ್ತಿಕೆ 16.ವಿಮಾನಯಾನ 17.ಹುಯಿಲು 18.ಕದಿರು
ಮೇಲಿಂದ ಕೆಳಕ್ಕೆ: 2.ಸಭಿಕ 3.ಗಾಯಕ 6.ಭಿಕಾರಿ 9.ಓದುಗ 10.ಗೆಳತಿ 12.ರಸನ 14.ನವಿಲು 15.ಶುನಕ

ಸುಡೊಕು 4941

					1	8		7
				2				
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9	8	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4940 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕಿರಣ್ ಕುಮಾರ್. ಸಿ
(ಮಾಲೀಕರು ಪಾರ್ವತಿ ಸೂಪರ್ ಫ್ಯೂಲ್ಸ್, ಬಿಡದಿ
ದಿ. ಶ್ರೀ ಪಾರ್ವತಮ್ಮ ಮತ್ತು
ದಿ. ಶ್ರೀ ಚನ್ನಯ್ಯ (ನಿ.ಅರಣ್ಯಾಧಿಕಾರಿ)
ಇವರ ದ್ವಿತೀಯ ಪುತ್ರ (02-04-2018)
ಮೂರನೇ ವರ್ಷದ ಪುಣ್ಯಸ್ಮರಣೆ, ಮಲ್ಲಿನಾಥಪುರ,
ಬಿ.ಜಿ. ಪುರ ಹೋಬಳಿ, ಮಳವಳ್ಳಿ, ತಾ. ಮಂಡ್ಯ ಜಿಲ್ಲೆ

ಇಂತಿ ದುಃಖತಪ್ತರು ಪತ್ನಿ, ಮಗ, ಕುಟುಂಬದವರು
ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿ ವರ್ಗ
ಮೊ. 9902230350, 9845010161

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಮನೆಯಲ್ಲೇ ಲಸಿಕೆ ನೀಡಿ ಮಾರ್ಗಸೂಚಿ ಉಲ್ಲಂಘನೆ
ಟಿಎಚ್‌ಒ ಅಮಾನತು

ಪ್ರಜಾವಾಣಿ ವಾರ್ತೆ

ಹಾವೇರಿ: ಕೃಷಿ ಸಚಿವ ಬಿ.ಸಿ.ಪಾಟೀಲ ಅವರಿಗೆ ಅವರ ನಿವಾಸದಲ್ಲೇ ಕೋವಿಡ್ ಲಸಿಕೆ ನೀಡಿ ಮಾರ್ಗಸೂಚಿ ಉಲ್ಲಂಘಿಸಿದ್ದಾರೆ ಎಂಬ ಆರೋಪದ ಮೇಲೆ ಹಿರೇಕೆರೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಝಡ್.ಆರ್. ಮಕಾನದಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಕೋವಿಡ್ ಲಸಿಕೆಯನ್ನು ಆರೋಗ್ಯ ಕೇಂದ್ರಗಳಲ್ಲಿ ಮಾತ್ರ ನೀಡಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನವಿದ್ದರೂ, ಮಾರ್ಚ್ 2ರಂದು ಕೃಷಿ ಸಚಿವ ಮತ್ತು ಅವರ ಪತ್ನಿಗೆ, ಹಿರೇಕೆರೂರಿನಲ್ಲಿರುವ ಅವರ ಮನೆಯಲ್ಲೇ ವೈದ್ಯಕೀಯ ಸಿಬ್ಬಂದಿ ಲಸಿಕೆ ಹಾಕಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಆರೋಗ್ಯಾಧಿಕಾರಿಯ ಗಮನಕ್ಕೆ ತಂದಿರಲಿಲ್ಲ ಎಂದು ಡಿಎಚ್‌ಒ ಅವರು ಮೇಲಾಧಿಕಾರಿಗೆ ವರದಿ ಸಲ್ಲಿಸಿದ್ದರು.

ಮಕಾನದಾರ್

‘ಕೃಷಿ ಸಚಿವರ ಕರೆಯ ಮೇರೆಗೆ ಅವರ ಮನೆಗೆ ತೆರಳಿ ಇಲಾಖೆ ಸಿಬ್ಬಂದಿ ಕೋವಿಡ್–19 ಲಸಿಕೆ ನೀಡಿ, ನಂತರ ಮಾರ್ಗಸೂಚಿ ಅನ್ವಯ 30 ನಿಮಿಷಗಳವರೆಗೆ ನಿಗಾವಹಿಸಿದ್ದರು’ ಎಂದು ಟಿಎಚ್‌ಒ ಮಕಾನ್‌ದಾರ್ ಅವರು ಡಿಎಚ್‌ಒ ಅವರು ನೀಡಿದ ನೋಟಿಸ್‌ಗೆ ಸ್ಪಷ್ಟೀಕರಣ ನೀಡಿದ್ದರು.

ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ

ಶ್ರೀಮತಿ ಹೆಚ್.ಎಸ್.ಪ್ರಭಾ ರವರು
ದಿನಾಂಕ: 24-03-2021 ನೇ ಬುಧವಾರ
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿ|| 03.04.2021ನೇ ಶನಿವಾರದಂದು ಅಡಕಮಾರನಹಳ್ಳಿ ತೋಟ, ದಾಸನಪುರ / ಅಡಕಮಾರನಹಳ್ಳಿ, ತುಮಕೂರು ರಸ್ತೆ, ಬೆಂಗಳೂರಲ್ಲಿ ನಡೆಸಲು ಗುರುಹಿರಿಯರು ನಿಶ್ಚಯಿಸಿರುತ್ತಾರೆ. ಇದನ್ನೇ ಆಹ್ವಾನಪತ್ರಿಕೆಯಾಗಿ ಪರಿಗಣಿಸಬೇಕೆಂದು ವಿನಂತಿ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖ ಭಾಗಿಗಳು :
ಶ್ರೀ ಎಂ.ಕೃಷ್ಣಪ್ಪ, ಡಾ. ಕೆ.ಶೋಭಾ & ಶ್ರೀ ಅಜಯ್
ಶ್ರೀ ಕೆ.ನವೀನ್ & ಶ್ರೀಮತಿ ಮಮತಾ
ಕು. ಮಾನಸ ಮತ್ತು ಮೊಮ್ಮಕ್ಕಳು

ಜಮ್ಮು: ತಿರುಪತಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಮಂಜೂರು

ಜಮ್ಮು: ದೇವಾಲಯ ಹಾಗೂ ಅದಕ್ಕೆ ಸಂಬಂಧಿಸಿದ ಮೂಲಸೌಕರ್ಯಗಳ ನಿರ್ಮಾಣಕ್ಕೆ ತಿರುಮಲ ತಿರುಪತಿ ದೇವಸ್ಥಾನ ಮಂಡಳಿಗೆ 25 ಹೆಕ್ಟೇರ್ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡುವ ಪ್ರಸ್ತಾವಕ್ಕೆ ಜಮ್ಮು, ಕಾಶ್ಮೀರ ಆಡಳಿತ ಮಂಡಳಿ ಗುರುವಾರ ಅನುಮೋದನೆ ನೀಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

GRT JEWELLERS Since 1964
ಉದ್ಯೋಗ ಅವಕಾಶಗಳು
1964 ರಿಂದ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವ GRT ಜ್ಯುವೆಲ್ಲರ್ಸ್ **ಬೆಂಗಳೂರು** ಷೋರೂಂಗಳಿಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ. ಹೊಸದಾಗಿ ಕೆಲಸವನ್ನು ಹುಡುಕುತ್ತಿರುವ ಹಾಗೂ ಅನುಭವವಿರುವ ಅಭ್ಯರ್ಥಿಗಳು ತಮ್ಮ ಸ್ವ ವಿವರಗಳು ಹಾಗೂ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನಕಲು ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಪದವೀಧರರು ಅಥವಾ PUC ಉತ್ತೀರ್ಣತೆ ಪಡೆದವರು (ಹೊಸಬರು ಅಥವಾ ಆಭರಣ ವಿಕ್ರಯ ಹಾಗೂ ಇತರೆ ರೀಟೈಲ್ ವಿಭಾಗದಲ್ಲಿ ಅನುಭವವಿರುವವರು)
ವಯೋಮಿತಿ : 22 ರಿಂದ 27 ವರ್ಷಗಳ ವರೆಗೆ
ಸೇಲ್ಸ್ ಅಸಿಸ್ಟೆಂಟ್ಸ್
PUC ಮತ್ತು 10ನೇ ತರಗತಿ (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು).
ವಯೋಮಿತಿ : 17 ರಿಂದ 22 ವರ್ಷಗಳ ವರೆಗೆ
ದಿನಾಂಕ ಮತ್ತು ಸಮಯ
03-04-2021, ಶನಿವಾರ
(ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
GRT ಜ್ಯುವೆಲ್ಲರ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
ಮಲ್ಲೇಶ್ವರಂ : ನಂ. 530, 2ನೇ ಮುಖ್ಯ ರಸ್ತೆ, ಸಂಪಿಗೆ ಥಿಯೇಟರ್ ಹತ್ತಿರ, ಸಂಪಿಗೆ ರೋಡ್, ಬೆಂಗಳೂರು - 560 003.
ಮಾರತಹಳ್ಳಿ : ನಂ. 96, ಮುನ್ನೇಕೊಳಲು, ವರ್ತೂರ್ ಮುಖ್ಯ ರಸ್ತೆ, (ತುಳಸೀ ಥಿಯೇಟರ್ ಬಳಿ), ಬೆಂಗಳೂರು - 560 037.
ಸಂಪರ್ಕ ಸಂಖ್ಯೆಗಳು : 96861 13235 96867 05064
ಚಿನ್ನಾಭರಣಗಳ ಮಾರಾಟದಲ್ಲಿ ಒಳ್ಳೆಯ ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ನಿಮ್ಮ ಸ್ವವಿವರಗಳನ್ನು (Resume) recruitment@grtjewels.comಗೆ ಕಳುಹಿಸಬಹುದು.

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕರ್ನಾಟಕದಾದ್ಯಂತ OFFICE, Company ಗಳಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ.10th, PUC, Any Degree, ITI, Diploma Pass/ Fail, ನೇರನೇಮಕಾತಿ ಸಂಬಳ:16,200-65,000/- ಊಟ ವಸತಿಯೊಂದಿಗೆ 8095037111, 8095036111.

WORK FROM HOME:ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ವಯಸ್ಸಾದವರು,ಮನೆಯಲ್ಲೇ ಕುಳಿತು ಬುಕ್ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ.8884611125, 8884611126

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 9611715755

Part-Time Jobs

ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9972387417, 9844978728

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720916, 7411720920

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

Walk-in

Tata Group (Aerostructures) Hyderabad is Hiring!!!
TATA
REQUIREMENT
Position: Assembly Operator (Fitter)
Qualification: ITI - Fitter + Apprenticeship (NCVT)
Experience: 4 to 8 Years
Description: Hands on Experience in Aerostructure Assembly Process. Good understanding on Drawings, Familiar with Hand Tools and Cutting Tools.
Note: Candidates working in Aerospace industry are preferred.
Documents to Carry: (1) Updated CV (2) ITI National Trade Certificate (3) Apprenticeship Certificate (NCVT) (4) Experience Letters (5) Salary Slips
Work Location: Hyderabad
Interview Date & Time: 03-04-2021 & 09 AM to 05 PM.
Venue: REGENTA PLACE, #11, Park Road, Near Indian Express Circle, Bangalore-560051. (Karnataka)
NOTE: YOU ARE NOT ALLOWED WITHOUT A MASK

ಪ್ರವಾಸ

Travel

21.05.2021, 18ದಿನಗಳು ಚಾರ್ ಧಾಮ್‌ಯಾತ್ರೆ. 24.06.2021, 18ದಿನಗಳು ಅಮರನಾಥ್‌ಯಾತ್ರೆ, ದೆಹಲಿ,ವೈಷ್ಣೋದೇವಿ, ಕಾಶ್ಮೀರ್, ಹಿಮಲಿಂಗ, ಅಮೃತ್‌ಸರ್ ಇತ್ಯಾದಿ. ಜೈರಾಮ್ ಟೂರ್ಸ್ ವಿ.ವಿ.ಪುರಂ,ಬೆಂಗಳೂರು.04. 9342514289, 9686721196

★ಶ್ರೇಯಸ್ ಟೂರ್ಸ್★ 16.04.2021,18.05.2021 23ದಿನಗಳು ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಪ್ರವಾಸ.16.04.2021, 08.05.2021,18.05.2021 12ದಿನಗಳು ಗೌಹಾತಿ,ಕಾಜಿರಂಗ, ಶಿಲ್ಲಾಂಗ್,ಬೊಂಡಿಲಾ,ತವಾಂಗ್, ಚಿರಾಪುಂಜಿ.,26.04.2021, 30.05.2021 12ದಿನಗಳು ದೀಮಾಪುರಿ,ಕೊಹಿಮಾ, ಇಂಪಾಲ್,ಐಜಾಲ್, ಉನಕೋಟಿ,ಅಗರ್ತಲಾ, ಮಾತಬರಿ.,08.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್,.05.06.2021 10ದಿನಗಳು ದೆಹಲಿ, ಸಿಮ್ಲಾ, ಕುಲುಮನಾಲಿ, 5ದೇವಿಯರು, ವೈಷ್ಣೋದೇವಿ,ಅಮೃತಸರ್, ವಾಘಗಡಿ,ಕುರುಕ್ಷೇತ್ರ. 9743351212/ 9902050065/ 9206979202

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಮಾಟಮಂತ್ರ, ಸಾಲಭಾದೆ,ಶತ್ರುನಾಶ, ಧನವಶ,ಜನವಶ ಇನ್ನೂಯಾವುದೇ ಸಮಸ್ಯೆಗಳಿಗೆ ನೋಡುವಮೂಲಕ 11ನಿಮಿಷದಲ್ಲಿ ಪರಿಹಾರ. 9008968867

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ_ಮೂಲಕ_ಪರಿಹಾರ ತಿಳಿಸುತ್ತಾರೆ. ಬಸ್_ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೆ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲದೊರೆಯುತ್ತದೆ. ಸಂಪರ್ಕಿಸಿ:09499457849/ 09953286082. ಏಜೆಂಟರು ಸಂಪರ್ಕಿಸಬಹುದು.

DH ಪ್ರಜಾವಾಣಿ **Classifieds**
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಗುಡ್ ಫ್ರೈಡೇ: ತ್ಯಾಗದ ಸಂಕೇತ

• ಸಿ. ಮರಿಜೋಸೆಫ್

ಮತ್ತೆ ಬಂದಿದೆ ಗುಡ್ ಫ್ರೈಡೇ. ಕನ್ನಡದ ಜಾಯಮಾನದಲ್ಲಿ ಶುಭಶುಕ್ರವಾರ. ಮಾನವಪ್ರೇಮಿ ಯೇಸುಕ್ರಿಸ್ತನು ಶಿಲುಬೆಗೇರಿದ ದಿನ.

ಧೂಳು, ಕಸ, ಸಗಣಿ, ಕೆಸರು, ಉಗುಳು, ಬೆವರು, ರಕ್ತಗಳಲ್ಲಿ ಮಿಂದು ಬಿಸಿಲಲ್ಲಿ ಬೆಂದು ಶೂಲದ ಪ್ರತೀಕವಾಗಿ ಸಾಧುಸಜ್ಜನರು ಕಲ್ಪಿಸಿಕೊಳ್ಳಲೂ ಹೇಸುತ್ತಿದ್ದ ಒರಟು ಮರದ ಶಿಲುಬೆ ಈವೊತ್ತು ಬಂಗಾರದ ತಗಡು ಹೊದ್ದು ಜೆರುಸಲೇಮ್ ನಗರದಲ್ಲಿ ವಿಶ್ವದಲ್ಲೆಡೆಯ ಜನರಿಂದ ಪೂಜೆಗೊಳ್ಳುತ್ತಿದೆ. ಮರಣದ ಸಂಕೇತವಾಗಿದ್ದ ಶಿಲುಬೆಯು ಕ್ರಿಸ್ತನ ತ್ಯಾಗಬಲಿದಾನದ ನಂತರ ಪ್ರೀತಿಯ ಮತ್ತು ಜೀವದ ಸಂಕೇತವಾಗಿದೆ. ಅಮೃತಫಲದ ದೆಸೆಯಿಂದ ಮರಣವೃಕ್ಷವು ಚಿಗುರಿ ನಳನಳಿಸುತ್ತಿದೆ.



ಕ್ರಿಸ್ತನೆಂದೂ ರಾಜ್ಯ ಕಟ್ಟಲಿಲ್ಲ. ಸೈನಿಕರನ್ನು ಸೇರಿಸಿಕೊಂಡು ಯುದ್ಧಸಾರಿ ಕೊಚ್ಚಿ ಕೆಡವಿ ಲೂಟಿ ಮಾಡಿ ಮಾನಭಂಗ ಮಾಡಿ ಎನ್ನಲಿಲ್ಲ. ಬಲಗೆನ್ನೆಗೆ ಹೊಡೆದವಗೆ ಎಡಗೆನ್ನೆ ತೋರು ಎಂದ. ಸ್ತ್ರೀಯೊಬ್ಬಳಿಗೆ ಹಾದರಗಿತ್ತಿ ಪಟ್ಟ ಹೊರಿಸಿದ ಜನರಿಗೆ ಹಾದರದಲ್ಲಿ ಪುರುಷನ ಪಾತ್ರವೂ ಇರಬೇಕಲ್ಲವೇ, ಅವನೂ ಸಮಾನ ತಪ್ಪಿತಸ್ಥನಲ್ಲವೇ - ಎಂದು ಜಂಕಿಸಿ ಕೇಳಿದ. ನಿನ್ನ ಶತ್ರುಗಳನ್ನೂ ಪ್ರೀತಿಸು, ನಿನಗೆ ಕೆಡಕು ಮಾಡುವವನನ್ನೂ ಕ್ಷಮಿಸು, ಯಜಮಾನನಂತೆ ದರ್ಪ ತೋರದೆ ಸೇವಕನಂತೆ ತಗ್ಗಿ ಬಗ್ಗಿ ನಡೆ ಎಂದ, ಬೇರೆಯವರ ತಪ್ಪನ್ನು ಎತ್ತಿ ತೋರುವ ಮೊದಲು ನಿನ್ನ ಕಣ್ಣನ್ನು ಸ್ವಚ್ಛಪಡಿಸಿಕೋ ಎಂದ, ಇತರರನ್ನೂ ನಿನ್ನಂತೆಯೇ ಪರಿಭಾವಿಸಿದರೆ ಅದೇ ಸ್ವರ್ಗ ಎಂದ.

ಆದರೆ ಅವನ ಮಾತುಗಳು ಧರ್ಮದ ಸೂತ್ರ ಹಿಡಿದ ಕೆಲವರಿಗೆ ಅಪಥ್ಯವೆನಿಸಿತು. ತಮ್ಮನ್ನಾಳುತ್ತಿದ್ದ ಚಕ್ರವರ್ತಿಯ ಪ್ರತಿನಿಧಿಯಲ್ಲಿಗೆ ತೆರಳಿ ಯೇಸುಕ್ರಿಸ್ತನ ಮೇಲೆ ಇಲ್ಲಸಲ್ಲದ ದೂರು ಹೊರಿಸಿ ಕ್ರೂರವಾದ ಶಿಲುಬೆಮರಕ್ಕೆ ಮೊಳೆಗಳಿಂದ ಜಡಿದು ಕೊಂದರು. ಅದೊಂದು ಬಲು ಘೋರ ಶಿಕ್ಷೆ.

ತನ್ನ ಅತಿಮಾನುಷ ಶಕ್ತಿಯಿಂದ ಕ್ರಿಸ್ತ ಕುಷ್ಠವನ್ನು ತೊಳೆದಿದ್ದ, ಕುರುಡರು ನೋಡುವಂತೆ ಮಾಡಿದ್ದ, ಸತ್ತವರನ್ನು ಬದುಕಿಸಿದ್ದ, ಜಡರಲ್ಲಿ ಜೀವಚೈತನ್ಯ ತುಂಬಿದ್ದ, ದೀನದಲಿತರೆಡೆಗೆ ಪ್ರೇಮಕಾರಂಜಿಯನ್ನೇ ಹರಿಸಿದ್ದ. ಆದರೆ ಧರ್ಮಾಂಧರ ಪಾಲಿಗೆ ಸಿಂಹಸ್ವಪ್ನವಾಗಿದ್ದ. ಅದೇ ಅವನಿಗೆ ಮುಳುವಾಯಿತು.

ಶುಭಶುಕ್ರವಾರದ ಮತ್ತೊಂದು ಆಚರಣೆ ಶಿಲುಬೆಯಾತ್ರೆ, ಇಂದು ಜಗದಲ್ಲೆಡೆ ಕ್ರೈಸ್ತರು ಉಪವಾಸ ಮಾಡಿ ಶಿಲುಬೆ ಮುಂದೆ ಮಂಡಿಯೂರಿ ‘ಇದೇ ಪವಿತ್ರ ಶಿಲುಬೆಯಿಂದ ಲೋಕವು ಉದ್ಧಾರವಾಯಿತು’ ಎನ್ನುತ್ತಾ ಮೌನಧ್ಯಾನ ಮಾಡುತ್ತಾರೆ. ಶಿಲುಬೆಯಾತ್ರೆಯು ಯೇಸುವಿನ ಕೊನೇ ಕ್ಷಣಗಳ ದೃಶ್ಯಧ್ಯಾನ. ಗುಡಿಯೊಳಗಿನ ಗೋಡೆಯಲ್ಲಿ ಇರಿಸಲಾದ ಹದಿನಾಲ್ಕು ಭಿತ್ತಿಚಿತ್ರಗಳಲ್ಲಿ ಯೇಸುವಿನ ಯಾತ್ರೆಯ ಘಟ್ಟಗಳನ್ನು ಚಿತ್ರಿಸಲಾಗಿರುತ್ತದೆ. ಮರಣದಂಡನೆಗೆ ಗುರಿಯಾದ ಯೇಸುವಿನ ಭುಜದ ಮೇಲೆ ಭಾರವಾದ ಶಿಲುಬೆ ಹೊರಿಸಿ ಜೆರುಸಲೇಮಿನ ಹೊರವಲಯದ ಗುಡ್ಡದತ್ತ ಮೆರವಣಿಗೆ ಸಾಗಿದ್ದು, ದಾರಿಮಧ್ಯೆ ಯೇಸು ಬಳಲಿ ಬೆಂಡಾಗಿ ನೆಲಕ್ಕೆ ಬಿದ್ದು ಸಿಮೋನನೆಂಬ ವ್ಯಕ್ತಿ ಶಿಲುಬೆ ಹೊರಲು ನೆರವಾದದ್ದು ವೆರೋನಿಕಾ ಎಂಬ ಹೆಣ್ಣುಮಗಳು ಮುನ್ನುಗ್ಗಿಬಂದು ಯೇಸುವಿನ ಮುಖ ಒರೆಸಿ ಸಾಂತ್ವನ ಹೇಳಿದ್ದು ತನಗೆ ಅನುಕಂಪ ತೋರಿದ ಹೆಂಗಳೆಯರಿಗೆ ಯೇಸು ಮುಂದಿನ ಪೀಳಿಗೆಯ ಬಗ್ಗೆ ಚಿಂತಿಸಿರಿ ಎಂದು ನುಡಿದಿದ್ದು, ಸೈನಿಕರು ಯೇಸುವಿನ ಕೈಕಾಲುಗಳಿಗೆ ಚೂಪಾದ ಮೊಳೆಗಳಿಂದ ಶಿಲುಬೆಮರಕ್ಕೆ ಜಡಿದಿದ್ದು ಮುಂತಾದ ಘಟನೆಗಳ ಚಿತ್ರಗಳವು.

ಜನರು ಪ್ರತಿ ಭಿತ್ತಿಚಿತ್ರದ ಮುಂದೆ ಮೊಣಕಾಲೂರಿ ನಮಸ್ಕಾರ ಮಾಡುತ್ತಾರೆ. ತದೇಕಚಿತ್ತದಿಂದ ಧ್ಯಾನಿಸುತ್ತಾರೆ, ಕಿಸೆಪುಸ್ತಕದಲ್ಲಿನ ಜಪ ಓದುತ್ತಾರೆ, ನಿಡುಸುಯ್ಯುತ್ತಾ ತಮ್ಮ ಮನದ ದೌರ್ಬಲ್ಯಗಳಿಗಾಗಿ ವ್ಯಥೆ ಪಡುತ್ತಾರೆ. ಈ ದಿನ ಉಪವಾಸವಿದ್ದು ದೇವಾಲಯದಲ್ಲಿ, ಮನೆಯಲ್ಲಿ, ರಸ್ತೆಯಲ್ಲಿ, ಊರಹೊರಗಿನ ಗುಡ್ಡದಲ್ಲಿ, ಯೇಸುಕ್ರಿಸ್ತನ ಶಿಲುಬೆಯಾತ್ರೆಯನ್ನು ಅನುಭವಿಸುತ್ತಾ ಕ್ರಿಸ್ತನ ನೋವು ಸಂಕಟಗಳಲ್ಲಿ ಭಾಗಿಯಾಗುತ್ತಾ ಆತ್ಮಶೋಧನೆ ಮಾಡಿಕೊಳ್ಳುತ್ತಾರೆ.

ಇಂದು ದೇವಾಲಯದಲ್ಲಿ ಶೋಕಾಚರಣೆಯ ಕಾರಣ ಯಾವ ಅಲಂಕಾರವೂ ಇರುವುದಿಲ್ಲ. ಸುಮಧುರ ಗಂಟೆಯೂ ನಿನದಿಸದ ಹಾಗೆ ಅದರ ನಾಲಗೆಯನ್ನು ಬಟ್ಟೆಯಿಂದ ಸುತ್ತಿರುತ್ತಾರೆ. ಪೂಜಾಪೀಠವನ್ನು ಹೂದಾನಿ ಮೇಣದಬತ್ತಿ ವಸ್ತ್ರಗಳಿಲ್ಲದೆ ಖಾಲಿ ಬಿಡುತ್ತಾರೆ. ಅಲಂಕಾರಿಕ ಪ್ರತಿಮೆಗಳಿಗೆ ಮುಸುಕು ಹಾಕಿ ಮುಚ್ಚುತ್ತಾರೆ. ಯೇಸು ಶಿಲುಬೆಯ ಮೇಲೆ ಮಡಿದ ಆ ದಿನ ಖಗ್ರಾಸ ಸೂರ್ಯಗ್ರಹಣವಂತೆ; ಅಂತೆಯೇ ಈ ದಿನ ಮಾತು ಗ್ರಹಣವಿಡಿದು ಮೌನವೇ ಆಳುತ್ತದೆ.

10 ಲಕ್ಷ ದಾಟಿದ ಕೋವಿಡ್–19

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸತತ ಎರಡನೇ ದಿನ ಕೂಡ ನಾಲ್ಕು ಸಾವಿರಕ್ಕೂ(4,234) ಅಧಿಕ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಸಂಖ್ಯೆ 10.01 ಲಕ್ಷಕ್ಕೆ ಮುಟ್ಟಿದೆ.



ರಾಜ್ಯದಲ್ಲಿ ಕಳೆದ ವರ್ಷ ಮಾರ್ಚ್ 8ರಂದು ಮೊದಲ ಪ್ರಕರಣ ವರದಿಯಾಗಿತ್ತು. ಮೊದಲ ಒಂದು ಲಕ್ಷ ಪ್ರಕರಣಗಳು 108 ದಿನಗಳಲ್ಲಿ ವರದಿಯಾದರೇ, ಕಡೆಯ ಒಂದು ಲಕ್ಷ ಪ್ರಕರಣಗಳು 110 ದಿನಗಳಲ್ಲಿ ವರದಿಯಾಗಿವೆ. ಈ ನಡುವೆ ಸೋಂಕಿತರ ಸಂಖ್ಯೆ ಏರಿಳಿತ ಕಂಡಿದೆ. ಈ ವರ್ಷದ ಮೊದಲ ತಿಂಗಳಲ್ಲಿ ಕೆಲ ದಿನಗಳು ಪ್ರಕರಣಗಳ ಸಂಖ್ಯೆ 500ರ ಗಡಿಯ ಆಸುಪಾಸಿಗೆ ಇಳಿಕೆಯಾಗಿತ್ತು. ಈಗ ಮತ್ತೆ ಏರಿಕೆಯ ಹಾದಿ ಹಿಡಿದಿದೆ. ಮಾರ್ಚ್ ಒಂದೇ ತಿಂಗಳಲ್ಲಿ 45,753 ಮಂದಿ ಸೋಂಕಿತರಾಗಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 5 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, ಮತ್ತೆ 2,906 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. 48 ಗಂಟೆಗಳ ಅವಧಿಯಲ್ಲಿ 5,834 ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 4.37 ಲಕ್ಷ ದಾಟಿದೆ. ಬೀದರ್ (218), ಕಲಬುರ್ಗಿ (144), ಮೈಸೂರು (109), ತುಮಕೂರು (102) ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ವರದಿಯಾಗಿವೆ. ಸೋಂಕಿತರಲ್ಲಿ ಮತ್ತೆ 18 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಬೆಂಗಳೂರಿನಲ್ಲಿ 11 ಮಂದಿ, ಧಾರವಾಡದಲ್ಲಿ ಇಬ್ಬರು, ತುಮಕೂರು, ಮೈಸೂರು, ಮಂಡ್ಯ, ಕಲಬುರ್ಗಿ, ಹಾಗೂ ಬೀದರ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,585ಕ್ಕೆ ಏರಿಕೆ ಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ಸದ್ಯ 30,865 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

1.11 ಲಕ್ಷ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 45 ರಿಂದ 60 ವರ್ಷದೊಳಗಿನ 50,620 ಮಂದಿ ಸೇರಿದಂತೆ 1.11 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಆರೋಗ್ಯ ಉಪ ಕೇಂದ್ರಗಳು ಸೇರಿದಂತೆ 5 ಸಾವಿರ ಕೇಂದ್ರಗಳಲ್ಲಿ ಲಸಿಕೆ ವಿತರಣೆಯ ಗುರಿಯನ್ನು ಆರೋಗ್ಯ ಇಲಾಖೆಯ ಹಾಕಿಕೊಂಡಿತ್ತು. ಆದರೆ, 3,415 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ನಡೆದಿದೆ. ಗ್ರಾಮೀಣ ಪ್ರದೇಶದಲ್ಲಿ ಬಹುತೇಕರು ಲಸಿಕೆ ಕೇಂದ್ರಗಳಲ್ಲಿಯೇ ಹೆಸರು ನೋಂದಾಯಿಸಿಕೊಂಡು ಲಸಿಕೆ ಪಡೆದರು. ಪ್ರತಿ ಕೇಂದ್ರದಲ್ಲಿ 50ರಿಂದ 100 ಮಂದಿಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿತ್ತು. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಈವರೆಗೆ 39.26 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.67 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.45 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ 20 ಲಕ್ಷ (20.05 ಲಕ್ಷ) ದಾಟಿದೆ. ಅವರಲ್ಲಿ 5,315 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಮುಂಚೂಣಿ ಕೋವಿಡ್ ಯೋಧರಲ್ಲಿ 2.39 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.

ರಜಾ ದಿನವೂ ಲಸಿಕೆ ಲಭ್ಯ: ಸರ್ಕಾರಿ ರಜಾ ದಿನಗಳು ಸೇರಿದಂತೆ ಏಪ್ರಿಲ್ ತಿಂಗಳು ಪೂರ್ತಿ ಸಾರ್ವಜನಿಕ ಮತ್ತು ಖಾಸಗಿ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಹಾಕಿಸಬೇಕು ಮತ್ತು ಈ ಮೂಲಕ ಅತಿ ಹೆಚ್ಚು ಜನರಿಗೆ ಲಸಿಕೆ ದೊರೆಯುವಂತೆ ಮಾಡಬೇಕು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಈ ಸಂಬಂಧ ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದೆ.



ಜನಪ್ರಿಯ ತೋರಣದ ಹಿಂದಿನ ‘ಪಾಠ’ಶಾಲೆ

‘ಫಸ್ಟ್ ಬೆಂಚಲ್ಲಿ ಕೂತರೆ ಬರೀ ಬೋರ್ಡ್ ಕಾಣತ್ತೆ. ಲಾಸ್ಟ್ ಬೆಂಚಲ್ಲಿ ವರ್ಲ್ಡೇ ಕಾಣತ್ತೆ’ ನಾಯಕ ಹೊಡೆಯುವ ಸಂಭಾಷಣೆಯ ಈ ತುಣುಕು ಕರತಾಡನಕ್ಕೆ ಪಕ್ಕಾಗುವ ಮಿಂಚುಮಾತಷ್ಟೇ ಅಲ್ಲ, ಬದುಕಿನ ಮೌಲ್ಯವೊಂದನ್ನು ಅರುಹುವ ನುಡಿಮುತ್ತೂ ಹೌದು. ರಾಜ್‌ಕುಮಾರ್ ಚಿತ್ರಗಳಲ್ಲಿ ‘ಸಂದೇಶ ಪ್ರಜ್ಞೆ’ಯೊಂದು ಇರುತ್ತಿದ್ದುದನ್ನು ಕಂಡಿದ್ದೇವೆ. ಪುನೀತ್ ರಾಜ್‌ಕುಮಾರ್ ಕೂಡ ಪ್ರಜ್ಞಾಪೂರ್ವಕವಾಗಿ ಅಂಥದೊಂದು ಹೊಣೆಗಾರಿಕೆಯ ಮೆರವಣಿಗೆಗೆ ತಮ್ಮನ್ನು ಒಡ್ಡಿಕೊಂಡಿರುವ ಸಂಗತಿ ‘ಯುವರತ್ನ’ದಲ್ಲಿ ಢಾಳಾಗಿ ಕಾಣುತ್ತದೆ. ಫೋಕಸ್ ಲೈಟ್ ಅಡಿ ಜನಪ್ರಿಯ ನಾಯಕನೊಬ್ಬನನ್ನು ನಿಲ್ಲಿಸಿ, ಭಾವತೀವ್ರತೆಯ ಚಿತ್ರಕಥೆಯನ್ನು ಹೇಗೆ ಕಟ್ಟಬೇಕು ಎಂಬ ಇನ್ನೊಂದು ಪ್ರಾತ್ಯಕ್ಷಿಕೆಯನ್ನು ನಿರ್ದೇಶಕ ಸಂತೋಷ್ ಆನಂದ್‌ರಾಮ್ ನೀಡಿದ್ದಾರೆ.

ಚಿತ್ರದ ಮೊದಲರ್ಧದಲ್ಲಿ ಹಾಡು, ಕುಣಿತ, ಹೊಡೆದಾಟ, ಸಸ್ಪೆನ್ಸ್, ಪ್ರೇಮಪಲ್ಲವಿಯಂಥ ಒಗ್ಗರಣೆಯ ಘಮ ಮೂಗಿಗೆ ಅಡರುತ್ತದೆ. ಎರಡನೇ ಭಾಗ ಅನಾವರಣಗೊಳಿಸುವುದು ಅಸಲಿ ಖಾದ್ಯದ ರುಚಿಯನ್ನು. ಮೊದಲು ಹಿನ್ನೆಲೆ ಸಂಗೀತದ ದೊಡ್ಡ ಸದ್ದು ಕೇಳಿಸಿಕೊಂಡ ಕಿವಿಗಳಿಗೆ ಎರಡನೇ ಅರ್ಧದಲ್ಲಿ ನಾಕುತಂತಿಯ ನಾದದಲೆ. ತೆರೆತುಂಬ ನಾಯಕನೇ ಆವರಿಸಿಕೊಳ್ಳುವಂತೆ ತೋರಿಸಿ, ಪ್ರೇಕ್ಷಕರನ್ನು ಕುರ್ಚಿ ಮೇಲೆ ಭದ್ರವಾಗಿ ಕೂರುವಂತೆ ಮಾಡಿ, ಆಮೇಲೆ ಶೈಕ್ಷಣಿಕ ಸಮಸ್ಯೆಯೊಂದರ ಭಾವುಕ ಕಥೆಯನ್ನು ತಲೆನೇವರಿಸುವಂತೆ ಹೇಳುವ ಚಿತ್ರಕಥಾ ವಿನ್ಯಾಸವನ್ನು ನಿರ್ದೇಶಕರು ಮಾಡಿದ್ದಾರೆ. ಮುನ್ನುಡಿಯಲ್ಲಿ ಎದ್ದುಕಾಣುವ ನಾಯಕ, ನಡುಘಟ್ಟದಲ್ಲಿ ಎರಡು ಹೆಜ್ಜೆ ಹಿಂದೆ ನಿಂತು ಉಳಿದ ಪಾತ್ರಗಳಿಗೆ ನೆರಳಾಗುವ ಕಥನಕ್ರಮ ಆಸಕ್ತಿಕರ. ಪಂಚ್ ಡೈಲಾಗ್ ಹೊಡೆಸುವುದರಲ್ಲೂ ನಿರ್ದೇಶಕರದ್ದು ನಿಯಂತ್ರಿತ ಆಟ. ಅಣ್ಣಾವ್ರು, ಚಿ. ಉದಯಶಂಕರ್ ಅವರ ಹಳೆಕಾಲದ ನೆನಪುಗಳನ್ನು ಈ ಹೊತ್ತಿನ ಸಂಭಾಷಣೆಗೆ ಸಮೀಕರಿಸುವ, ಶಿವಣ್ಣನ ‘ಓಂ’ ಚಿತ್ರದ ಗುಂಗನ್ನು ಈ ಕ್ಷಣಕ್ಕೆ ಸಂಪರ್ಕಿಸುವ ಹೃದಯಂಗಮ ಯತ್ನವೂ ಸಂಭಾಷಣೆಗಳಲ್ಲಿದೆ.

‘ಯುವರತ್ನ’ ಸಿನಿಮಾದಲ್ಲಿ ಪುನೀತ್

ವಿದ್ಯಾರ್ಥಿಯಾಗಿ ಕಾಲೇಜು ಪ್ರವೇಶಿಸುವ ನಾಯಕ, ಶಿಕ್ಷಣ ವ್ಯವಸ್ಥೆಯ ದೊಡ್ಡ ಸಮಸ್ಯೆಯೊಂದರ ಸಿಕ್ಕುಗಳನ್ನು ಬಿಡಿಸುತ್ತಾ ಬೇರೆಯದೇ ಛಾಯೆಗೆ ಹೊರಳಿಕೊಳ್ಳುವ ಬೃಹತ್ ಭಿತ್ತಿಯ ಚಿತ್ರಕಥೆಯ ಸಿನಿಮಾ ಇದು. ಅದರಲ್ಲೇ ಸಸ್ಪೆನ್ಸ್, ನಗೆಚಟಾಕಿ, ನಾಯಕಿಯ ಮುಗ್ಧ ಮುಖ, ಖಳರ ಕೃತ್ರಿಮ, ಪೋಷಕರಿಗೂ ವಿದ್ಯಾರ್ಥಿಗಳಿಗೂ ಬೋಧನೆ, ಮೆಲೋಡ್ರಾಮಾ ಎಲ್ಲದರ ದರ್ಶನವಾಗುತ್ತದೆ.

ವೆಂಕಟೇಶ್ ಅಂಗುರಾಜ್ ಸಿನಿಮಾಟೊಗ್ರಫಿ ದೃಶ್ಯಗಳ ಅರ್ಥವಂತಿಕೆಯನ್ನು ಹೆಚ್ಚಿಸಿದೆ. ಥಮನ್ ಸ್ವರ ಸಂಯೋಜನೆಯಲ್ಲಿ ‘ಅಲಾ ವೈಕುಂಠಪುರಮುಲೋ’ ತೆಲುಗು ಚಿತ್ರದ ಪಲುಕುಗಳು ಅಲ್ಲಲ್ಲಿ ಕಾಣಿಸಿದರೂ ಲಾಲಿತ್ಯಕ್ಕೇನೂ ಕೊರತೆಯಿಲ್ಲ. ಪ್ರಕಾಶ್ ರೈ ಅಭಿನಯದ ಮೂಲಕ ಆವರಿಸಿಕೊಂಡರೆ, ಕುಣಿತ, ಹೊಡೆದಾಟವಷ್ಟೇ ಅಲ್ಲದೆ ನಟನೆಯಲ್ಲಿಯೂ ಪುನೀತ್ ಉತ್ಸಾಹದ ಒರತೆಯಾಗಿ ಹಿಡಿದಿಟ್ಟುಕೊಳ್ಳುತ್ತಾರೆ. ಧನಂಜಯ ಕೊಡುವ ಮಾತಿನ ಪಂಚ್‌ಗಳು ಉಪ್ಪಿನಕಾಯಿಯಂತೆ ರುಚಿಕರ. ನಾಯಕಿ ಸಯೇಶಾ ಸುಂದರವದನದಲ್ಲಿ ಭಾವದ ಗೆರೆಗಳು ಕೊಂಕುವುದಿಲ್ಲ. ನೃತ್ಯದಲ್ಲಿ ಅವರು ನಾಯಕನಿಗೆ ಸರಿಸಮ. ಸಾಯಿಕುಮಾರ್, ಅಚ್ಯುತ್ ಕುಮಾರ್, ರಂಗಾಯಣ ರಘು, ಪ್ರಕಾಶ್ ಬೆಳವಾಡಿ ನಿರ್ವಹಿಸಿರುವ ಸಣ್ಣ ಪಾತ್ರಗಳೂ ರುಜು ಹಾಕುತ್ತವೆ.

ಚಿತ್ರದ ಅಂತಿಮ ಘಟ್ಟದಲ್ಲಿ ಕಾಲೇಜಿನ ಬೆಲ್ಲು ಹೊಡೆಯುವ ಪಾತ್ರಧಾರಿಯನ್ನು ನಾಯಕ ಪುನೀತ್ ಬಿಗಿಯಾಗಿ ತಬ್ಬಿಕೊಳ್ಳುತ್ತಾರೆ. ಜನಪ್ರಿಯ ಚಿತ್ರವೊಂದು ಹೀಗೂ ಬೆಚ್ಚಗಿನ ಅನುಭವ ನೀಡಬಲ್ಲದು ಎನ್ನುವುದಕ್ಕೆ ಸಾಕ್ಷಿಯಾಗುವ ದೃಶ್ಯವಿದು. ಇಂತಹ ಹಲವು ಖುಷಿ ಕೊಡುವ, ಮನ ಅರಳಿಸುವ ಸಂಗತಿಗಳು ಚಿತ್ರದಲ್ಲಿವೆ. ಅನುಕೂಲಸಿಂಧುತ್ವದ ಹಂಗು, ಮೆಲೋಡ್ರಾಮಾದ ಗುಂಗಿನ ಹೊರತಾಗಿಯೂ ಅವೆಲ್ಲ ಜೀರ್ಣವಾಗುತ್ತವೆ.

ವಿಶಾಖ ಎನ್.

ನಾವು ನೋಡಿದ ಸಿನಿಮಾ

ಯುವರತ್ನ (ಕನ್ನಡ)
- **ನಿರ್ಮಾಣ:** ವಿಜಯ್ ಕಿರಗಂದೂರ್
- **ನಿರ್ದೇಶನ:** ಸಂತೋಷ್ ಆನಂದ್‌ರಾಮ್
- **ತಾರಾಗಣ:** ಪುನೀತ್ ರಾಜ್‌ಕುಮಾರ್, ಸಯೇಶಾ, ಡಾಲಿ ಧನಂಜಯ, ಪ್ರಕಾಶ್ ರೈ, ಸಾಯಿಕುಮಾರ್, ಅಚ್ಯುತ್ ಕುಮಾರ್, ಅವಿನಾಶ್, ರಂಗಾಯಣ ರಘು.

ತಿಲಕ ಇಡುವವರು ರಾಕ್ಷಸರು ಎಂದವರಿಗೆ ಮೋದಿ ತರಾಟೆ

ಜೋಯಾನಗರ್ (ಪಶ್ಚಿಮ ಬಂಗಾಳ) (ಪಿಟಿಐ): 'ನಾನು ಅಗತ್ಯವಿದ್ದಾಗ ಧರ್ಮದ ಮೊರೆ ಹೋಗುವವನು ಅಲ್ಲ. ಅದರಲ್ಲಿ ನನಗೆ ನಂಬಿಕೆಯೂ ಇಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು, ಮಮತಾ ಬ್ಯಾನರ್ಜಿ ಅವರನ್ನು ಲೇವಡಿ ಮಾಡಿದ್ದಾರೆ.

ಇಲ್ಲಿ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಮೋದಿ ಅವರು, ಮಮತಾ ವಿರುದ್ಧ ಹರಿಹಾಯ್ದಿದ್ದಾರೆ. 'ಜೈ ಶ್ರೀರಾಂ ಎಂದು ಹೇಳುವುದಕ್ಕೇ ಮಮತಾ ಬ್ಯಾನರ್ಜಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. ದುರ್ಗಾ ಪೂಜೆ, ಸರಸ್ವತಿ ಪೂಜೆ ನಡೆಸಲು ಅಡ್ಡಿಪಡಿಸಿದ್ದರು. ಈಗ ದೇವಾಲಯಗಳಿಗೆ ಹೋಗುತ್ತಿದ್ದಾರೆ, ಮಂತ್ರಪಠಣ ಮಾಡುತ್ತಿದ್ದಾರೆ. ಜತೆಗೆ ಈಗ ಅವರಿಗೆ ತಮ್ಮ ಗೋತ್ರ ನೆನಪಾಗಿದೆ. ಹೀಗೆ ಅಗತ್ಯಬಿದ್ದಾಗ ಧರ್ಮದ ಮೊರೆ ಹೋಗುವವನು ನಾನಲ್ಲ' ಎಂದು ನರೇಂದ್ರ ಮೋದಿ ಹೇಳಿದ್ದಾರೆ.

'ಈಗ ತಿಲಕ ಇಡುವುದಕ್ಕೆ ಮತ್ತು ಕೇಸರಿ ಪಟ್ಟಿ ಕಟ್ಟಿಕೊಳ್ಳುವುದಕ್ಕೂ ಟಿಎಂಸಿ ಆಕ್ಷೇಪ ವ್ಯಕ್ತಪಡಿಸುತ್ತಿದೆ. ತಿಲಕ ಇಡುವವರನ್ನು ರಾಕ್ಷಸರು ಎಂದು ಕರೆಯಲಾಗುತ್ತಿದೆ. 51 ಶಕ್ತಿಪೀಠಗಳಲ್ಲಿ ಒಂದಕ್ಕೆ ನಾನು ಭೇಟಿ ನೀಡಿದ್ದೆ. ಅದಕ್ಕೂ ಟಿಎಂಸಿ ಆಕ್ಷೇಪ ಮಾಡುತ್ತಿದೆ. ಮತುವಾ ಪಂಥದ ಸಂಸ್ಥಾಪಕ ಶ್ರೀ ಹರಿಚಂದ ಠಾಕೂರ್ ಅವರಿಗೆ ನಮನ ಸಲ್ಲಿಸುವುದರಲ್ಲಿ ಯಾವುದಾದರೂ ಸಮಸ್ಯೆ ಇದೆಯೇ' ಎಂದು ಮೋದಿ ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಜೋಯಾನಗರ್‌ನಲ್ಲಿ ಮೋದಿ ಗುರುವಾರ ಪ್ರಚಾರ ನಡೆಸಿದರು

'ಮಮತಾ ಅವರು ವಲಸಿಗರು ಮತ್ತು ನುಸುಳುಕೋರರನ್ನು ತಮ್ಮವರು ಎಂದು ಕರೆದುಕೊಳ್ಳುತ್ತಿದ್ದಾರೆ. ಬೇರೆ ರಾಜ್ಯದ ಜನರನ್ನು ಹೊರಗಿನವರು ಮತ್ತು ಪ್ರವಾಸಿಗರು ಎಂದು ಕರೆಯುತ್ತಿದ್ದಾರೆ. ದೇಶದ ಜನರನ್ನೇ ಹೊರಗಿನವರು ಎಂದು ಕರೆದು, ತಾರತಮ್ಯ ಮಾಡುವುದನ್ನು ನಿಲ್ಲಿಸಿ' ಎಂದು ಮೋದಿ ಆಗ್ರಹಿಸಿದ್ದಾರೆ.

ಚುನಾವಣಾ ಕಣದಲ್ಲಿ

- **ಬಿಪಿಎಫ್ ಅಭ್ಯರ್ಥಿ ಬಿಜೆಪಿಗೆ:** ಬೋಡೋಲ್ಯಾಂಡ್ ಪೀಪಲ್ಸ್ ಪಾರ್ಟಿಯ (ಬಿಪಿಎಫ್) ಅಭ್ಯರ್ಥಿ ರಂಗ್ಜಾ ಖುಂಗುರ್ ಬಸುಮತರಿ ಅವರು ಗುರುವಾರ ಬಿಜೆಪಿ ಸೇರಿದ್ದಾರೆ. ಅವರು ಸ್ಪರ್ಧಿಸಿರುವ ಕ್ಷೇತ್ರಕ್ಕೆ ಮೂರನೇ ಹಂತದಲ್ಲಿ ಮತದಾನ ನಡೆಯಲಿದೆ. ಎರಡು ದಿನಗಳಿಂದ ಅವರು ನಾಪತ್ತೆಯಾಗಿದ್ದರು. 'ಬಸುಮತರಿ ಅವರನ್ನು ಭೇಟಿಯಾಗಿದ್ದೇನೆ. ಅವರು ಗುರುವಾರ ಬಿಜೆಪಿ ಸೇರಲಿದ್ದಾರೆ' ಎಂದು ಬಿಜೆಪಿಯ ಹಿರಿಯ ಮುಖಂಡ ಹಿಮಂತ್ ಬಿಸ್ವ ಶರ್ಮಾ ಅವರು ಬುಧವಾರ ರಾತ್ರಿ ಟ್ವೀಟ್ ಮಾಡಿದ್ದಾರೆ. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದಲ್ಲಿ ಬಿಪಿಎಫ್ ಕೂಡ ಇದೆ.
- **ನೋಟಿಸ್:** ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಮುಖಂಡ, ವಿರೋಧ ಪಕ್ಷದ ನಾಯಕ ಹಗರಾಮ ಮೊಹಿಲಾರಿ ಅವರಿಗೆ ಬೆದರಿಕೆ ಹಾಕಿದ ಆರೋಪದ ಮೇಲೆ ಚುನಾವಣಾ ಆಯೋಗವು ಅಸ್ಸಾಂ ಸಚಿವ ಮತ್ತು ಬಿಜೆಪಿ ಮುಖಂಡ ಹಿಮಂತ ಬಿಸ್ವಾ ಶರ್ಮಾ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ.
- **'ಕ್ರಿಮಿನಲ್ ಅಭ್ಯರ್ಥಿಗಳು':** ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ 6,318 ಅಭ್ಯರ್ಥಿಗಳಲ್ಲಿ ಶೇ 18ರಷ್ಟು ಜನರು ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ಇವೆ ಎಂದು ಘೋಷಿಸಿದ್ದಾರೆ. ಎಡಿಆರ್ ವರದಿ ಈ ಮಾಹಿತಿ ನೀಡಿದೆ.
- **ಮಮತಾ ವಿರುದ್ಧ ದೂರು:** 'ಬಿಹಾರ ಹಾಗೂ ಉತ್ತರ ಪ್ರದೇಶದ ಗೂಂಡಾಗಳನ್ನು ಪಶ್ಚಿಮ ಬಂಗಾಳಕ್ಕೆ ಬಿಜೆಪಿ ಕರೆಸಿದೆ' ಎಂಬ ಆರೋಪ ಮಾಡಿದ್ದ ಮಮತಾ ಬ್ಯಾನರ್ಜಿ ವಿರುದ್ಧ ಬಿಹಾರದ ಕೋರ್ಟ್‌ನಲ್ಲಿ ದೂರು ದಾಖಲಾಗಿದೆ.
- **ಇ-ರಿಕ್ಷಾ:** ಗುರುವಾರ ಅಸ್ಸಾಂ ವಿಧಾನಸಭೆಗೆ ನಡೆದ ಎರಡನೇ ಹಂತದ ಮತದಾನದಲ್ಲಿ ಮತ ಚಲಾಯಿಸಲು ಮತಗಟ್ಟೆಗಳಿಗೆ ಪ್ರಯಾಣಿಸಲು ಹಿರಿಯ ನಾಗರಿಕರಿಗೆ ಸಿಲ್ಚಾರ್ ಜಿಲ್ಲಾಡಳಿತವು ಇ-ರಿಕ್ಷಾ ಸೌಲಭ್ಯವನ್ನು ಒದಗಿಸಿತ್ತು.
- **ಗೆಲುವಿನ ವಿಶ್ವಾಸ:** ಅಸ್ಸಾಂನ ಮೊದಲ ಎರಡು ಹಂತಗಳಲ್ಲಿ ಮತದಾನ ನಡೆದ ಕ್ಷೇತ್ರಗಳಿಂದಲೇ ಕಾಂಗ್ರೆಸ್ ಬಹುಮತ ಪಡೆಯಲಿದೆ. ತಮ್ಮ ಪಕ್ಷದ ಸಕಾರಾತ್ಮಕ ಪ್ರಚಾರಕ್ಕೆ ಜನರು ಸ್ಪಂದಿಸಿದ್ದಾರೆ ಎಂದು ಕಾಂಗ್ರೆಸ್‌ನ ವಕ್ತಾರ ಗೌರವ್ ವಲ್ಲಭ್ ಹೇಳಿದ್ದಾರೆ. 126 ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ 47 ಮತ್ತು ಎರಡನೇ ಹಂತದಲ್ಲಿ 39 ಕ್ಷೇತ್ರಗಳಿಗೆ ಮತದಾನ ನಡೆದಿದೆ.

ನುಡಿ-ಕಿಡಿ

ನಂದಿಗ್ರಾಮದಲ್ಲಿ ಮಾತ್ರವಲ್ಲ ರಾಜ್ಯದಲ್ಲಿ ಕೂಡ ಟಿಎಂಸಿ ಸೋಲಲಿದೆ ಎಂಬುದು ಮಮತಾ ಬ್ಯಾನರ್ಜಿ ಅವರಿಗೆ ಅರಿವಾಗಿದೆ. ಹಾಗಾಗಿಯೇ, ಅವರ ವಿರುದ್ಧ ಹೋರಾಡುತ್ತಿರುವ ಕಾಂಗ್ರೆಸ್ ಜತೆಗೂ ಒಗ್ಗಟ್ಟಿಗಾಗಿ ಪತ್ರ ಬರೆದು ಕೋರಿದ್ದಾರೆ. ವಿರೋಧ ಪಕ್ಷಗಳ ನಾಯಕರಿಗೆ ಬರೆದ ಪತ್ರವು ಮಮತಾ ಅವರ ಹತಾಶೆಯ ಸಂಕೇತ

ಪ್ರಕಾಶ್ ಜಾವಡೇಕರ್, ಕೇಂದ್ರ ಸಚಿವ

ದೀದಿ, ನೀವು ಬೇರೊಂದು ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸುತ್ತೀರಿ ಎಂಬ ಸುದ್ದಿ ಇದೆ. ಇದು ನಿಜವೇ? ನಂದಿಗ್ರಾಮದಲ್ಲಿ ಜನರು ಉತ್ತರ ನೀಡಿದ್ದಾರೆ. ಬೇರೆ ಕಡೆ ಹೋಗಿ, ಅಲ್ಲಿಯೂ ತಕ್ಕ ಉತ್ತರ ನೀಡುತ್ತಾರೆ

ನರೇಂದ್ರ ಮೋದಿ, ಪ್ರಧಾನಿ

ಬಿಜೆಪಿ ಗೂಂಡಾಗಳು ಎಲ್ಲಾ ಮತಗಟ್ಟೆಗಳ ಹೊರಗೆ ಇದ್ದಾರೆ. ನಮ್ಮ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಮತಗಟ್ಟೆಗೆ ಹೋಗುವುದನ್ನು ತಡೆಯುತ್ತಿದ್ದಾರೆ. ಕೇಂದ್ರೀಯ ಪಡೆಗಳೂ ಇದರಲ್ಲಿ ಬಿಜೆಪಿಗೆ ನೆರವು ನೀಡುತ್ತಿವೆ. ಈ ಪಡೆಗಳು ಅಮಿತ್ ಶಾ ಅವರ ನಿರ್ದೇಶನದಂತೆ ಕೆಲಸ ಮಾಡುತ್ತಿವೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಮಮತಾ ಅವರ ಆರೋಪಕ್ಕೆ ಯಾವುದೇ ಆಧಾರಗಳು ಇಲ್ಲ. ಬಹುಶಃ ಅವರು ತಮ್ಮ ಸೋಲನ್ನು ಒಪ್ಪಿಕೊಳ್ಳುತ್ತಿದ್ದಾರೆ ಅನಿಸುತ್ತಿದೆ

ದಿಲೀಪ್ ಘೋಷ್, ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ

ಭಾರತದ ಹತ್ತಿ, ಸಕ್ಕರೆ ಆಮದು ಪ್ರಸ್ತಾವ: ಪಾಕ್ ತಿರಸ್ಕಾರ

ಇಸ್ಲಾಮಾಬಾದ್ (ಪಿಟಿಐ): ಹತ್ತಿ ಮತ್ತು ಸಕ್ಕರೆಯನ್ನು ಭಾರತದಿಂದ ಆಮದು ಮಾಡಿಕೊಳ್ಳುವ ಕುರಿತು ಆರ್ಥಿಕ ಸಮನ್ವಯ ಸಮಿತಿಯು ಮಾಡಿದ್ದ ಶಿಫಾರಸನ್ನು ಪಾಕಿಸ್ತಾನದ ಸಚಿವ ಸಂಪುಟ ತಿರಸ್ಕರಿಸಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕುರಿತು ಈ ಮೊದಲಿನ ಸ್ಥಿತಿ ಮರುಸ್ಥಾಪನೆವರೆಗೂ ಯಾವುದೇ ವಹಿವಾಟು ಬೇಡ ಎಂದು ಸಚಿವ ಸಂಪುಟದ ಇಬ್ಬರು ಸಚಿವರು ಈ ಪ್ರಸ್ತಾವಕ್ಕೆ ಪ್ರತಿರೋಧ ವ್ಯಕ್ತಪಡಿಸಿದರು.

ಹಣಕಾಸು ಸಚಿವ ಹಮ್ಮದ್ ಅಜರ್ ನೇತೃತ್ವ ಉನ್ನತಾಧಿಕಾರ ಸಮಿತಿಯು ಭಾರತದಿಂದ ಸಕ್ಕರೆ ಮತ್ತು ಹತ್ತಿ ಆಮದಿಗೆ ನಿರ್ಧರಿಸಿದ್ದು, ಎರಡು ವರ್ಷಗಳ ಹಿಂದೆ ಈ ಸಂಬಂಧ ವಿಧಿಸಲಾಗಿದ್ದ ನಿರ್ಬಂಧ ಸಡಿಲಿಸಿತ್ತು.

ಟಿಎಂಸಿ–ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ: ಪ್ರತ್ಯೇಕ ಘಟನೆಗಳಲ್ಲಿ ಇಬ್ಬರ ಸಾವು, ಹಲವರಿಗೆ ಗಾಯ

2ನೇ ಹಂತದ ಮತದಾನದಲ್ಲಿ ಮಾರಾಮಾರಿ

ನಂದಿಗ್ರಾಮ (ಎಎಫ್‌ಪಿ/ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಅಂಗವಾಗಿ, ಗುರುವಾರ ನಡೆದ ಎರಡನೇ ಹಂತದ ಮತದಾನದ ವೇಳೆ ರಾಜ್ಯದ ಹಲವೆಡೆ ಘರ್ಷಣೆ ನಡೆದಿದೆ. ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಹಲವೆಡೆ ಮಾರಾಮಾರಿ ನಡೆದಿದೆ. ಘರ್ಷಣೆ ವೇಳೆ ಟಿಎಂಸಿಯ ಒಬ್ಬ ಕಾರ್ಯಕರ್ತನನ್ನು ಹತ್ಯೆ ಮಾಡಲಾಗಿದೆ. ಬಿಜೆಪಿಯ ಒಬ್ಬ ಕಾರ್ಯಕರ್ತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬೆಳಿಗ್ಗೆ 11ರ ನಂತರ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಬೋಯಾಲ್ ಪ್ರದೇಶದಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆಯಿತು. ಇದೇ ವೇಳೆ ಮತದಾನ ಎದುರಿಸುತ್ತಿರುವ ರಾಜ್ಯದ ಬೇರೆ ಕ್ಷೇತ್ರಗಳಲ್ಲೂ ಘರ್ಷಣೆ ನಡೆದಿದೆ ಎಂದು ಚುನಾವಣಾ ಆಯೋಗವು ಹೇಳಿದೆ. ನಕಲಿ ಮತದಾರರನ್ನು ಕರೆತಂದು ಮತದಾನ ಮಾಡಿಸಲಾಗುತ್ತಿದೆ ಎಂದು ಎರಡೂ ಪಕ್ಷಗಳು ಆರೋಪಿಸಿವೆ.

ಕೇಶ್ಪುರ ಕ್ಷೇತ್ರದಲ್ಲಿ ಬುಧವಾರ ತಡರಾತ್ರಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆದಿದೆ. ಆ ಘರ್ಷಣೆಯಲ್ಲಿ ಟಿಎಂಸಿಯ ಕಾರ್ಯಕರ್ತನೊಬ್ಬ ಮೃತಪಟ್ಟಿದ್ದಾನೆ. ಈ ಸಂಬಂಧ ಬಿಜೆಪಿಯ ಮೂವರು ಕಾರ್ಯಕರ್ತರನ್ನು ಬಂಧಿಸಲಾಗಿದೆ. ಇದೇ ಕಾರಣದಿಂದ ಗುರುವಾರ ಬೆಳಿಗ್ಗೆಯೂ ಘರ್ಷಣೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಬೋಯಾಲ್‌ನ ಮತಗಟ್ಟೆಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಮತಾ ಮಾತನಾಡಿದರು ಪಿಟಿಐ ಚಿತ್ರ

ಅಂಕಿ-ಅಂಶಗಳು

80.40%
ಎರಡನೇ ಹಂತದ ಚುನಾವಣೆಯಲ್ಲಿ ಮತದಾನದ ಪ್ರಮಾಣ

ನಂದಿಗ್ರಾಮ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಟಿಎಂಸಿ ಗೂಂಡಾಗಳು ಬೆದರಿಕೆ ಹಾಕಿದ್ದರು. ಹೀಗಾಗಿಯೇ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಮೃತನ ಕುಟುಂಬದವರು ದೂರು ನೀಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮಮತಾ ಘೇರಾವ್ ಆಗಿಲ್ಲ': ಬೋಯಾಲ್ ಮತಗಟ್ಟೆಯಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಘೇರಾವ್ ಮಾಡಲಾಗಿತ್ತು ಎಂಬುದು ಸುಳ್ಳು. ಅಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ, 930ರಷ್ಟು ಮತದಾರರು ಮಾತ್ರ ಇರುವ ಮತಗಟ್ಟೆ ಬಳಿ 3,000ಕ್ಕೂ ಹೆಚ್ಚು ಜನರು ಇದ್ದರು ಎಂಬುದನ್ನು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭೆಯ ಎರಡನೇ ಹಂತದ ಮತದಾನವು ಶಾಂತಿಯುತವಾಗಿಯೇ ನಡೆದಿದೆ ಎಂದು ಆಯೋಗವು ಹೇಳಿದೆ.

ರಾಜ್ಯಪಾಲರಿಗೆ ದೂರು

ಬಿಜೆಪಿಯು ಹೊರಾಜ್ಯಗಳಿಂದ ಗೂಂಡಾಗಳನ್ನು ಪಶ್ಚಿಮ ಬಂಗಾಳಕ್ಕೆ ಕರೆತಂದಿದೆ. ಮತದಾನ ಮಾಡಲು ಇವರು ಅಡ್ಡಿ ಮಾಡುತ್ತಿದ್ದಾರೆ. ಮತಗಟ್ಟೆಗೆ ತಲುಪಲು ತಡೆ ಒಡ್ಡುತ್ತಿದ್ದಾರೆ. ಈ ಬಗ್ಗೆ ಆಯೋಗಕ್ಕೆ ದೂರು ನೀಡಿದ್ದರೂ, ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರ ವಿರುದ್ಧ ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಎಚ್ಚರಿಕೆ ನೀಡಿದ್ದಾರೆ.

'ನಾವು ಈವರೆಗೆ 63 ದೂರುಗಳನ್ನು ನೀಡಿದ್ದೇವೆ. ಆದರೆ ಆಯೋಗವು ಒಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ಚುನಾವಣಾ ಆಯೋಗವು ಅಮಿತ್ ಶಾ ನಿರ್ದೇಶನದಂತೆ ಕೆಲಸ ಮಾಡುತ್ತಿದೆ' ಎಂದು ಮಮತಾ ಆರೋಪಿಸಿದ್ದಾರೆ. ಈ ಸಂಬಂಧ ರಾಜ್ಯಪಾಲ ಜಗದೀಪ್ ಧನಕರ್ ಅವರಿಗೂ ಕರೆ ಮಾಡಿ, ಮಮತಾ ದೂರು ನೀಡಿದ್ದಾರೆ.

ಬಿಜೆಪಿ ಕಾರ್ಯಕರ್ತರು ಮತದಾನಕ್ಕೆ ಅಡ್ಡಿ ಮಾಡುತ್ತಿದ್ದಾರೆ ಎಂದು ಟಿಎಂಸಿ ಕಾರ್ಯಕರ್ತರು ದೂರಿದ ಬಳಿಕ ಮಮತಾ ಅವರು ಬೋಯಾಲ್ ಪ್ರದೇಶದ ಮತಗಟ್ಟೆ ಸಂಖ್ಯೆ 7ಕ್ಕೆ ಭೇಟಿ ನೀಡಿದರು. ಆಗ ಬಿಜೆಪಿ ಕಾರ್ಯಕರ್ತರು 'ಜೈ ಶ್ರೀರಾಂ' ಎಂದು ಘೋಷಣೆ ಕೂಗಿದರು. ಬಿಜೆಪಿ ಮತ್ತು ಟಿಎಂಸಿಯ ಹೆಚ್ಚು ಹೆಚ್ಚು ಕಾರ್ಯಕರ್ತರು ಅಲ್ಲಿ ಜಮಾಯಿಸಿ ಪರಿಸ್ಥಿತಿ ನಿಯಂತ್ರಣ ಮೀರಿತು.

ಎರಡೂ ಗುಂಪುಗಳ ನಡುವೆ ಕಲ್ಲು ತೂರಾಟ ನಡೆಯಿತು. ಈ ಸಂದರ್ಭದಲ್ಲಿ ಮಮತಾ ಅವರನ್ನು ಭದ್ರತಾ ಸಿಬ್ಬಂದಿಯು ಮತಗಟ್ಟೆಯ ಒಳಗೆ ಕರೆದೊಯ್ದು ಕೂರಿಸಿದರು. ಮಮತಾ ಅವರು ಸುಮಾರು ಎರಡು ತಾಸು ಮತಗಟ್ಟೆಯ ಒಳಗೇ ಇರಬೇಕಾಯಿತು.

ನಂದಿಗ್ರಾಮದ ಬ್ಲಾಕ್ 1 ಪ್ರದೇಶದಲ್ಲಿ ಟಿಎಂಸಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. 'ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರು ಇಲ್ಲಿಗೆ ಭೇಟಿ ನೀಡಿದ್ದರು. ಅವರ ಜತೆಯಲ್ಲಿದ್ದ ಸಿಆರ್‌ಪಿಎಫ್ ಸಿಬ್ಬಂದಿ, ನಮ್ಮನ್ನು ತಡೆದರು. ಮತಗಟ್ಟೆಗೆ ಹೋಗಲು ಬಿಡಲಿಲ್ಲ' ಎಂದು ಟಿಎಂಸಿ ಕಾರ್ಯಕರ್ತರು ಆರೋಪಿಸಿದ್ದಾರೆ.

ಸುವೇಂದು ವಾಹನದ ಮೇಲೆ ದಾಳಿ

ನಂದಿಗ್ರಾಮದ ತಾಕಾಪುರ ಮತ್ತು ಸತೇನ್ಗಾಬರಿ ಪ್ರದೇಶದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರ ವಾಹನದ ಮೇಲೆ ಕಲ್ಲುತೂರಾಟ ನಡೆದಿದೆ. ಕ್ಷೇತ್ರದ ಹಲವು ಮತಗಟ್ಟೆಗಳಿಗೆ ಸುವೇಂದು ಭೇಟಿ ನೀಡಿದ್ದರು. ಆಗ ಈ ದಾಳಿಗಳು ನಡೆದಿವೆ. ಆದರೆ, ಎರಡೂ ಘಟನೆಯಲ್ಲಿ ಅವರಿಗೆ ಗಾಯಗಳಾಗಿಲ್ಲ. ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ.

'ಟಿಎಂಸಿ ಗೂಂಡಾಗಳು ಈ ರೀತಿಯ ದಾಳಿ ನಡೆಸುವುದು ನನಗೇನೂ ಹೊಸದಲ್ಲ. ಅವರು ಮಮತಾ ಬೇಗಂ ಅವರ ಮಾತುಗಳನ್ನು ಅನುಸರಿಸುತ್ತಿದ್ದಾರೆ. ಮೇ 2ರಂದು ಚುನಾವಣಾ ಫಲಿತಾಂಶ ಬರುವವರೆಗೆ ಅವರು ಏನು ಬೇಕಾದರೂ ಮಾಡಲಿ' ಎಂದು ಸುವೇಂದು ಅಧಿಕಾರಿ ಹೇಳಿದ್ದಾರೆ.

ಕೇಶ್ಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತನ್ಮಯ್ ಘೋಷ್ ಅವರ ವಾಹನದ ಮೇಲೂ ದಾಳಿ ನಡೆದಿದೆ. ದಾಳಿಯಲ್ಲಿ ಅವರ ಕಾರು ಸಂಪೂರ್ಣ ಜಖಂ ಆಗಿದೆ. ಈ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ನಿರ್ಣಾಯಕ ಬರಾಕ್ ಕಣವೆಯಲ್ಲಿ ಚುನಾವಣೆ

ಅಸ್ಸಾಂ: 2ನೇ ಹಂತ ಶಾಂತಿಯುತ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂ ವಿಧಾನಸಭೆಗೆ ಗುರುವಾರ ನಡೆದ ಎರಡನೇ ಹಂತದ ಮತದಾನ ಶಾಂತಿಯುತವಾಗಿ ಮುಕ್ತಾಯವಾಯಿತು. ಸಂಜೆ ಆರು ಗಂಟೆಯವರೆಗಿನ ಮಾಹಿತಿ ಪ್ರಕಾರ, ಶೇ 74.79ರಷ್ಟು ಮತದಾರರು ಮತ ಚಲಾಯಿಸಿದ್ದಾರೆ. 126ರ ಪೈಕಿ 39 ಕ್ಷೇತ್ರಗಳಲ್ಲಿ ಮತದಾನ ನಡೆಯಿತು.

ಬಂಗಾಳಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಬರಾಕ್ ಕಣಿವೆ, ಅಸ್ಸಾಂನ ಕೇಂದ್ರ ಭಾಗ ಹಾಗೂ ರಾಜ್ಯದ ಪಶ್ಚಿಮ ಭಾಗದ ವಿಧಾನಸಭಾ ಕ್ಷೇತ್ರಗಳ ಜನರು ಮತ ಚಲಾಯಿಸಿದರು. 346 ಅಭ್ಯರ್ಥಿಗಳು ಈ ಪ್ರದೇಶದಲ್ಲಿ ಕಣದಲ್ಲಿದ್ದಾರೆ.

ಮತ ಚಲಾಯಿಸಿ ಮಾತನಾಡಿದ ಸಿಲ್ಚಾರ್‌ನ ಬಿಜೆಪಿ ಸಂಸದ ರಾಜ್‌ದೀಪ್ ರಾಯ್, 'ಬರಾಕ್ ಕಣಿವೆಯ ವಿಧಾನಸಭಾ ಕ್ಷೇತ್ರಗಳಲ್ಲಿ 14ರ ಪೈಕಿ 12ರಲ್ಲಿ ಗೆಲ್ಲಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಸ್ಸಾಂನ ಸಿಲ್‌ದುಬಿ ಎಂಬಲ್ಲಿ ಬುಡಕಟ್ಟು ಮಹಿಳೆಯರು ಮತದಾನ ಮಾಡಿದರು– ಪಿಟಿಐ ಚಿತ್ರ

ಕಛಾರ್, ಕರೀಮ್‌ಗಂಜ್ ಮತ್ತು ಹೈಲಕಂಡಿ ಜಿಲ್ಲೆಗಳನ್ನು ಒಳಗೊಂಡ ಬರಾಕ್ ಕಣಿವೆಯಲ್ಲಿ 15 ಕ್ಷೇತ್ರಗಳಿವೆ. 2016ರಲ್ಲಿ ಬಿಜೆಪಿಯು ಬಂಗಾಳಿ ಹಿಂದೂಗಳ ಪ್ರಾಬಲ್ಯವಿರುವ ಎಂಟು ಕ್ಷೇತ್ರಗಳನ್ನು ಗೆದ್ದಿದ್ದರೆ, ಬದ್ರುದ್ದೀನ್ ಅಜ್ಮಲ್ ನೇತೃತ್ವದ ಎಐಯುಡಿಎಫ್ ನಾಲ್ಕು ಮತ್ತು ಕಾಂಗ್ರೆಸ್ ಮೂರು ಸ್ಥಾನಗಳನ್ನು ಪಡೆದುಕೊಂಡಿದ್ದವು.

ಚುನಾವಣೆ ಹೊಸ್ತಿಲಲ್ಲಿ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳು ಸಿನಿಮಾದ ಅನಭಿಷಿಕ್ತ ದೊರೆ ರಜನಿಕಾಂತ್ ಅವರಿಗೆ ದೇಶದ ಅತ್ಯುನ್ನತ ಸಿನಿಮಾ ಗೌರವ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಿದ ಸಮಯದ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಂಡಿವೆ.

ತಮಿಳುನಾಡು ವಿಧಾನಸಭೆ ಚುನಾವಣಾ ಗೆಲುವಿಗಾಗಿ ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟ ಮತ್ತು ಡಿಎಂಕೆ ಮೈತ್ರಿಕೂಟದ ನಡುವೆ ತೀವ್ರ ಹಣಾಹಣಿ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಶಸ್ತಿ ಘೋಷಿಸಲಾಗಿದೆ. ಅಲ್ಲಿ ಮತದಾನಕ್ಕೆ ಇನ್ನೇನು ಐದು ದಿನಗಳಷ್ಟೇ ಇರುವಾಗ ತಮಿಳುನಾಡಿನ ಅತ್ಯಂತ ಜನಪ್ರಿಯ ವ್ಯಕ್ತಿಗೆ ಪ್ರಶಸ್ತಿ ನೀಡುವುದಾಗಿ ಪ್ರಕಟಿಸಲಾಗಿದೆ.

ರಜನಿಕಾಂತ್ ಅವರು ರಾಜಕೀಯದಿಂದ ದೂರವೇ ಇರುವ ವ್ಯಕ್ತಿ ಅಲ್ಲ. ಸಕ್ರಿಯ ರಾಜಕಾರಣಕ್ಕೆ ಬರುವುದಾಗಿ ಕೆಲವು ವರ್ಷಗಳಲ್ಲಿ ಹಲವು ಬಾರಿ ಅವರು ಘೋಷಿಸಿದ್ದರು. ತಮ್ಮದೇ ಪಕ್ಷ ಕಟ್ಟುವ ಲೆಕ್ಕಾಚಾರವನ್ನೂ ಹೊಂದಿದ್ದರು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಅನಾರೋಗ್ಯಕ್ಕೆ ಒಳಗಾದ ಬಳಿಕ ರಾಜಕೀಯದಿಂದ ಹಿಂದೆ ಸರಿಯುವುದಾಗಿ ಅವರು ಘೋಷಿಸಿದ್ದರು.

ರಾಜಕೀಯ ಪ್ರವೇಶದ ಬಗ್ಗೆ ದ್ವಂದ್ವದಲ್ಲಿ ಇದ್ದಾಗಲೂ ರಜನಿ ಅವರು ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಳ್ಳಬಹುದು ಎಂಬ ವದಂತಿಗಳು ಹರಿದಾಡಿದ್ದವು. ರಜನಿ ಅವರು ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟವನ್ನು ಬೆಂಬಲಿಸುವಂತೆ ಮಾಡಲು ಬಿಜೆಪಿ ಭಾರಿ ಪ್ರಯತ್ನವನ್ನೂ ನಡೆಸಿತ್ತು.

ಚುನಾವಣೆ ಸಂದರ್ಭದಲ್ಲಿ ಈ ಪ್ರಶಸ್ತಿ ಘೋಷಣೆ ಸರಿಯಾದ ಕ್ರಮವೇ ಎಂಬ ಪ್ರಶ್ನೆಗೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಅವರು ಮಾಧ್ಯಮಗೋಷ್ಠಿಯಲ್ಲಿ ಸಿಡಿಮಿಡಿಗೊಂಡರು. 'ಇದು ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶಸ್ತಿ. ರಜನಿಕಾಂತ್ ಅವರು 50 ವರ್ಷಗಳಿಂದ ಸಿನಿಮಾ ರಂಗದಲ್ಲಿ ಇರುವವರು... ಪ್ರಶ್ನೆ ಕೇಳುವವರು ಸರಿಯಾದ ಪ್ರಶ್ನೆ ಕೇಳಬೇಕು' ಎಂದಿದ್ದಾರೆ.

ರಜನಿಕಾಂತ್ ಅವರ ಅಳಿಯ ಧನುಷ್ ಅವರಿಗೆ 'ಅಸುರನ್' ಸಿನಿಮಾದ ನಟನೆಗಾಗಿ ಅತ್ಯುತ್ತಮ ನಟ ರಾಷ್ಟ್ರ ಪ್ರಶಸ್ತಿಯನ್ನು ಇತ್ತೀಚೆಗೆ ಘೋಷಿಸಲಾಗಿದೆ.

ಪ್ರಶಸ್ತಿ ಘೋಷಣೆ ಈಗೇಕೆ: ಕಾಂಗ್ರೆಸ್ ಪ್ರಶ್ನೆ

ರಜನಿಕಾಂತ್‌ಗೆ ಫಾಲ್ಕೆ ಪ್ರಶಸ್ತಿ ಘೋಷಣೆಯ ಸಂದರ್ಭವನ್ನು ಕಾಂಗ್ರೆಸ್ ಪ್ರಶ್ನಿಸಿದೆ. ಪ್ರಸಿದ್ಧ ವ್ಯಕ್ತಿಗಳನ್ನು ಅನಗತ್ಯ ರಾಜಕೀಯ ವಿವಾದಕ್ಕೆ ಎಳೆದು ತರುವ ಕೆಲಸವನ್ನು ಸರ್ಕಾರ ಮಾಡಬಾರದು ಎಂದು ಕಾಂಗ್ರೆಸ್ ವಕ್ತಾರ ರಾಜೀವ್ ಶುಕ್ಲಾ ಹೇಳಿದ್ದಾರೆ.

ರಜನಿಕಾಂತ್ ಅವರಿಗೆ ಬಹಳ ಹಿಂದೆಯೇ ಈ ಪ್ರಶಸ್ತಿ ಸಲ್ಲಬೇಕಿತ್ತು. ಈ ವರ್ಷ ಏಕೆ ಪ್ರಶಸ್ತಿ ಘೋಷಿಸಲಾಗಿದೆ ಎಂದು ಶುಕ್ಲಾ ಪ್ರಶ್ನಿಸಿದ್ದಾರೆ.

'ಜನಪ್ರಿಯ ತಾರೆಯನ್ನು ಅನಗತ್ಯ ರಾಜಕೀಯ ವಿವಾದಕ್ಕೆ ಎಳೆದು ತರುವ ಕೆಲಸವನ್ನು ಸರ್ಕಾರ ಮಾಡಬಾರದು. ರಜನಿಕಾಂತ್ ಅವರು ಗೌರವಾನ್ವಿತ ಸಿನಿಮಾ ತಾರೆ. ಬಿಜೆಪಿ ಮತ್ತು ಸರ್ಕಾರ ಇದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಪ್ರತಿಯೊಂದು ವಿಚಾರದಲ್ಲಿಯೂ ರಾಜಕೀಯ ಲಾಭ ಪಡೆಯಲು ಯತ್ನಿಸಬಾರದು' ಎಂದು ಶುಕ್ಲಾ ಅವರು ಹೇಳಿದ್ದಾರೆ.

ಸಾವಿಗೆ ಮುನ್ನ ಭಿನ್ನ ಹೇಳಿಕೆ ನೀಡಿದ್ದರೆ ವಸ್ತುಸ್ಥಿತಿ ಆಧರಿಸಿ ಪರಿಶೀಲನೆ ಅಗತ್ಯ– ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಾವಿಗೆ ಮುನ್ನ ನೊಂದವರು ಭಿನ್ನ ಹೇಳಿಕೆಯನ್ನು ನೀಡಿದ್ದಲ್ಲಿ ಸಂದರ್ಭಾನುಸಾರ ಅವುಗಳನ್ನು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕು. ಒಂದು ಹೇಳಿಕೆ ಆಧಾರದಲ್ಲಿ ಇನ್ನೊಂದನ್ನು ತಿರಸ್ಕರಿಸಲಾಗದು' ಎಂದು ಸುಪ್ರೀಂಕೋರ್ಟ್ ಪೀಠ ಹೇಳಿದೆ.

ಹೆಚ್ಚಿನ ವರದಕ್ಷಿಣೆ ತರಲಿಲ್ಲ ಎಂದು ಬೆಂಕಿ ಹಚ್ಚಿ ಪತ್ನಿ ಸಾವಿಗೆ ಕಾರಣರಾಗಿದ್ದ ಪತಿ ನಾಗಭೂಷಣ್ ಪ್ರಕರಣದಲ್ಲಿ ಪೀಠವು, ಮೃತರು ಸಾವಿಗೆ ಮುನ್ನ ಎರಡನೇ ಬಾರಿಗೆ ನೀಡಿದ್ದ ಹೇಳಿಕೆ ಆಧರಿಸಿ ಪತಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಎತ್ತಿಹಿಡಿಯಿತು.

ಐಪಿಸಿ ಸೆಕ್ಷನ್ 302ರ ಅನ್ವಯ ಕರ್ನಾಟಕ ಹೈಕೋರ್ಟ್ ಶಿಕ್ಷೆಯನ್ನು ವಿಧಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಿದ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎಂ.ಆರ್.ಶಾ ಅವರಿದ್ದ ಪೀಠ ನಡೆಸಿತು.

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಅರ್ಜಿದಾರರ ಪರ ವಕೀಲರು, 'ಮಹಿಳೆಯು ಸಾವಿಗೆ ಮುನ್ನ ಮೊದಲು ನೀಡಿದ್ದ ಹೇಳಿಕೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿತ್ತು ಎಂದು ತಿಳಿಸಿದ್ದಾರೆ' ಎಂದು ಪ್ರತಿಪಾದಿಸಿದ್ದರು.

'ಮಹಿಳೆಯು ಎರಡನೇ ಬಾರಿಗೆ ಹೇಳಿಕೆ ನೀಡಿದ್ದ ಸಂದರ್ಭದಲ್ಲಿ, ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿತು ಎಂದು ನಾನು ಹೇಳಲು ನನ್ನ ಮಕ್ಕಳನ್ನು ಕೊಂದುಬಿಡುವುದಾಗಿ ಪತಿ ಹೆದರಿಸಿದ್ದು ಕಾರಣ. ನನ್ನ ತಂದೆ–ತಾಯಿ ಬಂದ ಮೇಲೆ ನನ್ನ ಸತ್ಯ ಹೇಳುವ ಧೈರ್ಯ ಬಂದಿತು ಎಂದು ಹೇಳಿದ್ದಾರೆ' ಎಂಬ ಅಂಶವನ್ನು ಪೀಠವು ಉಲ್ಲೇಖಿಸಿತು.

ಈ ಹಿಂದಿನ ತೀರ್ಪುಗಳನ್ನು ಉಲ್ಲೇಖಿಸಿ, ಭಿನ್ನ ಹೇಳಿಕೆಗಳು ಇದ್ದ ಸಂದರ್ಭದಲ್ಲಿ ಅವುಗಳನ್ನು ಸಂದರ್ಭಾನುಸಾರ ಪ್ರತ್ಯೇಕವಾಗಿಯೇ ಪರಿಶೀಲಿಸಬೇಕು. ವಸ್ತುಸ್ಥಿತಿಯನ್ನು ಯಾವ ಹೇಳಿಕೆ ಬಿಂಬಿಸಲಿದೆ ಎಂಬುದನ್ನು ಕೋರ್ಟ್ ಮನದಟ್ಟು ಮಾಡಿಕೊಳ್ಳಬೇಕು ಎಂದು ಪೀಠವು ಅಭಿಪ್ರಾಯಪಟ್ಟಿತು.

ಪಿಎನ್‌ಬಿ ವಂಚನೆ ಪ್ರಕರಣ: ವಾರಂಟ್ ಜಾರಿ ಸ್ಥಗಿತ

ಮುಂಬೈ (ಪಿಟಿಐ): ವಜ್ರದ ವ್ಯಾಪಾರಿ ನೀರವ್ ಮೋದಿ ಅವರ ತಂಗಿ ಮತ್ತು ಬಾವಮೈದುನ ವಿರುದ್ಧ ಹೊರಡಿಸಿದ್ದ ವಾರಂಟ್ ಜಾರಿಯನ್ನು ಮುಂದಿನ ಆದೇಶವರೆಗೆ ಸ್ಥಗಿತಗೊಳಿಸಿ ಪಿಎಂಎಲ್‌ಎ ವಿಶೇಷ ನ್ಯಾಯಾಲಯ ಗುರುವಾರ ಆದೇಶಿಸಿತು.

ನೀರವ್ ಮೋದಿ ಮತ್ತು ಸಂಬಂಧಿ ಮೆಹುಲ್ ಚೋಕ್ಸಿ ಮುಖ್ಯ ಆರೋಪಿಗಳಾಗಿರುವ ಪಿಎನ್‌ಬಿಯ 2ಬಿಲಿಯನ್ ಡಾಲರ್‌ನ ವಂಚನೆ ಪ್ರಕರಣದಲ್ಲಿ ಸಾಕ್ಷಿದಾರರಾಗಲು ಮೋದಿ ತಂಗಿ ಪೂರ್ವಿ ಮತ್ತು ಅವರ ಪತಿ ಮಿಯಾಂಕ್ ಮೆಹ್ತಾ ಒಪ್ಪಿದ್ದರು.

ಈ ತೀರ್ಮಾನದ ಹಿನ್ನೆಲೆಯಲ್ಲಿ ನಮ್ಮ ವಿರುದ್ಧ ಹೊರಡಿಸಿದ್ದ ಜಾಮೀನುರಹಿತ ವಾರಂಟ್ ಅನ್ನು ರದ್ದುಪಡಿಸಬೇಕು ಎಂದು ಕೋರಿ ದಂಪತಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ರಾಜಾ ಹೇಳಿಕೆಯ ಸುತ್ತ ಪ್ರಚಾರ

ಡಿಎಂಕೆಗೆ ಮಹಿಳೆಯರ ಮೇಲೆ ಗೌರವವಿಲ್ಲ: ಅಮಿತ್ ಶಾ

ತಿರುಕೋಯಿಲೂರು (ತಮಿಳುನಾಡು) (ಪಿಟಿಐ): ಡಿಎಂಕೆಗೆ ಮಹಿಳೆಯರ ಬಗ್ಗೆ ಗೌರವವೇ ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರ ಆರೋಪಿಸಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರ ತಾಯಿಯ ಬಗ್ಗೆ ಡಿಎಂಕೆ ಮುಖಂಡ ಎ. ರಾಜಾ ಅವರು ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆ ಎಂಬುದನ್ನು ಉಲ್ಲೇಖಿಸಿ ಶಾ ಹೀಗೆ ಹೇಳಿದ್ದಾರೆ.

'ತಮಿಳುನಾಡಿನ ತಾಯಂದಿರು ಮತ್ತು ಸಹೋದರಿಯರು ಏಪ್ರಿಲ್ 6ರ ಮತದಾನದಲ್ಲಿ ಡಿಎಂಕೆಗೆ ಪಾಠ ಕಲಿಸಬೇಕು' ಎಂದು ಅವರು ಚುನಾವಣಾ ರ್‍ಯಾಲಿಯಲ್ಲಿ ಕರೆ ಕೊಟ್ಟಿದ್ದಾರೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕು ಎಂದು ಡಿಎಂಕೆ ಪ್ರಯತ್ನಿಸುತ್ತಿದೆ ಎಂದೂ ಅವರು ಹೇಳಿದ್ದಾರೆ.

ಅಮಿತ್ ಶಾ

'ಡಿಎಂಕೆ ಮುಖಂಡ ಎ. ರಾಜಾ ಅವರ ಹೇಳಿಕೆಯನ್ನು ಗಮನಿಸಿದ್ದೇನೆ. ಮೃತಪಟ್ಟ ಮಹಿಳೆಯರ ಬಗ್ಗೆ ಇಂತಹ ಹೇಳಿಕೆಯನ್ನು ಅವರು ನೀಡಿದ್ದಾರೆ. ಮಹಿಳೆಯರ ಬಗ್ಗೆ ಅವರಿಗೆ ಸ್ವಲ್ಪವೂ ಗೌರವ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ' ಎಂದು ಶಾ ಟೀಕಿಸಿದ್ದಾರೆ.

ಜಯಲಲಿತಾ ಅವರ ವಿರುದ್ಧವೂ ಡಿಎಂಕೆ ಹಿಂದೆ ಇಂತಹ ಹೇಳಿಕೆಗಳನ್ನು ನೀಡಿದೆ ಎಂದೂ ಶಾ ನೆನಪಿಸಿದರು. ತಮಿಳುನಾಡಿನ ಚುನಾವಣೆಯು ಅಭಿವೃದ್ಧಿ ಪಥದಲ್ಲಿ ಸಾಗುವ ಎನ್‌ಡಿಎ ಮತ್ತು ಭ್ರಷ್ಟಾಚಾರ ಹಾಗೂ ವಂಶಾಡಳಿತದ ಯುಪಿಎ ನಡುವಣ ಸಮರ ಎಂದು ಅವರು ಬಣ್ಣಿಸಿದರು. ಡಿಎಂಕೆ ಮತ್ತು ಕಾಂಗ್ರೆಸ್ ಪಕ್ಷಗಳೆರಡಕ್ಕೂ ತಮಿಳುನಾಡಿನ ಬಗ್ಗೆ ಕಳಕಳಿ ಇಲ್ಲ ಎಂದು ಅವರು ಆರೋಪಿಸಿದ್ದಾರೆ.

ಬಿಜೆಪಿಯ ಸ್ಥಾಪನಾ ದಿನವಾದ ಏಪ್ರಿಲ್ 6ರಂದೇ ತಮಿಳುನಾಡಿನಲ್ಲಿ ಚುನಾವಣಾ ಆಯೋಗವು ಮತದಾನ ನಿಗದಿ ಮಾಡಿದೆ. ಹಾಗಾಗಿಯೇ ಎನ್‌ಡಿಎ ಈ ಚುನಾವಣೆಯಲ್ಲಿ ಗೆಲ್ಲಲಿದೆ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶಿವಸೇನಾ ಮುಖ್ಯ ವಕ್ತಾರರಾಗಿ ಅರವಿಂದ ಸಾವಂತ್ ನೇಮಕ



ಮುಂಬೈ (ಪಿಟಿಐ): ಶಿವಸೇನಾ ಪಕ್ಷವು ತನ್ನ ಲೋಕಸಭಾ ಸದಸ್ಯ ಅರವಿಂದ ಸಾವಂತ್ ಅವರನ್ನು ಪಕ್ಷದ ಮುಖ್ಯ ವಕ್ತಾರರನ್ನಾಗಿ ನೇಮಿಸಿದೆ. ಇದುವರೆಗೆ ಸಂಜಯ್ ರಾವುತ್ ಅವರು ಮಾತ್ರ ಮುಖ್ಯ ವಕ್ತಾರರಾಗಿದ್ದರು.

ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸಂಪುಟದಲ್ಲಿ ಶಿವಸೇನಾ ಪಕ್ಷದ ಏಕೈಕ ಸಚಿವರಾಗಿ ಸಾವಂತ್ 2019ರವರೆಗೂ ಕಾರ್ಯ ನಿರ್ವಹಿಸಿದ್ದರು.

ಎ. ರಾಜಾಗೆ ಪ್ರಚಾರ ನಿಷೇಧ

ನವದೆಹಲಿ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಡಿಎಂಕೆ ಮುಖಂಡ ಎ.ರಾಜಾ ಅವರಿಗೆ ಚುನಾವಣೆಯಲ್ಲಿ ಪ್ರಚಾರ ಮಾಡುವುದಕ್ಕೆ ಗುರುವಾರದಿಂದ 48 ಗಂಟೆ ನಿಷೇಧ ಹೇರಲಾಗಿದೆ.

ಮಾದರಿ ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದಕ್ಕಾಗಿ ಚುನಾವಣಾ ಆಯೋಗವು ಈ ಕ್ರಮ ತೆಗೆದುಕೊಂಡಿದೆ. ಡಿಎಂಕೆಯ ತಾರಾ ಪ್ರಚಾರಕರ ಪಟ್ಟಿಯಿಂದ ರಾಜಾ ಅವರ ಹೆಸರನ್ನು ತೆಗೆದುಹಾಕಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಪ್ರಚಾರ ನಿರ್ಬಂಧ ವಿಧಿಸಿದೆ.

ಮುಂದಿನ ದಿನಗಳಲ್ಲಿ ಅಸಭ್ಯ, ಅವಹೇಳನಕಾರಿ, ಅಶ್ಲೀಲ ಟೀಕೆಗಳನ್ನು ಮಾಡಬಾರದು ಎಂದು ಆಯೋಗ ಎಚ್ಚರಿಕೆ ನೀಡಿದೆ.

ಎ. ರಾಜಾ

ಮಂಗಳವಾರ (ಏಪ್ರಿಲ್ 6) ತಮಿಳುನಾಡಿನಲ್ಲಿ ವಿಧಾನಸಭೆಗೆ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

ಭಾನುವಾರ (ಏಪ್ರಿಲ್ 4) ಸಂಜೆ ಪ್ರಚಾರ ಅಂತ್ಯಗೊಳ್ಳಲಿದೆ. ಹಾಗಾಗಿ ರಾಜಾ ಅವರಿಗೆ ಶನಿವಾರ ಮಧ್ಯಾಹ್ನ ನಂತರ ಮತ್ತು ಭಾನುವಾರ ಸಂಜೆಯವರೆಗೆ ಮಾತ್ರ ಪ್ರಚಾರಕ್ಕೆ ಅವಕಾಶ ದೊರೆಯಲಿದೆ.

ಯುಡಿಎಫ್ ಅಭ್ಯರ್ಥಿಗಳಿಂದ ಇಬ್ಬರಿಗೂ ದುಂಬಾಲು

ರಾಹುಲ್, ಪ್ರಿಯಾಂಕಾ ಮೋಡಿ

• ಅರ್ಜುನ್ ರಘುನಾಥ್

ತಿರುವನಂತಪುರ: ಕೇರಳ ವಿಧಾನ ಸಭೆಗೆ ಏಪ್ರಿಲ್ 6ರಂದು ನಡೆಯಲಿರುವ ಮತದಾನದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬರುವ ಸಾಧ್ಯತೆ ಕ್ಷೀಣ ಎಂದು ಎಲ್ಲ ಸಮೀಕ್ಷೆಗಳೂ ಹೇಳಿವೆ. ಹಾಗಿದ್ದರೂ ಮುಖಂಡರಾದ ರಾಹುಲ್ ಗಾಂಧಿ ಮತ್ತು ಪ್ರಿಯಂಕಾ ಗಾಂಧಿ ಅವರ ಜನಪ್ರಿಯತೆಯನ್ನು ಬಳಸಿಕೊಂಡು ಪರಿಸ್ಥಿತಿಯನ್ನು ಬದಲಾಯಿಸಲು ಕಾಂಗ್ರೆಸ್ ಶ್ರಮಿಸುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಉನ್ನತ ನಾಯಕರನ್ನು ಬಿಜೆಪಿ ಕೂಡ ಪ್ರಚಾರಕ್ಕೆ ಕರೆ ತರುತ್ತಿದೆ. ಆದರೆ, ಬಿಜೆಪಿಯ ರಾಷ್ಟ್ರಮಟ್ಟದ ನಾಯಕರಿಗಿಂತ ರಾಹುಲ್, ಪ್ರಿಯಾಂಕಾ ರ್‍ಯಾಲಿಗಳಿಗೆ ಹೆಚ್ಚು ಜನರು ಬರುತ್ತಿದ್ದಾರೆ ಎಂಬುದು ಇಲ್ಲಿ ಸಾಮಾನ್ಯವಾಗಿ ಇರುವ ಭಾವನೆ. ನೆಹರೂ ಕುಟುಂಬದ ಬಗ್ಗೆ ಇಲ್ಲಿನ ಜನರಿಗೆ ಇರುವ ಅಭಿಮಾನ ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ರಾಹುಲ್ ಅಥವಾ ಪ್ರಿಯಾಂಕಾ ಅವರಲ್ಲಿ ಒಬ್ಬರು ತಮ್ಮ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡಬೇಕು ಎಂಬುದು ಯುಡಿಎಫ್‌ನ ಎಲ್ಲ ಅಭ್ಯರ್ಥಿಗಳ ಬಯಕೆಯಾಗಿದೆ. ಬಿಜೆಪಿಯ ಏಕೈಕ ಶಾಸಕ ಇರುವ ತಿರುವನಂತಪುರದ ನೇಮಮ್ ಕ್ಷೇತ್ರದ ಪ್ರಚಾರವನ್ನು ಪ್ರಿಯಾಂಕಾ ಅವರು ಸಮಯದ ಅಭಾವದ ಕಾರಣಕ್ಕೆ ರದ್ದು ಮಾಡಿದ್ದರು. ಆದರೆ, ಕಾಂಗ್ರೆಸ್ ಅಭ್ಯರ್ಥಿ ಕೆ. ಮುರಳೀಧರನ್ ಅವರ ಒತ್ತಾಯದಿಂದಾಗಿ ಪ್ರಿಯಾಂಕಾ ಅವರು ಏಪ್ರಿಲ್ 3ರಂದು ಈ ಕ್ಷೇತ್ರಕ್ಕೆ ಭೇಟಿ ನೀಡಲು ಒಪ್ಪಿದ್ದಾರೆ ಎನ್ನಲಾಗಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಅವರು ಉತ್ತರ ಕೇರಳದ ವಯನಾಡ್ ಕ್ಷೇತ್ರದಿಂದ ಸ್ಪರ್ಧಿಸಿದ್ದರಿಂದಾಗಿ ಮತ್ತು ಕಾಂಗ್ರೆಸ್ ಗೆದ್ದರೆ ಅವರು ಪ್ರಧಾನಿಯಾಗಲಿದ್ದಾರೆ ಎಂಬ ಕಾರಣದಿಂದಾಗಿ ಕೇರಳದಲ್ಲಿ ರಾಹುಲ್ ಅಲೆ ಇತ್ತು. ಅಂತಹ ಅಲೆ ಈಗ ಕಾಣಿಸುತ್ತಿಲ್ಲ. ಹಾಗಿದ್ದರೂ ರಾಹುಲ್, ಪ್ರಿಯಾಂಕಾ ಭೇಟಿಯು ಮತದಾರರ ಮೇಲೆ ಪ್ರಭಾವ ಬೀರುತ್ತಿದೆ ಎಂಬುದು ನಿಜ.

ಪಾಲಕ್ಕಾಡ್‌ನಲ್ಲಿ ರಾಹುಲ್

'ಚುನಾವಣಾ ಪ್ರಚಾರದ ಆರಂಭದಲ್ಲಿ ಕಾಂಗ್ರೆಸ್ ಸಭೆಗಳಿಗೆ ಜನರು ಹೆಚ್ಚಾಗಿ ಬರುತ್ತಿರಲಿಲ್ಲ. ಆದರೆ, ರಾಹುಲ್ ಅವರ ರೋಡ್‌ಶೋ ಆರಂಭವಾದ ಬಳಿಕ ಪರಿಸ್ಥಿತಿ ಬದಲಾಗಿದೆ. ಯಾವುದೇ ರಾಜಕೀಯ ಪಕ್ಷದ ಜತೆಗೆ ಗುರುತಿಸಿಕೊಂಡಿಲ್ಲದ ವೃದ್ಧರು ಮತ್ತು ಮಕ್ಕಳು ಕೂಡ ರಾಹುಲ್ ಅವರನ್ನು ನೋಡಲು ಹೊರ ಬರುತ್ತಿದ್ದಾರೆ. ಇದು ಕಾಂಗ್ರೆಸ್ ಮುಖಂಡರ ಹುರುಪು ಹೆಚ್ಚಿಸಿದೆ' ಎಂದು ಪತ್ತನಂತಿಟ್ಟ ಜಿಲ್ಲೆಯ ಅನ್ವಾದ್ ಹೇಳುತ್ತಾರೆ.

ಮಕ್ಕಳು ಮತ್ತು ವೃದ್ಧರು ರಾಹುಲ್ ಅವರಿಗೆ ಪ್ರೀತಿ ತೋರುತ್ತಿರುವ ವಿಡಿಯೊಗಳನ್ನು ಕಾಂಗ್ರೆಸ್ ಪಕ್ಷವು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದೆ.

'ವಯನಾಡ್ ಪ್ರದೇಶದಲ್ಲಿಯೂ ರಾಹುಲ್ ಪರ ಅಲೆಯೇನೂ ಈಗ ಕಾಣಿಸುತ್ತಿಲ್ಲ. ಆದರೆ, ರಾಹುಲ್ ಅವರು ಪ್ರಚಾರಕ್ಕೆ ಬಂದ ಬಳಿಕ ಇಲ್ಲಿನ ಚಿತ್ರಣ ಬದಲಾಗಬಹುದು. ವಯನಾಡ್ ಮತ್ತು ಮಲಪ್ಪುರಂ ಜಿಲ್ಲೆಯ ಕೆಲವು ಕ್ಷೇತ್ರಗಳಲ್ಲಿ ರಾಹುಲ್ ಪ್ರಚಾರವು ಯುಡಿಎಫ್ ಅಭ್ಯರ್ಥಿಗಳಿಗೆ ನೆರವಾಗಬಹುದು' ಎಂದು ವಯನಾಡ್‌ನ ಪರಿಸರವಾದಿ ಎನ್. ಬಾದುಷಾ ಹೇಳುತ್ತಾರೆ.

ರಾಷ್ಟ್ರ ಮಟ್ಟದ ನಾಯಕರು ಮತದಾರರ ಮೇಲೆ ನೇರ ಪರಿಣಾಮ ಬೀರಬೇಕು ಎಂದೇನೂ ಇಲ್ಲ. ತಾರಾ ಪ್ರಚಾರಕರು ಬರುವುದರಿಂದ ಕಾರ್ಯಕರ್ತರ ಉತ್ಸಾಹ ಹೆಚ್ಚುತ್ತದೆ. ಅವರು ಹೆಚ್ಚು ಸಕ್ರಿಯವಾಗುತ್ತದೆ. ಇದು ಆ ಪಕ್ಷದ ಗೆಲುವಿನ ಸಾಧ್ಯತೆ ಹೆಚ್ಚಿಸುತ್ತದೆ ಎಂದು ರಾಜಕೀಯ ವಿಶ್ಲೇಷಕ ಸಿ.ಎ. ಜೋಸ್‌ಕುಟ್ಟಿ ಹೇಳುತ್ತಾರೆ.

ಕೇರಳದಲ್ಲಿ ಬಿಜೆಪಿ ಪ್ರಮುಖ ರಾಜಕೀಯ ಪಕ್ಷವಾಗಿ ಬೆಳೆದಿಲ್ಲ. ಹಾಗಾಗಿ, ಬಿಜೆಪಿ ನಾಯಕರಿಗಿಂತ ರಾಹುಲ್ ಮತ್ತು ಪ್ರಿಯಾಂಕಾ ಅವರ ಬಗ್ಗೆ ಜನರಿಗೆ ಹೆಚ್ಚು ಪ್ರೀತಿ ಇದೆ ಎಂಬುದು ಜೋಸ್‌ಕುಟ್ಟಿ ಅವರ ವಿಶ್ಲೇಷಣೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗೆ ತಂಡಗಳ ಅಭ್ಯಾಸ: ಕ್ವಾರಂಟೈನ್‌ನಿಂದ ಹೊರಬಂದ ಸೈನಿ

ಚೆನ್ನೈಗೆ ಬಂದಿಳಿದ ವಿರಾಟ್–ಎಬಿಡಿ

ಚೆನ್ನೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿ ಗುರುವಾರ ಚೆನ್ನೈಗೆ ಬಂದಿಳಿದರು. ಅವರು ಏಳು ದಿನಗಳ ಕ್ವಾರಂಟೈನ್‌ನಲ್ಲಿ ಇರಲಿದ್ದಾರೆ.

ಈ ವಿಷಯವನ್ನು ತಂಡದ ಟ್ವೀಟ್‌ನಲ್ಲಿ ಪ್ರಕಟಿಸಲಾಗಿದೆ. ಮಾಸ್ಕ್ ಧರಿಸಿರುವ ವಿರಾಟ್ ಚಿತ್ರವನ್ನೂ ಲಗತ್ತಿಸಲಾಗಿದೆ.

ಪುಣೆಯಲ್ಲಿ ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯು ಭಾನುವಾರ ಮುಗಿದಿತ್ತು. ಸೋಮವಾರ ಅವರು ತಮ್ಮ ಮನೆಗೆ ತೆರಳಿದ್ದರು. ಜನವರಿ ಕೊನೆಯ ವಾರದಿಂದ ಅವರು ಬಯೋಬಬಲ್ ವಾತಾವರಣದಲ್ಲಿದ್ದರು. ನಾಲ್ಕು ಟೆಸ್ಟ್, ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳಲ್ಲಿ ಆಡಿದ್ದರು. ಸುದೀರ್ಘ ಅವಧಿಯ ಬಯೋಬಬಲ್‌ನಿಂದ ಬಿಡುವು ಪಡೆದಿದ್ದರು. ಆದ್ದರಿಂದ ಅವರು ಚೆನ್ನೈನಲ್ಲಿ ತಂಡ ಸೇರುವ ಮುನ್ನ ಪ್ರತ್ಯೇಕವಾಸಕ್ಕೆ ತೆರಳಿದ್ದಾರೆ.

ಎಬಿಡಿ ಆಗಮನ: ದಕ್ಷಿಣ ಆಫ್ರಿಕಾದ ಕ್ರಿಕೆಟಿಗ ಎಬಿ ಡಿವಿಲಿಯರ್ಸ್ ಚೆನ್ನೈಗೆ ಬಂದು ತಂಡ ಸೇರಿಕೊಂಡಿದ್ದಾರೆ. 37 ವರ್ಷದ ಎಬಿಡಿ ಆರ್‌ಸಿಬಿ ತಂಡದ ಪ್ರಮುಖ ಬ್ಯಾಟ್ಸ್‌ಮನ್ ಆಗಿದ್ದಾರೆ. ಎಬಿಡಿ 2018ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ತಂಡದ ಮುಖ್ಯ ಕೋಚ್ ಸೈಮನ್ ಕ್ಯಾಟಿಚ್ ಮತ್ತು ಮಧ್ಯಮವೇಗಿ ನವದೀಪ್ ಸೈನಿ ಅವರು ಕ್ವಾರಂಟೈನ್‌ನಿಂದ ಹೊರಬಂದು ಅಭ್ಯಾಸ ನಡೆಸಿದರು.

ಯಾವುದೇ ಕ್ರಮಾಂಕದಲ್ಲೂ ಬ್ಯಾಟಿಂಗ್– ದುಬೆ: ಮುಂಬೈ (ಪಿಟಿಐ): ಯಾವುದೇ ಕ್ರಮಾಂಕದಲ್ಲಿ ಅವಕಾಶ ಕೊಟ್ಟರೂ ಬ್ಯಾಟಿಂಗ್ ಮಾಡಲು ಸಿದ್ಧ ಎಂದು ರಾಜಸ್ಥಾನ ರಾಯಲ್ಸ್ ತಂಡದ ಶಿವಂ ದುಬೆ ಹೇಳಿದ್ದಾರೆ. ‘ಬೇರೆ ಬೇರೆ ಕ್ರಮಾಂಕಗಳಲ್ಲಿ ಆಡಿರುವ ಅನುಭವ ನನಗಿದೆ. ಆಡುವ ಸಮಯದಲ್ಲಿ ತಂಡಕ್ಕೆ ಏನು ಅಗತ್ಯವಿದೆಯೆಂಬುದರ ಬಗ್ಗೆ ಯೋಚಿಸುತ್ತೇನೆ. ನನ್ನ ವೈಯಕ್ತಿಕ ಸಾಧನೆಯತ್ತ ಗಮನ ಇರುವುದಿಲ್ಲ’ ಎಂದು ಗುರುವಾರ ಸುದ್ದಿಗಾರರೊಂದಿಗೆ ಹೇಳಿದರು.

‘ತಂಡದ ಕ್ರಿಕೆಟ್ ನಿರ್ದೇಶಕ ಕುಮಾರ ಸಂಗಕ್ಕಾರ ಅವರು ತಮ್ಮ ವೃತ್ತಿಜೀವನದಲ್ಲಿ ಬಹಳಷ್ಟು ಕ್ರಿಕೆಟ್ ಆಡಿದ್ದಾರೆ. ಅವರ ಅನುಭವದ ಮಾರ್ಗದರ್ಶನವು ನನ್ನ ಆಟವನ್ನು ಸುಧಾರಿಸಲು ನೆರವಾಗುತ್ತಿದೆ’ ಎಂದು ದುಬೆ ಹೇಳಿದರು.

ಗುರುವಾರ ಚೆನ್ನೈಗೆ ಬಂದಿಳಿದ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಹೊಣೆ ನಿಭಾಯಿಸುವೆ: ಶಕೀಬ್

ಶಕೀಬ್ ಹಸನ್

ತಮಗೆ ಯಾವುದೇ ಹೊಣೆ ನೀಡಿದರೂ ಅಚ್ಚುಕಟ್ಟಾಗಿ ನಿಭಾಯಿಸುವ ವಿಶ್ವಾಸ ಇದೆ ಎಂದು ಈ ಬಾರಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡಲಿರುವ ಶಕೀಬ್ ಅಲ್ ಹಸನ್ ಹೇಳಿದರು. ಬಾಂಗ್ಲಾದೇಶ ತಂಡದ ಆಲ್‌ರೌಂಡರ್, ಐಸಿಸಿಯ ಭ್ರಷ್ಟಾಚಾರ ನಿಗ್ರಹ ನಿಯಮವನ್ನು ಉಲ್ಲಂಘಿಸಿದ್ದ ಶಕೀಬ್ ಒಂದು ವರ್ಷದ ನಿಷೇಧ ಶಿಕ್ಷೆ ಅನುಭವಿಸಿದ್ದರು. ಅದರ ನಂತರ ಈಗ ಅವರು ಕ್ರಿಕೆಟ್‌ಗೆ ಮರಳಿದ್ದಾರೆ. 2012 ಮತ್ತು 2014ರಲ್ಲಿ ಅವರು ಕೆಕೆಆರ್‌ನಲ್ಲಿ ಆಡಿದ್ದರು. 2019ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಆಡಿದ್ದರು. ಈ ಬಾರಿ ಕೆಕೆಆರ್ ತಂಡವು ಅವರನ್ನು ₹ 3.2 ಕೋಟಿಗೆ ಖರೀದಿಸಿದೆ.

ನಿತೀಶ್ ರಾಣಾ –ಎಎಫ್‌ಪಿ ಚಿತ್ರ

ಕೋವಿಡ್‌ನಿಂದ ರಾಣಾ ಗುಣಮುಖ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟ್ಸ್‌ಮನ್ ನಿತೀಶ್ ರಾಣಾ ಅವರು ಕೋವಿಡ್ ನಿಂದ ಗುಣಮುಖರಾಗಿದ್ದಾರೆ. ಆದ್ದರಿಂದ ತಂಡದೊಂದಿಗೆ ಅಭ್ಯಾಸ ಮಾಡಲು ಅವರಿಗೆ ಅನುಮತಿ ನೀಡಲಾಗಿದೆ.

27 ವರ್ಷದ ರಾಣಾಗೆ ಕೊರೊನಾ ಸೋಂಕು ಇರುವುದು ಮಾರ್ಚ್ 22ರಂದು ಪತ್ತೆಯಾಗಿತ್ತು. ಮುಂಬೈನಲ್ಲಿರುವ ತಂಡದ ಹೋಟೆಲ್‌ನಲ್ಲಿಯೇ ಅವರಿಗೆ ಪ್ರತ್ಯೇಕವಾಸದ ವ್ಯವಸ್ಥೆ ಮಾಡಲಾಗಿತ್ತು.

‘ರಾಣಾ ಅವರು ಎಂಟು ದಿನಗಳ ಹಿಂದೆ ಪರೀಕ್ಷೆಗೊಳಗಾಗಿದ್ದರು. ಆಗ ಅವರಿಗೆ ಕೊರೊನಾ ಪಾಸಿಟಿವ್ ಅಗಿರುವ ವರದಿ ಬಂದಿತ್ತು. ಅವರಲ್ಲಿ ಯಾವುದೇ ಸೋಂಕಿನ ಲಕ್ಷಣಗಳು ಇರಲಿಲ್ಲ. ಇದೀಗ ಮತ್ತೊಮ್ಮೆ ಪರೀಕ್ಷೆ ಮಾಡಿದಾಗ ಅವರು ಸಂಪೂರ್ಣ ಗುಣಮುಖರಾಗಿರುವುದು ಕಂಡುಬಂದಿದೆ. ಆದ್ದರಿಮದ ಉಳಿದ ಆಟಗಾರರೊಂದಿಗೆ ಅಭ್ಯಾಸ ನಡೆಸಲು ಅನುಮತಿ ನೀಡಲಾಗಿದೆ’ ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಐಪಿಎಲ್‌ನಲ್ಲಿ ರಾಣಾ 14 ಪಂದ್ಯಗಳಿಂದ 352 ರನ್ ಗಳಿಸಿದ್ದರು.

‘ಅಂಪೈರ್ಸ್ ಕಾಲ್’ಗೆ ಇಲ್ಲ ಕತ್ತರಿ: ಐಸಿಸಿ

ದುಬೈ (ಪಿಟಿಐ): ಎಲ್‌ಬಿಡಬ್ಲ್ಯುಗೆ ಸಂಬಂಧಿಸಿ ಅಂಪೈರ್‌ಗಳ ನಿರ್ಧಾರ ಮರುಪರಿಶೀಲನೆ ಮಾಡುವ ಸಂದರ್ಭದಲ್ಲಿ ‘ಅಂಪೈರ್ಸ್ ಕಾಲ್’ ಕೈಬಿಡದೇ ಇರಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ನಿರ್ಧರಿಸಿದೆ. ಆದರೆ ಸದ್ಯ ಅನಸರಿಸುತ್ತಿರುವ ಡಿಆರ್‌ಎಸ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಮುಂದಾಗಿದೆ.

ಅಂಪೈರ್ಸ್ ಕಾಲ್‌ನಲ್ಲಿ ಗೊಂದಲಗಳಿವೆ ಎಂದು ಇಂಗ್ಲೆಂಡ್ ಮತ್ತು ಭಾರತ ನಡುವಿನ ಕ್ರಿಕೆಟ್ ಸರಣಿ ಸಂದರ್ಭದಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದ್ದರು. ಅದರ ನಂತರ ಇದು ಚರ್ಚೆಗೆ ಗ್ರಾಸವಾಗಿತ್ತು. ಸದ್ಯದ ನಿಯಮದ ಪ್ರಕಾರ ಅಂಪೈರ್ ನೀಡಿದ ನಾಟೌಟ್ ತೀರ್ಪನ್ನು ಪ್ರಶ್ನಿಸಿ ಔಟ್ ಎಂದು ಮೂರನೇ ಅಂಪೈರ್‌ಗೆ ಮನವರಿಕೆಯಾಗಬೇಕಾದರೆ ಚೆಂಡಿನ ಅರ್ಧಕ್ಕಿಂತಲೂ ಹೆಚ್ಚಿನ ಭಾಗ ಸ್ಟಂಪ್‌ಗೆ ತಾಗುವಂತಿರಬೇಕು. ಆದರೆ ಚೆಂಡು ಸ್ಟಂಪಿಗೆ ಸ್ವಲ್ಪವೇ ಬಡಿಯುವಂತಿದ್ದರೂ ಔಟ್ ಕೊಡಬೇಕು ಎಂದು ವಿರಾಟ್ ಕೊಹ್ಲಿ ವಾದಿಸಿದ್ದರು.

ಗುರುವಾರ ನಡೆದ ಸಭೆಯಲ್ಲಿ ಡಿಆರ್‌ಎಸ್‌ಗೆ ಮೂರು ಸಣ್ಣ ಬದಲಾವಣೆಗಳನ್ನು ತರಲು ಐಸಿಸಿ ನಿರ್ಧರಿಸಿತು. ಎಲ್‌ಬಿಡಬ್ಲ್ಯುಗೆ ಸಂಬಂಧಿಸಿದ ತೀರ್ಪು ಮರುಪರಿಶೀಲನೆ ವೇಳೆ ಸ್ಟಂಪಿನ ಎತ್ತರವನ್ನು ಬೇಲ್ಸ್‌ನ ಮೇಲ್ಭಾಗದ ವರೆಗೂ ಪರಿಗಣಿಸಲು ನಿರ್ಧರಿಸಲಾಗಿದೆ.

ಎಲ್‌ಬಿಡಬ್ಲ್ಯುಗೆ ಸಂಬಂಧಿಸಿ ಅಂಪೈರ್‌ಗೆ ಮನವಿ ಸಲ್ಲಿಸುವುದಕ್ಕೂ ಮೊದಲು ಆಟಗಾರ ತಾನು ಹೊಡೆತಕ್ಕೆ ಮುಂದಾಗಿದ್ದನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಬ್ಯಾಟ್ಸ್‌ಮನ್‌ಗೇ ಅವಕಾಶ ನೀಡಲಾಗಿದೆ. ಶಾರ್ಟ್ ರನ್ ಕೂಡ ಮೂರನೇ ಅಂಪೈರ್ ಪರಿಶೀಲಿಸುವರು.

ಹಿಂದೆ ಸರಿದ ಜೋಶ್

ಜೋಶ್ ಹ್ಯಾಜಲ್‌ವುಡ್

ಮೆಲ್ಬರ್ನ್ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ, ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಈ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಈ ವರ್ಷ ಟಿ20 ವಿಶ್ವಕಪ್ ಟೂರ್ನಿ ಸೇರಿದಂತೆ ಹಲವು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಜೋಶ್ ಆಡಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸ್ವಲ್ಪ ಬಿಡುವು ಪಡೆದು ತವರಿನ ತಂಡಕ್ಕೆ ಆಡಲು ಮರಳುವ ಉದ್ದೇಶದಿಂದ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ಐಪಿಎಲ್‌ನಲ್ಲಿ ಭಾಗವಹಿಸುವ ಆಸ್ಟ್ರೇಲಿಯಾದ ಇನ್ನುಳಿದ ಆಟಗಾರರೊಂದಿಗೆ ಅವರು ಗುರುವಾರ ಭಾರತಕ್ಕೆ ಬರಬೇಕಿತ್ತು. ಹೋದ ವರ್ಷದ ಐಪಿಎಲ್‌ನಲ್ಲಿ ಅವರು ಮೂರು ಪಂದ್ಯಗಳನ್ನು ಆಡಿದ್ದರು.

ರೆಬೆಲ್ಸ್, ಗಜಾನನ ಜಯಭೇರಿ

ಬೆಂಗಳೂರು: ರೆಬೆಲ್ಸ್ ಎಫ್‌ಸಿ ಮತ್ತು ಶ್ರೀ ಗಜಾನನ ಎಫ್‌ಸಿ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ‘ಬಿ’ ಡಿವಿಷನ್ ಲೀಗ್‌ನಲ್ಲಿ ಗುರುವಾರ ಭರ್ಜರಿ ಜಯ ಸಾಧಿಸಿದವು.

ರೆಬೆಲ್ಸ್ 5–0ಯಿಂದ ಫ್ರೆಂಡ್ಸ್ ಯೂನಿಯನ್ ಎಫ್‌ಸಿಯನ್ನು ಮಣಿಸಿದರೆ ಶ್ರೀ ಗಜಾನನ 5–2ರಲ್ಲಿ ವೆಹಿಕಲ್ಸ್ ವಿರುದ್ಧ ಜಯಿಸಿತು.

ರೆಬೆಲ್ಸ್‌ಗಾಗಿ ಮೊಹಮ್ಮದ್ ರಮೀಫ್ 21 ಮತ್ತು 30ನೇ ನಿಮಿಷದಲ್ಲಿ ಗೋಲು ಗಳಿಸಿದರು. ಸಂದೇಶ್ ಕೇಸರ್ 31 ಮತ್ತು 35ನೇ ನಿಮಿಷದಲ್ಲಿ, ಪುಳಕ್ ಬರುವಾ 54ನೇ ನಿಮಿಷದಲ್ಲಿ (ಪೆನಾಲ್ಟಿ) ಚೆಂಡನ್ನು ಗುರಿ ಮುಟ್ಟಿಸಿದರು.

ಶ್ರೀ ಗಜಾನನಕ್ಕಾಗಿ ಸುರೀನ್ ಎಸ್ (27, 33ನೇ ನಿಮಿಷ), ಜಾಕಿ ಸುನಿಲ್ (43ನೇ ನಿ), ಭರತ್ ಎಂ (56ನೇ ನಿ), ಕಲೈವಣನ್ (59ನೇ ನಿ) ಗೋಲು ಗಳಿಸಿದರೆ ವೆಹಿಕಲ್ಸ್ ತಂಡಕ್ಕಾಗಿ ಕಾರ್ಲ್‌ಟನ್ ಜೋಯೆಲ್ (9ನೇ ನಿ) ಮತ್ತು ಕಾರ್ತಿಕ್ (70ನೇ ನಿ) ಗೋಲು ಗಳಿಸಿದರು.

ಗೋವನ್ಸ್ ಎಫ್‌ಸಿ 2–1 ಗೋಲುಗಳಿಂದ ತಿಲಕ್ ಮೆಮೋರಿಯಲ್ ಎಫ್‌ಸಿಯನ್ನು ಮಣಿಸಿತು. ಗೋವನ್ಸ್‌ಗಾಗಿ ಕಿರಣ್ ಕುಮಾರ್ (45ನೇ ನಿ), ಐಮನ್ ಕುಸುಗಲ್ (55ನೇ ನಿ), ತಿಲಕ್ ಎಫ್‌ಸಿಗಾಗಿ ಸಮಿಕಿರಣ್ (11ನೇ ನಿ) ಚೆಂಡನ್ನು ಗುರಿಮುಟ್ಟಿಸಿದರು.

ಶುಕ್ರವಾರ ಮಧ್ಯಾಹ್ನ 1.30ಕ್ಕೆ ಡಿವೈಇಎಸ್ ಎಫ್‌ಸಿ ತಂಡ ಸನ್‌ರೈಸ್ ಎಫ್‌ಸಿಯನ್ನು ಎದುರಿಸಲಿದ್ದು 3 ಗಂಟೆಗೆ ನಡೆಯಲಿರುವ ಹಣಾಹಣಿಯಲ್ಲಿ ಎಚ್‌ಎಎಲ್ ಎಫ್‌ಸಿ ಬೆಂಗಳೂರು ಮಾರ್ಸ್ ಎಫ್‌ಸಿ ಎದುರು ಸೆಣಸಲಿದೆ. 4.30ಕ್ಕೆ ಆರ್.ಎಸ್.ಸ್ಪೋರ್ಟ್ಸ್ ಎಫ್‌ಸಿ ಮತ್ತು ಎಂಡಿ ಸ್ಪೋರ್ಟಿಂಗ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಪ್ರಚುರ ಜೊತೆ ಡ್ರಾ ಸಾಧಿಸಿದ ಋತ್ವಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡಿಮೆ ರೇಟಿಂಗ್‌ನ ಋತ್ವಿಕ್ ಆರ್, ತಮಗಿಂತ ಹೆಚ್ಚು ರೇಟಿಂಗ್ ಹೊಂದಿರುವ ಪ್ರಚುರ ಪಿ.ಪಿ ಎದುರು ಡ್ರಾ ಸಾಧಿಸಿ ರಾಜ್ಯ ಚೆಸ್ ಚಾಂಪಿಯನ್‌ಷಿಪ್‌ನ ಮೂರನೇ ದಿನ ಗಮನ ಸೆಳೆದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 23 ಚೆಸ್ ಪಟುಗಳು ಅಗ್ರ ಸ್ಥಾನ ಹಂಚಿಕೊಂಡರು.

ಋತ್ವಿಕ್ 140 ರೇಟಿಂಗ್ ಪಾಯಿಂಟ್ ಹೊಂದಿದ್ದರೆ ಪ್ರಚುರ ಬಳಿ 212 ಪಾಯಿಂಟ್‌ಗಳಿವೆ. ಇವರಿಬ್ಬರೂ ಬೆಂಗಳೂರಿನವರು. ಪ್ರಮುಖ ಆಟಗಾರರೆಲ್ಲರೂ ತಮಗಿಂತ ಕಡಿಮೆ ರೇಟಿಂಗ್ ಪಾಯಿಂಟ್ ಹೊಂದಿರುವವರ ವಿರುದ್ಧ ಮೇಲುಗೈ ಸಾಧಿಸಿದರು.

ನಾರಾಯಣ ಅಯ್ಯಂಗಾರ್‌ಗೆ ಸಂಜಯ್ ಎನ್ ಆಘಾತ ನೀಡಿದರೆ, ಅದ್ವೈತ್ ರತ್ನಾಕರ್ ವಿಭೂತೆ ಎದುರು ಇಶಾ ಶರ್ಮಾ ಗೆದ್ದರು. ಓಜಸ್ ಕುಲಕರ್ಣಿ ವಿರುದ್ಧ ಕಾರ್ತಿಕ್ ಎಸ್ ಸೋಲನುಭವಿಸಿದರು.

ಮಿಥುಲಾ ಎದುರು ಬಾಲಕಿಶನ್ ಜಯ ಸಾಧಿಸಿದರು. ಪಾರ್ಥಸಾರಥಿ, ಮೇಧಾಂಶ್ ರಾಠಿ ಎದುರು ಗೆದ್ದರು. ಶಿಬಿನ್ ಕೆ ಬೆನ್ನಿ ಎದುರು ಶರಣ್ ರಾವ್ ಜಯಿಸಿದರು. ಅರ್ಹನ್ ಚೇತನ್ ಆನಂದ್‌ಗೆ ಮನಸ್ವಿ ಎದುರು ಜಯ; ವಿವೇಕ್ ನಂಬಿಯಾರ್‌ಗೆ ಶೆರಾನ್ ವಿಶ್ವಾಸ್ ವಿರುದ್ಧ ಜಯ; ರಕ್ಷಿತ್ ಶ್ರೀನಿವಾಸನ್‌ಗೆ ವಿನೀತ್ ವಿರುದ್ಧ ಜಯ.

ಸಂಜಯ್ (ಎಡ), ನಾರಾಯಣ

ಪಂತ್ ಭಾರತ ತಂಡದ ಭವಿಷ್ಯದ ನಾಯಕ: ಅಜರ್

ನವದೆಹಲಿ (ಪಿಟಿಐ): ವಿಕೆಟ್‌ಕೀಪರ್, ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರು ಭವಿಷ್ಯದಲ್ಲಿ ಭಾರತ ತಂಡದ ನಾಯಕತ್ವ ವಹಿಸುವ ಸಮರ್ಥ ಆಟಗಾರರನಾಗಿದ್ದಾರೆ ಎಂದು ಮಾಜಿ ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಹೇಳಿದ್ದಾರೆ.

ಮೊಹಮ್ಮದ್ ಅಜರುದ್ದೀನ್

ಈ ಬಾರಿಯಲ್ಲಿ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ರಿಷಭ್ ನಾಯಕರಾಗಿ ನೇಮಕವಾಗಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅಜರ್, ‘ಕಳೆದ ಕೆಲವು ತಿಂಗಳುಗಳಲ್ಲಿ ರಿಷಭ್ ಅಮೋಘ ಆಟವಾಡಿದ್ದಾರೆ. ಮುಂದೊಂದು ದಿನ ಭಾರತ ತಂಡದ ನಾಯಕನ ಸ್ಥಾನಕ್ಕೆ ಆಯ್ಕೆ ಸಮಿತಿಯು ರಿಷಭ್ ಅವರನ್ನು ಪರಿಗಣಿಸಿದರೆ ನನಗಂತೂ ಅಚ್ಚರಿಯಾಗುವುದಿಲ್ಲ’ ಅಭಿಪ್ರಾಯಪಟ್ಟಿದ್ದಾರೆ.

ಹೋದ ಡಿಸೆಂಬರ್–ಜನವರಿಯಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೆಸ್ಟ್ ಸರಣಿ, ಫೆಬ್ರುವರಿ –ಮಾರ್ಚ್‌ನಲ್ಲಿ ಭಾರತದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್, ಟಿ20 ಮತ್ತು ಏಕದಿನ ಸರಣಿಗಳಲ್ಲಿ ರಿಷಭ್ ಮಿಂಚಿದ್ದರು.

ಸಂಕ್ಷಿಪ್ತ ಸುದ್ದಿ

ವಿಪ್ರೊ ತೆಕ್ಕೆಗೆ ಆ್ಯಂಪಿಯಾನ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಮೂಲದ ಸೈಬರ್ ಭದ್ರತಾ ಸೇವಾ ಕಂಪನಿ ಆ್ಯಂಪಿಯಾನ್, ಬೆಂಗಳೂರಿನ ವಿಪ್ರೊ ಕಂಪನಿಯ ತೆಕ್ಕೆಗೆ ಜಾರಲಿದೆ. ಅಂದಾಜು ₹ 857 ಕೋಟಿ ಪಾವತಿಸಿ ಆ್ಯಂಪಿಯಾನ್ ಕಂಪನಿಯನ್ನು ಖರೀದಿಸುತ್ತಿರುವುದಾಗಿ ವಿಪ್ರೊ ತಿಳಿಸಿದೆ.

ಆ್ಯಂಪಿಯಾನ್ ಕಂಪನಿಯು ಮೆಲ್ಬರ್ನ್‌ನಲ್ಲಿ ಮುಖ್ಯ ಕಚೇರಿಯನ್ನು ಹೊಂದಿದ್ದು ಸಿಡ್ನಿ, ಬ್ರಿಸ್ಬೇನ್ ಮತ್ತು ಕ್ಯಾನ್‌ಬೆರಾದಲ್ಲಿ ಕಚೇರಿಗಳನ್ನು ಹೊಂದಿದೆ. ವಿಪ್ರೊ ಕಂಪನಿಯು ಲಂಡನ್ ಮೂಲದ ಕ್ಯಾಪ್ಕೊ ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಘೋಷಣೆಯನ್ನು ಮಾರ್ಚ್ ತಿಂಗಳಲ್ಲಿ ಮಾಡಿತ್ತು.

ವಿಮಾನ ಇಂಧನ ದರ ಶೇ 3ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಎರಡು ತಿಂಗಳಿನಲ್ಲಿ ಇದೇ ಮೊದಲ ಬಾರಿಗೆ ವಿಮಾನ ಇಂಧನ (ಎಟಿಎಫ್) ದರ ಇಳಿಕೆ ಮಾಡಲಾಗಿದೆ.

ಕಚ್ಚಾ ತೈಲ ದರದಲ್ಲಿ ಇಳಿಕೆ ಆಗಿರುವುದರಿಂದ ವಿಮಾನ ಇಂಧನ ದರವನ್ನು ಶೇಕಡ 3ರಷ್ಟು ತಗ್ಗಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಬೆಲೆ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೊ ಲೀಟರಿಗೆ ₹ 1,887ರಷ್ಟು ಇಳಿಕೆ ಆಗಿದ್ದು, ₹ 58,374.16ಕ್ಕೆ ತಲುಪಿದೆ.

ಫೆಬ್ರುವರಿ 1, 16 ಹಾಗೂ ಮಾರ್ಚ್ 1 ಮತ್ತು 16ರಂದು ಒಟ್ಟು ನಾಲ್ಕು ಬಾರಿ ದರ ಹೆಚ್ಚಿಸಲಾಗಿತ್ತು.

ಚಿನ್ನದ ಧಾರಣೆ ₹ 881 ಏರಿಕೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ ಹೆಚ್ಚಳ ಆದ ಕಾರಣದಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ 10 ಗ್ರಾಂ ಚಿನ್ನದ ಬೆಲೆಯಲ್ಲಿ ₹ 881ರಷ್ಟು ಏರಿಕೆ ಆಯಿತು.

10 ಗ್ರಾಂ ಚಿನ್ನವು ₹ 44,701ರಂತೆ ಮಾರಾಟವಾಯಿತು. ಕೆ.ಜಿ. ಬೆಳ್ಳಿಯ ಬೆಲೆಯಲ್ಲಿ ₹ 1,071ರಷ್ಟು ಏರಿಕೆ ಆಗಿದ್ದು, ₹ 63,256ರಂತೆ ಮಾರಾಟವಾಯಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,691
ಇಂದಿನ ಅಂತ್ಯ	14,867
▲	176
ದಿನದ ಗರಿಷ್ಠ	14,883

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1282 (1250)
ಸೂರ್ಯಕಾಂತಿ (ರಿಫೈನ್ಡ್)	₹1700 (1670)
ಪಾಮೋಲಿನ್	₹1213 (1195)

ಸಣ್ಣ ಉಳಿತಾಯ ಬಡ್ಡಿ ಕಡಿತ: ಆದೇಶ ಹಿಂಪಡೆದ ಸರ್ಕಾರ

ಒಂದನೇ ಪುಟದಿಂದ

ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಪರಿಷ್ಕೃತ ಬಡ್ಡಿ ದರಗಳು ಏಪ್ರಿಲ್ 1ರಿಂದ ಅನ್ವಯ ಆಗಲಿದ್ದು, ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ (2021ರ ಜೂನ್ 30ರವರೆಗೆ) ಜಾರಿಯಲ್ಲಿ ಇರಲಿವೆ ಎಂದು ಬುಧವಾರದ ಆದೇಶದಲ್ಲಿ ತಿಳಿಸಲಾಗಿತ್ತು.

ಚುನಾವಣಾ ಪ್ರಭಾವವೇ; ಕಾಂಗ್ರೆಸ್ ಪ್ರಶ್ನೆ: ಬಡ್ಡಿದರ ಕಡಿತದ ನಿರ್ಧಾರ ಹಿಂಪಡೆದ ನಂತರ ಸಚಿವೆ ನಿರ್ಮಲಾ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ. ‘ಕಣ್ತಪ್ಪಿನ ಕಾರಣಕ್ಕಾಗಿ ಯು–ಟರ್ನ್ ತೆಗೆದುಕೊಂಡಿರುವುದೋ ಅಥವಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡೋ’ ಎಂದು ಅದು ಪ್ರಶ್ನಿಸಿದೆ.

‘ಚುನಾವಣೆ ಮುಗಿದ ತಕ್ಷಣವೇ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರವನ್ನು ಮತ್ತೆ ಇಳಿಕೆ ಮಾಡಲಾಗುತ್ತದೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ‘ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಲೂಟಿ ಈಗಾಗಲೇ ನಡೆದಿದೆ. ಚುನಾವಣೆ ಮುಗಿದ ಬಳಿಕ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ಕಡಿತ ಆಗಲಿದ್ದು, ಮಧ್ಯಮ ವರ್ಗದ ಸಣ್ಣ ಉಳಿತಾಯವನ್ನೂ ಲೂಟಿ ಮಾಡಲಾಗುತ್ತದೆ’ ಎಂದು ಟೀಕಿಸಿದ್ದಾರೆ.

> **ನೀವು ಸರ್ಕಸ್ ನಡೆಸುತ್ತಿದ್ದೀರೋ ಅಥವಾ ಸರ್ಕಾರ ನಡೆಸುತ್ತಿದ್ದೀರೋ?**
> **ರಣದೀಪ್ ಸುರ್ಜೇವಾಲ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

‘ಹಣಕಾಸು ಸಚಿವೆಯಾಗಿ ಮುಂದುವರಿಯುವ ಯಾವ ನೈತಿಕ ಹಕ್ಕನ್ನೂ ನೀವು ಹೊಂದಿಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಅವರು ನಿರ್ಮಲಾ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

‘ಬಡ್ಡಿದರ ಕಡಿತಗೊಳಿಸುವ ಮೂಲಕ ಬಿಜೆಪಿ ಸರ್ಕಾರವು ಮಧ್ಯಮ ವರ್ಗದ ಮೇಲೆ ಮತ್ತೊಂದು ಹಲ್ಲೆ ನಡೆಸಲು ನಿರ್ಧರಿಸಿತ್ತು. ಸಿಕ್ಕಿಬಿದ್ದ ನಂತರ, ಕಣ್ತಪ್ಪಿನಿಂದ ಆಗಿರುವ ದೋಷ ಇದು ಎನ್ನುವ ನೆಪವನ್ನು ಹಣಕಾಸು ಸಚಿವೆ ಮುಂದಿಡುತ್ತಿದ್ದಾರೆ’ ಎಂದು ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ ಹೇಳಿದ್ದಾರೆ.

ಬಡ್ಡಿದರ ಕಡಿತವನ್ನು ರಾತ್ರಿ ಘೋಷಿಸಿ ಮರುದಿನ ಬೆಳಿಗ್ಗೆ ನಿರ್ಧಾರ ಹಿಂದಕ್ಕೆ ಪಡೆಯುವ ಮೂಲಕ ಸರ್ಕಾರವು ಏಪ್ರಿಲ್ 1ರಂದು ಸಾಮಾನ್ಯ ಜನರ ಜೊತೆ ಅತ್ಯಂತ ಕ್ರೂರವಾಗಿ ತಮಾಷೆ ಮಾಡುತ್ತಿದೆಯೇ? ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಬಡ್ಡಿದರಗಳ ವಿವರ

ಯೋಜನೆ	ಬಡ್ಡಿ ದರ (%)
1 ವರ್ಷದ ಅವಧಿ ಠೇವಣಿ	5.5
2 ವರ್ಷದ ಅವಧಿ ಠೇವಣಿ	5.5
3 ವರ್ಷದ ಅವಧಿ ಠೇವಣಿ	5.5
5 ವರ್ಷದ ಅವಧಿ ಠೇವಣಿ	6.7
5 ವರ್ಷದ ಆರ್.ಡಿ.	5.8
ಹಿರಿಯ ನಾಗರಿಕರ ಉಳಿತಾಯ ಯೋಜನೆ	7.4
ಮಾಸಿಕ ಆದಾಯ ಖಾತೆ	6.6
ರಾಷ್ಟ್ರೀಯ ಉಳಿತಾಯ ಪತ್ರ	6.8
ಪಿಪಿಎಫ್	7.1
ಕಿಸಾನ್ ವಿಕಾಸ ಪತ್ರ	6.9
ಸುಕನ್ಯಾ ಸಮೃದ್ಧಿ ಯೋಜನೆ	7.6

‘ಕರ್ಣಾಟಕ ಬ್ಯಾಂಕ್: ₹1.42 ಲಕ್ಷ ಕೋಟಿ ವಹಿವಾಟು ಗುರಿ’

ಮಹಾಬಲೇಶ್ವರ

ಮಂಗಳೂರು: ‘ಪ್ರಸಕ್ತ ಹಣಕಾಸಿನ ವರ್ಷದಲ್ಲಿ ಶೇಕಡ 12ರ ವೃದ್ಧಿ ದರದೊಂದಿಗೆ ಬ್ಯಾಂಕಿನ ಒಟ್ಟು ವ್ಯವಹಾರವನ್ನು ₹1.42 ಲಕ್ಷ ಕೋಟಿಗಳಿಗೆ ವಿಸ್ತರಿಸುವ ಆಶಯ ಹೊಂದಿದ್ದೇವೆ’ ಎಂದು ಕರ್ಣಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದರು.

ಆರ್ಥಿಕ ವರ್ಷದ ಪ್ರಥಮ ದಿನವಾದ ಗುರುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘2021-22ರ ವಿತ್ತೀಯ ವರ್ಷವು ಕರ್ಣಾಟಕ ಬ್ಯಾಂಕಿನ ಇತಿಹಾಸದಲ್ಲಿ ಅತ್ಯಂತ ಉತ್ಕೃಷ್ಟ ವರ್ಷವಾಗಿ ದಾಖಲಾಗಲು ಬ್ಯಾಂಕಿನ ಉದ್ಯೋಗಿಗಳು ಪರಿಶ್ರಮ ಹಾಗೂ ಶ್ರದ್ಧೆಯಿಂದ ಕಾರ್ಯನಿರ್ವಹಿಸಿ ಗ್ರಾಹಕರ ಮನಗೆಲ್ಲಬೇಕು’ ಎಂದರು.

‘ಕೋವಿಡ್ ನಂತರದ ಈ ದಿನಗಳಲ್ಲಿ ನಾವು ನಮ್ಮ ಮೂಲತತ್ವಗಳಿಗೆ ಬದ್ಧರಾಗಿ, ಉತ್ತಮ ಮುಂಗಡ ನೀಡುವುದರ ಮೂಲಕ ನಮ್ಮ ವ್ಯವಹಾರವನ್ನು ವಿಸ್ತರಿಸಬೇಕಿದೆ. ಕಳೆದ ವರ್ಷ ನಮ್ಮ ಉಳಿತಾಯ ಹಾಗೂ ಚಾಲ್ತಿ ಖಾತೆಗಳ ಠೇವಣಿಗಳು (ಕಾಸಾ) ಒಟ್ಟು ಠೇವಣಿಗಳ ಶೇ 31ರಷ್ಟಕ್ಕೆ ತಲುಪಿದ್ದು, ಸಾರ್ವಕಾಲಿಕ ದಾಖಲೆಯಾಗಿದೆ. ನಮ್ಮ ಡಿಜಿಟಲ್ ವಹಿವಾಟು ಶೇ 90ರಷ್ಟಕ್ಕೆ ತಲುಪಿದೆ’ ಎಂದು ತಿಳಿಸಿದರು.

6ನೇ ತಿಂಗಳಿನಲ್ಲಿಯೂ ₹ 1 ಲಕ್ಷ ಕೋಟಿ ದಾಟಿದ ತೆರಿಗೆ

ಮಾರ್ಚ್: ದಾಖಲೆಯ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಮೂಲಕ ಆಗಿರುವ ತೆರಿಗೆ ಸಂಗ್ರಹವು ಸತತ ಆರನೇ ತಿಂಗಳಿನಲ್ಲಿಯೂ ₹ 1 ಲಕ್ಷ ಕೋಟಿಯ ಗಡಿ ದಾಟಿದೆ.

ಮಾರ್ಚ್ ತಿಂಗಳಿನಲ್ಲಿ ಸಾರ್ವಕಾಲಿಕ ದಾಖಲೆಯ ₹ 1.23 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹವಾಗಿದೆ ಎಂದು ಹಣಕಾಸು ಸಚಿವಾಲಯ ಮಾಹಿತಿ ನೀಡಿದೆ.

2020ರ ಮಾರ್ಚ್‌ನಲ್ಲಿ ಜಿಎಸ್‌ಟಿ ಸಂಗ್ರಹದ ಮೊತ್ತ ₹ 97,590 ಕೋಟಿಗಳಷ್ಟಿತ್ತು. ಇದಕ್ಕೆ ಹೋಲಿಸಿದರೆ 2021ರ ಮಾರ್ಚ್‌ನಲ್ಲಿ ಶೇಕಡ 27ರಷ್ಟು ಹೆಚ್ಚು ತೆರಿಗೆ ಸಂಗ್ರಹವಾಗಿದೆ.

ದೇಶದ ಆರ್ಥಿಕತೆಯು ವೇಗವಾಗಿ ಚೇತರಿಕೆ ಕಾಣುತ್ತಿದೆ ಎನ್ನುವುದಕ್ಕೆ ಜಿಎಸ್‌ಟಿ ಸಂಗ್ರಹದಲ್ಲಿ ಆಗುತ್ತಿರುವ ಏರಿಕೆಯು ಸ್ಪಷ್ಟ ಸೂಚನೆ ಎಂದು ಸಚಿವಾಲಯ ಹೇಳಿದೆ.

2021ರ ಮಾರ್ಚ್‌ನಲ್ಲಿ ಸಂಗ್ರಹವಾಗಿರುವ ಒಟ್ಟಾರೆ ತೆರಿಗೆಯಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 22,973 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹ 29,329 ಕೋಟಿ ಹಾಗೂ ಸಮಗ್ರ ಜಿಎಸ್‌ಟಿ ಪಾಲು ₹ 62,842 ಕೋಟಿ. ಸೆಸ್ ಮೂಲಕ ₹ 8,757 ಕೋಟಿ ಸಂಗ್ರಹವಾಗಿದೆ.

ಜೂನ್ ಮತ್ತು ಸೆಪ್ಟೆಂಬರ್ ತ್ರೈಮಾಸಿಕಗಳಲ್ಲಿ ಜಿಎಸ್‌ಟಿ ಸಂಗ್ರಹವು ಕ್ರಮವಾಗಿ ಶೇ 41 ಮತ್ತು ಶೇ 8ರಷ್ಟು ಇಳಿಕೆ ಆಗಿತ್ತು. ಆರ್ಥಿಕತೆಯು ಚೇತರಿಕೆ ಕಾಣಲು ಆರಂಭಿಸಿದ ಬಳಿಕ ಡಿಸೆಂಬರ್ ಮತ್ತು ಮಾರ್ಚ್ ತ್ರೈಮಾಸಿಕಗಳಲ್ಲಿ ತೆರಿಗೆ ಸಂಗ್ರಹವು ಕ್ರಮವಾಗಿ ಶೇ 8 ಮತ್ತು ಶೇ 14ರಷ್ಟು ಏರಿಕೆ ಕಂಡಿದೆ.

ದೇಶದಾದ್ಯಂತ ಲಾಕ್‌ಡೌನ್ ಜಾರಿಗೊಳಿಸಿದ ಬಳಿಕ, 2020ರ ಏಪ್ರಿಲ್‌ನಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆಯ ಕನಿಷ್ಠ ಮಟ್ಟವಾದ ₹ 32,172 ಕೋಟಿಗೆ ಕುಸಿತ ಕಂಡಿತ್ತು.

ಜಿಎಸ್‌ಟಿ ಸಂಗ್ರಹ: 2020–21ರಲ್ಲಿ ಯಾವ ತಿಂಗಳಲ್ಲಿ ಎಷ್ಟು?



ಪ್ರಜಾವಾಣಿ ಗ್ರಾಫಿಕ್ಸ್

ಹೊಸ ಆರ್ಥಿಕ ವರ್ಷ: ಸೆನ್ಸೆಕ್ಸ್ ಸಂಭ್ರಮ

ಮುಂಬೈ (ಪಿಟಿಐ): ಹೊಸ ಆರ್ಥಿಕ ವರ್ಷವನ್ನು ದೇಶಿ ಷೇರು ಮಾರುಕಟ್ಟೆ ಸೂಚ್ಯಂಕಗಳು ಹುರುಪಿನಿಂದ ಸ್ವಾಗತಿಸಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 520 ಅಂಶ ಏರಿಕೆ ಕಂಡಿತು.

‘ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದ ಕಾರಣ ದೇಶಿ ಷೇರು ಮಾರುಕಟ್ಟೆಗಳು ಕೋವಿಡ್–19 ಪ್ರಕರಣಗಳ ಹೆಚ್ಚಳದ ಭೀತಿಯಿಂದ ಹೊರಬಂದವು. ಹಣಕಾಸು ಹಾಗೂ ಆಟೊಮೊಬೈಲ್ ವಲಯಗಳ ಷೇರುಗಳ ಖರೀದಿ ಜೋರಾಗಿತ್ತು’ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ವಿನೋದ್ ಮೋದಿ ಹೇಳಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಷೇರುಗಳು ಮೌಲ್ಯ ಹೆಚ್ಚಿಸಿಕೊಂಡವು. ಕೇಂದ್ರ ಸರ್ಕಾರವು ನಾಲ್ಕು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಒಟ್ಟು ₹ 14,500 ಕೋಟಿ ನೆರವು ನೀಡಲಿದೆ.

ಮಾರ್ಚ್‌ನಲ್ಲಿ ಕಾರು ಮಾರಾಟ ಜೋರು

ನವದೆಹಲಿ (ಪಿಟಿಐ): ದೇಶದ ಪ್ರಮುಖ ಆಟೊಮೊಬೈಲ್ ಕಂಪನಿಗಳಾದ ಮಾರುತಿ ಸುಜುಕಿ, ಹುಂಡೈ ಮತ್ತು ಟಾಟಾ ಮೋಟರ್ಸ್ ಮಾರ್ಚ್ ತಿಂಗಳಿನಲ್ಲಿ ಉತ್ತಮ ವಹಿವಾಟು ನಡೆದಿದೆ ಎಂದು ಹೇಳಿವೆ.

ಮಾರ್ಚ್‌ನಲ್ಲಿ ದೇಶಿ ಮಾರುಕಟ್ಟೆಯಲ್ಲಿ ಒಟ್ಟು 1.49 ಲಕ್ಷ ವಾಹನಗಳನ್ನು ಮಾರಾಟ ಮಾಡಿರುವುದಾಗಿ ಮಾರುತಿ ಸುಜುಕಿ ಹೇಳಿದೆ. ಹಿಂದಿನ ವರ್ಷದ ಮಾರ್ಚ್‌ನಲ್ಲಿ ಕಂಪನಿಯು 76 ಸಾವಿರ ವಾಹನಗಳನ್ನು ಮಾರಾಟ ಮಾಡಿತ್ತು.

2020ರ ಮಾರ್ಚ್‌ನಲ್ಲಿ 26 ಸಾವಿರ ವಾಹನಗಳನ್ನು ಮಾರಾಟ ಮಾಡಿದ್ದ ಹುಂಡೈ, ಈ ವರ್ಷದ ಮಾರ್ಚ್‌ನಲ್ಲಿ 52 ಸಾವಿರ ಕಾರು ಮಾರಾಟ ಮಾಡಿದೆ.

ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನಗಳ ಮಾರಾಟವು ಮಾರ್ಚ್‌ನಲ್ಲಿ 29 ಸಾವಿರಕ್ಕೆ ತಲುಪಿದೆ.

ಹಿಂದಿನ ವರ್ಷದ ಇದೇ ತಿಂಗಳಿನಲ್ಲಿ ಕಂಪನಿಯು ಒಟ್ಟು ಐದು ಸಾವಿರ ಪ್ರಯಾಣಿಕ ವಾಹನಗಳನ್ನು ಮಾತ್ರ ಮಾರಾಟ ಮಾಡಿತ್ತು.

ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನಗಳ ಮಾರಾಟವು 2020–21ರಲ್ಲಿ ಶೇಕಡ 69ರಷ್ಟು ಹೆಚ್ಚಳ ಆಗಿದೆ.

ಟಿಕೆಎಂ ಕಂಪನಿಯು ಮಾರ್ಚ್‌ನಲ್ಲಿ 15 ಸಾವಿರ ವಾಹನಗಳನ್ನು ಮಾರಾಟ ಮಾಡಿದೆ. ಇದು 2013ರ ನಂತರ ಕಂಪನಿಯು ಮಾರ್ಚ್ ತಿಂಗಳಲ್ಲಿ ದೇಶಿ ಮಾರುಕಟ್ಟೆಯಲ್ಲಿ ಮಾಡಿರುವ ಅತಿಹೆಚ್ಚಿನ ಸಂಖ್ಯೆಯ ವಾಹನ ಮಾರಾಟ.

ಐಟಿಆರ್ ಅರ್ಜಿ: ಅಧಿಸೂಚನೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು 2020–21ನೇ ಹಣಕಾಸು ವರ್ಷಕ್ಕೆ ಐಟಿ ವಿವರ ಸಲ್ಲಿಕೆಯ ಅರ್ಜಿಗೆ ಸಂಬಂಧಿಸಿದ ಅಧಿಸೂಚನೆ ಹೊರಡಿಸಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ ತಿಳಿಸಿದೆ.

2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಐಟಿಆರ್ ಅರ್ಜಿಯಲ್ಲಿ ಯಾವುದೇ ಮಹತ್ವದ ಬದಲಾವಣೆಗಳನ್ನು ಮಾಡಿಲ್ಲ ಎಂದೂ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಚಿತ್ರದುರ್ಗ	
ಅಪಿ	42219-42629
ಬೆಟ್ಟೆ	33419-33889
ಕೆಂಪುಗೋಟು	29400-29800
ರಾಶಿ	41739-42169
ಪುತ್ತೂರು	
ಕೋಕ	9500-24000
ಹೊಸತು	28500-41000
ಸಿದ್ದಾಪುರ	
ಬಿಳಿಗೋಟು	20799-30299
ಚಾಲಿ	34299-37339
ಕೋಕ	17609-30899
ಕೆಂಪುಗೋಟು	23191-29409
ರಾಶಿ	38089-42009
ತಟ್ಟಿಬೆಟ್ಟೆ	30099-39609
ಶಿರಸಿ	
ಬೆಟ್ಟೆ	29501-39098
ಬಿಳಿಗೋಟು	27199-31299
ಚಾಲಿ	34949-37528
ಚಾಲಿ	34949-37528
ರಾಶಿ	39218-41308
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42300-43400
ಗೊರಬಲು	27699-30099
ರಾಶಿ	41000-42150
ಸರಕು	44000-65199

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	9800
ಎಸಿ	3920
ಆರ್‌ಪಿ	5100
ಆರ್‌ಸಿ	2900

ರಫ್ತು ಶೇ 58 ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು 2020ರ ಮಾರ್ಚ್‌ಗೆ ಹೋಲಿಸಿದರೆ 2021ರ ಮಾರ್ಚ್‌ನಲ್ಲಿ ಶೇಕಡ 58.23ರಷ್ಟು ಏರಿಕೆ ಕಂಡಿದ್ದು, ₹ 2.48 ಲಕ್ಷ ಕೋಟಿಗಳಷ್ಟಾಗಿದೆ.

ಎಂಜಿನಿಯರಿಂಗ್, ಹರಳು ಮತ್ತು ಚಿನ್ನಾಭರಣ ಮತ್ತು ಔಷಧ ವಲಯ ದಾಖಲೆಯ ಪ್ರಗತಿ ಕಂಡಿರುವುದೇ ಈ ಪ್ರಮಾಣದ ಬೆಳವಣಿಗೆಗೆ ಕಾರಣ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

2020ರ ಮಾರ್ಚ್‌ನಲ್ಲಿ ರಫ್ತು ವಹಿವಾಟು ಮೊತ್ತವು ₹ 1.56 ಲಕ್ಷ ಕೋಟಿಗಳಷ್ಟಿತ್ತು. 2020–21ರ ಏಪ್ರಿಲ್–ಮಾರ್ಚ್ ಅವಧಿಯಲ್ಲಿನ ರಫ್ತು ವಹಿವಾಟು ಶೇ 7.4ರಷ್ಟು ಇಳಿಕೆ ಕಂಡಿದೆ.

ಆಮದು ವಹಿವಾಟು ಮಾರ್ಚ್‌ನಲ್ಲಿ ಶೇ 52.89ರಷ್ಟು ಹೆಚ್ಚಾಗಿ ₹ 3.51 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ಮುಂಬೈ ಧಾರಣೆ

ಶೇಂಗಾ

1-4-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1265 (1225)
ಪಾಮ್ ವಾರದ ಡೆಲಿವರಿ	1211 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1615)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,900 (44,050)
ಬೆಳ್ಳಿ ಕೆ.ಜಿ 63,950 (62,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವೇಟ್‌ಲಿಫ್ಟರ್ ಅಮಾನತು

ನವದೆಹಲಿ (ಪಿಟಿಐ): ಪಟಿಯಾಲದ ರಾಷ್ಟ್ರೀಯ ಕ್ರೀಡಾಸಂಸ್ಥೆಯಲ್ಲಿ ನಡೆಯುತ್ತಿರುವ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಮಹಿಳಾ ವೇಟ್‌ಲಿಫ್ಟರ್ ಒಬ್ಬರನ್ನು ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ.

ಕಾಮನ್ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ, ವಿವಿಧ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದ ಮತ್ತು ರಾಷ್ಟ್ರೀಯ ದಾಖಲೆ ಹೊಂದಿರುವ ಈ ವೇಟ್‌ಲಿಫ್ಟರ್ ಇದೇ ತಿಂಗಳ 16ರಿಂದ 25ರ ವರೆಗೆ ಉಜ್ಬೆಕಿಸ್ತಾನದ ತಾಷ್ಕೆಂಟ್‌ನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ತಂಡವನ್ನು ಆಯ್ಕೆ ಮಾಡುವ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಅಕ್ಟೋಬರ್‌ನಲ್ಲಿ ಈ ವೇಟ್‌ಲಿಫ್ಟರ್ ಬಿಡುವು ಪಡೆದು ತವರೂರಿಗೆ ತೆರಳಿದ್ದರು.

ವಾಪಸ್ ಬಂದ ನಂತರ ರಾಷ್ಟ್ರೀಯ ಉದ್ದೀಪನ ತಡೆ ಘಟಕದ (ನಾಡಾ) ಅಧಿಕಾರಿಗಳು ಅವರ ಮಾದರಿಯನ್ನು ಸಂಗ್ರಹಿಸಿದ್ದರು ಎಂದು ಎನ್‌ಐಎಸ್ ಮೂಲಗಳು ತಿಳಿಸಿವೆ.

ಕ್ರೀಡಾಪಟುವಿನ ಹೆಸರನ್ನು ಗುಪ್ತವಾಗಿ ಇರಿಸಲಾಗಿದ್ದು ಉದ್ದೀಪನ ಮದ್ದು ಸೇವಿಸಿದ್ದು 'ಬಿ' ಮಾದರಿ ಪರೀಕ್ಷೆಯಲ್ಲೂ ಖಾತರಿಯಾದರೆ ಕಠಿಣ ಕ್ರಮಕ್ಕೆ ಒಳಗಾಗಲಿದ್ದಾರೆ.

ಟೆನಿಸ್: ಶ್ರೀನಿಕೇತ್, ಕೃಷ್ ಅಜಯ್, ತನ್ವಿ ಫೈನಲ್ ಪ್ರವೇಶ

ಪ್ರಶಸ್ತಿ ಸುತ್ತಿಗೆ ವನ್ಯಾ

ಪ್ರಜಾವಾಣಿ ವಾರ್ತೆ

ವನ್ಯಾ ಶ್ರೀವಾಸ್ತವ್

ಬೆಂಗಳೂರು: ಪ್ರಬಲ ಪೈಪೋಟಿಯಲ್ಲಿ ಅಗ್ರ ಶ್ರೇಯಾಂಕಿತೆ ಗಗನಾ ಮೋಹನ್ ಕುಮಾರ್ ಅವರನ್ನು ಮಣಿಸಿದ ವನ್ಯಾ ಶ್ರೀವಾಸ್ತವ್ ಕೆಎಸ್‌ಎಲ್‌ಟಿಎ–ಎಐಟಿಎ ಆಯೋಜಿಸಿರುವ 16 ವರ್ಷದೊಳಗಿನವರ ತತ್ವಂ ಜೂನಿಯರ್ ಟೆನಿಸ್ ಟೂರ್‌ನ ಬಾಲಕಿಯರ ವಿಭಾಗದ ಫೈನಲ್ ಪ್ರವೇಶಿಸಿದರು.

ಮೊದಲ ಎರಡು ಸೆಟ್‌ಗಳ ಪೈಕಿ ಉಭಯ ಆಟಗಾರ್ತಿಯರು ತಲಾ ಒಂದೊಂದನ್ನು ಗೆದ್ದುಕೊಂಡರು. ನಿರ್ಣಾಯಕ ಸೆಟ್‌ನಲ್ಲಿ ವನ್ಯಾ 3–5ರ ಹಿನ್ನಡೆಯಲ್ಲಿದ್ದಾಗ ಎದುರಾಳಿ ಸುಲಭ ಗೆಲುವು ಸಾಧಿಸಿ ಪ್ರಶಸ್ತಿ ಸುತ್ತು ಪ್ರವೇಶಿಸುತ್ತಾರೆ ಎಂದೆನಿಸಿತ್ತು. ಆದರೆ ಕೆಚ್ಚೆದೆಯಿಂದ ಹೋರಾಡಿದ ವನ್ಯಾ ಸತತ ನಾಲ್ಕು ಗೇಮ್‌ಗಳನ್ನು ಗೆದ್ದು ಅಂತಿಮ ಫೈನಲ್‌ಗೆ ಲಗ್ಗೆ ಇರಿಸಿದರು.

ಫ್ರ್ಯಾಂಕ್ ಅಂಥೋಣಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ, 14 ವರ್ಷದ ವನ್ಯಾ ಮೊದಲ ಸೆಟ್‌ನಲ್ಲಿ 6–2ರ ಜಯ ಗಳಿಸಿದ್ದರು.

ಎರಡನೇ ಸೆಟ್ 6–1ರಲ್ಲಿ ಗಗನಾ ಗೆದ್ದಿದ್ದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಶ್ರೀ ತನ್ವಿ ದಾಸರಿ 6-4, 6-1ರಲ್ಲಿ ಆನ್ವಿ ಪುನಗಂಟಿ ಎದುರು ಗೆದ್ದರು. ಸಿಂಗಲ್ಸ್‌ನಲ್ಲಿ ಪರಸ್ಪರ ಕಾದಾಡಿದ ವನ್ಯಾ ಮತ್ತು ಗಗನಾ ಬಾಲಕಿಯರ ಡಬಲ್ಸ್‌ನಲ್ಲಿ ಜೊತೆಗೂಡಿ ಫೈನಲ್ ಪ್ರವೇಶಿಸಿದರು. 6-3, 6-2ರಲ್ಲಿ ಅವರು ಉಮಾಮ್ ಅಹಮ್ಮದ್ ಮತ್ತು ಮಹಿಕಾ ರೆಡ್ಡಿ ವಿರುದ್ಧ ಗೆಲುವು ಸಾಧಿಸಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಹರ್ಷಿಣಿ ಮತ್ತು ದಿಶಾ ಖಂಡೋಜಿ ಜೋಡಿ ತನಿಷ್ಕಾ ಕಣ್ಣನ್ ಮತ್ತು ಕಾವ್ಯಾ ಸರವಣನ್ ವಿರುದ್ಧ 6-3, 6-1ರಲ್ಲಿ ಜಯ ಸಾಧಿಸಿದರು.

ಶ್ರೀನಿಕೇತ್-ಕೃಷ್ ಫೈನಲ್ ಪೈಪೋಟಿ: ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಶ್ರೀನಿಕೇತ್ ಕಣ್ಣನ್ ಮತ್ತು ಕೃಷ್ ಅಜಯ್ ತ್ಯಾಗಿ ಫೈನಲ್‌ನಲ್ಲಿ ಸೆಣಸುವರು. ದೇವ್ ಶಿವಶಂಕರ್ ಎದುರು ಶ್ರೀನಿಕೇತ್ 2-6, 6-3, 6-2ರಲ್ಲಿ ಜಯ ಗಳಿಸಿದರೆ ಸೆಹಜ್ ಸಿಂಗ್ ಪವಾರ್ ಎದುರು ಕೃಷ್ 7-5, 2-6, 7-5ರಲ್ಲಿ ಗೆದ್ದರು.

ಬಾಲಕರ ಡಬಲ್ಸ್‌ನಲ್ಲಿ ಅನೂಪ್ ಕೇಶವಮೂರ್ತಿ ಮತ್ತು ಕೃಷ್ ಅಜಯ್ 2-6, 6-0 (10-4)ರಲ್ಲಿ ದೇವ್ ಶಿವಶಂಕರ್ ಮತ್ತು ಶಿವಪ್ರಸಾದ್ ಜೋಡಿಯನ್ನು ಮಣಿಸಿದರೆ ಜೇಸನ್ ಮೈಕಲ್ ಡೇವಿಡ್ ಮತ್ತು ಶ್ರೀನಿಕೇತ್ ಕಣ್ಣನ್ 6-2, 6-2ರಲ್ಲಿ ಪ್ರಕಾಶ್ ಮತ್ತು ಕುಶಲ್ ವಿರುದ್ಧ ಜಯ ಗಳಿಸಿದರು.

ಫುಟ್‌ಬಾಲ್: ವಿಕ್ಟೋರಿಯಾಗೆ ಭರ್ಜರಿ ಜಯ

ಬೆಂಗಳೂರು: ವಿಕ್ಟೋರಿಯಾ ಎಫ್‌ಸಿ ಮತ್ತು ಬೆಂಗಳೂರು ಪ್ಯಾಂಥರ್ಸ್ ಎಫ್‌ಸಿ ತಂಡಗಳು ಕೆಎಸ್‌ಎಫ್‌ಎ ಮಹಿಳೆಯರ 'ಎ' ಡಿವಿಷನ್ ಸೆವೆನ್ ಎ ಸೈಡ್ ಫುಟ್‌ಬಾಲ್ ಲೀಗ್‌ನಲ್ಲಿ ಭರ್ಜರಿ ಜಯ ಗಳಿಸಿದವು. ವಿಕ್ಟೋರಿಯಾ ಎಫ್‌ಸಿ ತಂಡ 9–0ಯಿಂದ ಬಿಟಿಎಂ ಎಫ್‌ಸಿಯನ್ನು ಮಣಿಸಿತು. ಬೆಂಗಳೂರು ಪ್ಯಾಂಥರ್ಸ್ 7–0ಯಿಂದ ಜಿಆರ್‌ಕೆ ಗರ್ಲ್ಸ್ ಎಫ್‌ಸಿಯನ್ನು ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಸಾಯಿ ಸ್ಪೋರ್ಟ್ಸ್ ತಂಡ 5–0 ಗೋಲುಗಳಿಂದ ಬೆಂಗಳೂರು ಕೆಥೋಲಿಕ್ ಎಫ್‌ಸಿಯನ್ನು ಮಣಿಸಿತು.

ಪಾಸ್ ಎಫ್‌ಸಿ 5–0ಯಿಂದ ಗಾರ್ಡನ್ ಸಿಟಿ ತಂಡವನ್ನು ಸೋಲಿಸಿತು. ರಫಿಯಾ ಹ್ಯಾಟ್ರಿಕ್ ಗೋಲು ಗಳಿಸಿ ಮಿಂಚಿದರು.

ಪೆಂಕಾಕ್ ಸಿಲಟ್: ರಾಜ್ಯಕ್ಕೆ 19 ಪದಕ

ಬೆಂಗಳೂರು: ಕರ್ನಾಟಕ ತಂಡವು ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ನಡೆದ ರಾಷ್ಟ್ರಮಟ್ಟದ ಪೆಂಕಾಕ್ ಸಿಲಟ್ ಟೂರ್ನಿಯಲ್ಲಿ ಎರಡು ಚಿನ್ನ ಸೇರಿದಂತೆ ಒಟ್ಟು 19 ಪದಕಗಳನ್ನು ಗೆದ್ದುಕೊಂಡಿದೆ.

ಒಂಬತ್ತು ಬೆಳ್ಳಿ ಹಾಗೂ ಎಂಟು ಕಂಚಿನ ಪದಕಗಳು ಕರ್ನಾಟಕ ತಂಡಕ್ಕೆ ಒಲಿದಿವೆ.

ಟಂಡಿಂಗ್ ವಿಭಾಗದಲ್ಲಿ ಅನುಷಾ ಎಂ. ಹಾಗೂ ವೈ. ಸಮೀಕ್ಷಾ ರೆಡ್ಡಿ ಚಿನ್ನಕ್ಕೆ ಕೊರಳೊಡ್ಡಿದರು.

ಪದಕ ಗೆದ್ದವರು: ಪ್ರೀ ಟೀನ್: ಟಂಗಲ್ ವಿಭಾಗ: ವಿವೇಕ್ ಎಸ್.ಎಚ್. ಆರಾಧ್ಯ (ಕಂಚು); ಗಂಡಾ ವಿಭಾಗ: ಸಾನ್ವಿಕ್ (ಕಂಚು), ಶ್ರೇಯಸ್ ಗೌಡ ಪಿ. (ಕಂಚು), ಟಂಡಿಂಗ್ ವಿಭಾಗ: ಅನುಷಾ ಎಂ. (ಚಿನ್ನ).

ಸಬ್‌ಜೂನಿಯರ್: ರೇಗು ವಿಭಾಗ: ಜಾಹ್ನವಿ, ಕೀರ್ತನಾ, ಹೆಫ್ಸಿಬಾ ಡಿ. (ಮೂವರು ಬೆಳ್ಳಿ), ಟಂಡಿಂಗ್ ವಿಭಾಗ: ವೈ. ಸಮೀಕ್ಷಾ ರೆಡ್ಡಿ (ಚಿನ್ನ), ಜಾಹ್ನವಿ (ಕಂಚು), ಆದಿತ್ಯ ಎಂ. (ಕಂಚು). ಗಂಡಾ ವಿಭಾಗ: ಓಂ ಪ್ರಕಾಶ್ ಹಾಗೂ ಆದಿತ್ಯ ಎಂ (ಇಬ್ಬರೂ ಕಂಚು).

ಜೂನಿಯರ್:ಗಂಡಾ ವಿಭಾಗ: ಶಿವಾನಿ ಬಾಯಿ ಡಿ. ಹಾಗೂ ಶ್ರೀ ವಿದ್ಯಾ (ಇಬ್ಬರೂ ಬೆಳ್ಳಿ). ಟಂಡಿಂಗ್: ಮನೋಜ್ ಎಂ. (ಬೆಳ್ಳಿ), ರೇಗು: ಸಿದ್ಧಾರ್ಥ್ ಪಿ. (ಬೆಳ್ಳಿ), ರೋಹನ್ ಟಿ. (ಬೆಳ್ಳಿ), ಸ್ಟಿಫನ್ ಗೆರಾಲ್ಡ್ ಜೆ. (ಬೆಳ್ಳಿ).

ಸೀನಿಯರ್: ಟಂಡಿಂಗ್: ಅನಿಲ್ ಕುಮಾರ್ ಜಿ.ಎಚ್. (ಕಂಚು).